ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 15 ಶುಕ್ರವಾರ 2025

₹4

ಸಂಪುಟ: 46 | ಸಂಚಿಕೆ: 120 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com











ಮೈಸೂರು ಮಿತ್ರ

ಶುಕ್ರವಾರ 15 ಆಗಸ್ಟ್ 2025

ನಾಳೆ ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವ

ಮೈಸೂರು,ಆ.14(ಎಂಕೆ)–ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ವೃಂದಾವನ ಕೇಂದ್ರದ ವೇದಶ್ರೀ ಫೌಂಡೇಶನ್ ವತಿಯಿಂದ ಆ.16ರಂದು ವಿಜಯನಗರದ 3ನೇ ಹಂತದ ಎಸ್‌ಆರ್‌ಕೆ ಗ್ರ್ಯಾಂಡ್ಯೂರ್ ಕನ್ವೆನ್ಷನ್ ಸೆಂಟರ್‌ನಲ್ಲಿ 'ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವ' ಆಯೋಜಿಸಲಾಗಿದೆ ಎಂದು ವೃಂದಾವನ ಅಧ್ಯಕ್ಷ ರಾಧಾಕೃಷ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಅಂದು ಸಂಜೆ 5ರಿಂದ ರಾತ್ರಿ 9 ರವರೆಗೆ ಜನ್ಮಾಷ್ಟಮಿ ನಡೆಸಲಿದ್ದು, ಇದರ ಅಂಗವಾಗಿ ಮಕ್ಕಳಿಗಾಗಿ ಭಗವದ್ಗೀತೆ ತರಗತಿ ನಡೆಸಲಾಗುವುದು ಎಂದು ತಿಳಿಸಿದರು.

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಊತಣ ಕೂಟ ಆಯೋಜಿಸಲಾಗಿದೆ. ಉಯ್ಯಾಲೆ ಸೇವೆ, ಮಂಗಳಾರತಿ, ಮಧುರವಾದ ಕೀರ್ತನೆ, ಕೃಷ್ಣನ ಪ್ರಸಾದ, ಗೋಪಿ ಡಾಟ್ಸ್(ಮಕ್ಕಳಿಗೆ), ಕೃಷ್ಣನ ಅಭಿಷೇಕ, 56 ವಿವಿಧ ನೈವೇದ್ಯವನ್ನು ಏರ್ಪಡಿಸಲಾಗಿದ್ದು, ಆಗಮಿಸುವ ಎಲ್ಲಾ ಭಕ್ತಾದಿಗಳಿಗೂ ಉಚಿತ ಪ್ರಸಾದ ವಿತರಿಸಲಾಗುವುದು ಎಂದರು.

'ಅಂತರ ಧಾರ್ಮಿಕ' ಕಾರ್ಯಕ್ರಮ



ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಭಾರತೀಯ ಜೈಲು ಸಚಿವಾಲಯದ ಸಹಯೋಗದಲ್ಲಿ 'ಅಂತರ ಧಾರ್ಮಿಕ' ಕಾರ್ಯಕ್ರಮ ನಡೆಯಿತು. ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಅರಹಳಾನಂದಜೀ ವಿಶೇಷ ಉಪನ್ಯಾಸ ನೀಡಿದರು. ಕಾರಾಗೃಹ ಅಧೀಕ್ಷಕ ಶೇಷಮೂರ್ತಿ, ಕ್ರೈಸ್ತ ಧರ್ಮಗುರು ಅಲೆಕ್ಸ್ ಡೆನಿಯಲ್ ಇತರರಿದ್ದರು.



ಆರೋಗ್ಯ ತಪಾಸಣಾ ಶಿಬಿರ

ಮೈಸೂರಿನ ಜಯಲಕ್ಷ್ಮಿಪುರಂ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ಆಶಾ ಕಿರಣ ಆಸ್ಪತ್ರೆ ವೈದ್ಯರು ಜನರ ಆರೋಗ್ಯ ತಪಾಸಣೆ ನಡೆಸಿದರು.

ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿಗೆ ಆಗ್ರಹ

ಮೈಸೂರು, ಆ.14(ಎಂಕೆ)–ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿಗೊಳಿಸಬೇಕೆಂದು ಮಾದಿಗ ಸಂಘಟನೆಗಳ ಒಕ್ಕೂಟದ ಸಂಚಾಲಕ ಕೆ.ಪ್ರಸನ್ನ ಚಕ್ರವರ್ತಿ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ನಿವೃತ್ತ ನ್ಯಾ.ಹೆಚ್.ಎನ್. ನಾಗಮೋಹನ್‌ದಾಸ್ ಅವರ ನೇತೃತ್ವದಲ್ಲಿ ರಾಜ್ಯಾದ್ಯಂತ ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ ಸಂಬಂಧ ಸಮೀಕ್ಷೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಪರಿಶಿಷ್ಟ ಜಾತಿಯಲ್ಲಿ ಬರುವ ಎಲ್ಲಾ ಉಪ ಜಾತಿಗಳಿಗೂ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೊಟ್ಟ ಭರವಸೆಯಂತೆ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಜಾರಿ ಮಾಡಬೇಕು ಎಂದರು.

ಕೇವಲ 3 ತಿಂಗಳ ಅವಧಿಯಲ್ಲೆ ಸಮೀಕ್ಷೆ ನಡೆಸಿ ದತ್ತಾಂಶ ಪಡೆದು ತೆಲಂಗಾಣ, ಹರಿಯಾಣ, ಆಂಧ್ರಪ್ರದೇಶ ಸರ್ಕಾರಗಳು ಒಳಮೀಸಲಾತಿ ಜಾರಿಗೊಳಿಸುವ ಮೂಲಕ ತಮ್ಮ ಬದ್ಧತೆಯನ್ನು ಪ್ರದರ್ಶಿಸಿವೆ. ಅದೇ ಮಾದರಿಯಲ್ಲಿ ಕಾಂಗ್ರೆಸ್ ಸರ್ಕಾರವೂ ನಡೆದುಕೊಂಡು, ಒಳಮೀಸಲಾತಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಸಂಚಾಲಕ ಡಾ.ಮುರಡೀಪುರ ರವಿಕುಮಾರ್, ನಾರಾಯಣ ಗಾಂಧಿನಗರ, ಪುಟ್ಟಣ್ಣ ಸರಗೂರು, ಮಂಜುನಾಥ್ ತಿ.ನರಸೀಪುರ, ಶಂಕರ ಹಲಗಯ್ಯನಹುಂಡಿ ಉಪಸ್ಥಿತರಿದ್ದರು.

ಹೊಲೆಯ, ಮಾದಿಗ ಸಮುದಾಯಗಳಿಗೆ ಅನ್ಯಾಯವಾಗದಂತೆ ನ್ಯಾ.ನಾಗಮೋಹನ್‌ದಾಸ್ ಆಯೋಗದ

ಒಳ ಮೀಸಲಾತಿ ವರದಿ ಪರಿಷ್ಕರಿಸಿ ಜಾರಿಗೊಳಿಸಿ

●ಮಾಜಿ ಸಚಿವ ಎನ್.ಮಹೇಶ್ ಮೈಸೂರಲ್ಲಿ ಆಗ್ರಹ ●ವರದಿ ತಿರಸ್ಕರಿಸಿದರೆ ಹೊಲೆಯ, ಮಾದಿಗರ ನಡುವೆ ಸಂಘರ್ಷ ಉಂಟಾಗುತ್ತದೆ

ಮೈಸೂರು,ಆ.14(ಜಿಎ)–ಒಳ ಮೀಸಲಾತಿ ಜಾರಿ ಸಂಬಂಧ ನ್ಯಾ.ನಾಗಮೋಹನ್‌ದಾಸ್ ಆಯೋಗ ನೀಡಿರುವ ವರದಿಯನ್ನು ಹೊಲೆಯ, ಮಾದಿಗ ಸಮುದಾಯಗಳಿಗೆ ಯಾವುದೇ ರೀತಿಯಲ್ಲೂ ಅನ್ಯಾಯವಾಗದಂತೆ ಪರಿಷ್ಕರಿಸಿ ಜಾರಿಗೊಳಿಸಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಮಾಜಿ ಸಚಿವ ಎನ್.ಮಹೇಶ್ ಆಗ್ರಹಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾ.ನಾಗಮೋಹನ್‌ದಾಸ್ ಆಯೋಗವು 101 ಜಾತಿಗಳನ್ನು ಗುರುತಿಸಿ, ಅವುಗಳನ್ನು ಐದು ವಿಭಾಗಗಳನ್ನಾಗಿ ಮಾಡಿ, ಮೀಸಲಾತಿಯನ್ನು ಹಂಚಿಕೆ ಮಾಡಿದೆ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂಬುದು ನಮ್ಮ ಬೇಡಿಕೆಯಾಗಿತ್ತು. ಅದರಂತೆ ಆಯೋಗವು ಮೀಸಲಾತಿಯನ್ನು ನಿಗದಿಪಡಿಸಿದೆ. ಆದರೆ ಹೊಲೆಯ ಸಮುದಾಯಕ್ಕೆ ಸೇರಿದ ಒಂದು ವಿಭಾಗವನ್ನು ಪ್ರತ್ಯೇಕವಾಗಿಟ್ಟಿದೆ. ಅದಕ್ಕೆ ಶೇ.1ರಷ್ಟು ಮೀಸಲಾತಿಯನ್ನು ನಿಗದಿಪಡಿಸಿದ್ದು, ಹೊಲೆಯ ಸಮುದಾಯಕ್ಕೆ ಶೇ.5ರಷ್ಟು ಮೀಸಲಾತಿ, ಮಾದಿಗ ಸಮುದಾಯಕ್ಕೆ ಶೇ.6ರಷ್ಟು ಮೀಸಲಾತಿಯನ್ನು ನಿಗದಿಪಡಿಸಿದೆ. ನಮ್ಮ ಹೊಲೆಯ ಸಮುದಾಯಕ್ಕೆ ಇದರಿಂದಾಗಿ ಅನ್ಯಾಯವಾಗುತ್ತದೆ ಎಂದರು.

ನಮ್ಮ ಸಮುದಾಯಕ್ಕೆ ಸೇರಿದವರನ್ನು ಪ್ರತ್ಯೇಕ ಮಾಡಿರುವುದು ಸರಿಯಲ್ಲ. ಅವರನ್ನೂ ನಮ್ಮ ಸಮುದಾಯಕ್ಕೆ ಸೇರಿಸಿ, ಮೀಸಲಾತಿ ಪ್ರಮಾಣವನ್ನು ಶೇ.6ಕ್ಕೆ ನಿಗದಿಪಡಿಸಬೇಕು. ವಿಭಾಗವನ್ನು ಐದರಿಂದ ನಾಲ್ಕಕ್ಕೆ ಇಳಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ಈ ರೀತಿ ನಾಗಮೋಹನದಾಸ್ ಅವರ ವರದಿಯನ್ನು ಪರಿಷ್ಕರಣೆ ಮಾಡುವುದರಿಂದ ದಲಿತ ಸಮುದಾಯದ ಸಹೋದರರಂತಿರುವ ಹೊಲೆಯ ಹಾಗೂ ಮಾದಿಗರಿಗೆ ಮೀಸಲಾತಿಯಲ್ಲಿ ಯಾವುದೇ ಅನ್ಯಾಯವಾಗುವುದಿಲ್ಲ. ಎರಡು ಸಮುದಾಯಕ್ಕೂ ಸಮಾನ ಮೀಸಲಾತಿ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಕೂಡಲೇ ರಾಜ್ಯ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು, ಸಂಬಂಧಿಸಿದ ಅಧಿಕಾರಿಗಳು ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ನಾಗಮೋಹನದಾಸ್ ಅವರ ವರದಿಯನ್ನು ಪರಿಷ್ಕರಿಸುವ ಕೆಲಸವನ್ನು ಮಾಡಬೇಕು. ಸದ್ಯದಲ್ಲೇ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆಯುವ ಸಚಿವ ಸಂಪುಟ ಸಭೆಗೆ ಪರಿಷ್ಕೃತ ವರದಿಯನ್ನು ಮಂಡಿಸಬೇಕು. ಅಲ್ಲಿ ಚರ್ಚಿಸಿದ ಬಳಿಕ ವರದಿಯನ್ನು ಜಾರಿಗೊಳಿಸಬೇಕು ಎಂದು ಎನ್.ಮಹೇಶ್ ಒತ್ತಾಯಿಸಿದರು.

ನಾವು ನಾಗಮೋಹನ ದಾಸ್ ಅವರ ವರದಿ ಜಾರಿಗೆ ವಿರೋಧ ಮಾಡುತ್ತಿಲ್ಲ. ಬದಲಾಗಿ ವರದಿಯನ್ನು ಪರಿಷ್ಕರಿಸಿ ಎಂದಷ್ಟೇ ಕೇಳುತ್ತಿದ್ದೇವೆ. ಹಾಗಾಗಿ ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ನಾಗಮೋಹನ ದಾಸರ ವರದಿಯನ್ನು ತಿರಸ್ಕರಿಸಬಾರದು. ಒಂದು ವೇಳೆ ತಿರಸ್ಕರಿಸಿದರೆ ಹೊಲೆಯ–ಮಾದಿಗರ ನಡುವೆ ಒಳ ಸಂಘರ್ಷವಾಗಿ ಬೀದಿಗೆ ಬರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ರಾಜ್ಯ ಸರ್ಕಾರ ಈ ವಿಚಾರದಲ್ಲಿ ಒಡೆದಾಳುವ ನೀತಿಯನ್ನು ಅನುಸರಿಸದೆ, ಎರಡು ಸಮುದಾಯಗಳಿಗೂ ಸಮಾಧಾನ, ನ್ಯಾಯ ಸಿಗುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎನ್.ಮಹೇಶ್ ಮಾತನಾಡಿದರು.

ಹೊಲೆಯರು, ಮಾದಿಗರನ್ನು ತುಳಿದು ಎಲ್ಲಾ ರೀತಿಯಿಂದಲೂ ಮೇಲಕ್ಕೆ ಬಂದಿದ್ದಾರೆ ಎಂಬ ಆರೋಪವಿದೆ. ಇದು ಶುದ್ಧ ಸುಳ್ಳು. ಸ್ವಾತಂತ್ರ್ಯ ಪೂರ್ವದಲ್ಲೇ ಮೈಸೂರು ಸಂಸ್ಥಾನವನ್ನಾಳಿದ ಮಹಾರಾಜರು ಶೋಷಿತ ಸಮುದಾಯಗಳಿಗೆ 800 ಶಾಲೆಗಳನ್ನು ತೆರೆದಿದ್ದು, ಆಗ ಹೊಲೆಯರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ, ಶಿಕ್ಷಣ ಕೊಡಿಸಿದರು. ಸ್ವಾತಂತ್ರ್ಯ ಬಂದ ನಂತರ ಸಂವಿಧಾನದಡಿ ನೀಡಲಾಗಿರುವ ಮೀಸಲಾತಿಯನ್ನು ಉಪಯೋಗಿಸಿಕೊಂಡು ಸರ್ಕಾರಿ ನೌಕರಿ, ಹುದ್ದೆಗಳನ್ನು ಪಡೆದಿದ್ದಾರೆ. ಅಲ್ಲದೇ ಉಳುವವನೇ ಭೂಮಿ ಒಡೆಯ ಜಾರಿಯಾದಾಗ, ಅದರ ಫಲವನ್ನು ಹೆಚ್ಚಾಗಿ ಪಡೆದು ಭೂಮಿ ಮಾಲೀಕರಾಗಿದ್ದಾರೆ. ಹೀಗೆ ದೊರೆತ ಎಲ್ಲಾ ಅವಕಾಶಗಳನ್ನು ಹೊಲೆಯ ಸಮುದಾಯದವರು ಬಳಸಿಕೊಂಡು, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮೇಲಕ್ಕೆ ಬಂದು ಉತ್ತಮವಾದ ಜೀವನ ನಡೆಸುತ್ತಿದ್ದಾರೆ ಎಂದು ಎನ್.ಮಹೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಎನ್. ಸುಬ್ಬಣ್ಣ, ಎಸ್.ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಪರಮಾನಂದ್, ಎಸ್.ಸಿ ಮೋರ್ಚಾ ನಗರ ಅಧ್ಯಕ್ಷ ಶೈಲೇಂದ್ರ, ಗ್ರಾಮಾಂತರ ಎಸ್.ಸಿ ಮೋರ್ಚಾ ಅಧ್ಯಕ್ಷ ಅನಿಲ್‌ಕುಮಾರ್, ಎಸ್.ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರಿಯಪ್ಪ, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಮೈಗ್ರೇನ್‌ಗೆ ಪರಿಹಾರ–ಆಕ್ಯುಪಂಕ್ಚರ್ ಚಿಕಿತ್ಸೆ, ಯಾವುದೇ ತರಹದ ತಲೆನೋವಿಗೆ, ಆರ್ಥರೈಟಿಸ್‌ಗೆ, ಹೈಪೋಥೈರಾಯ್ಡಿಸಮ್, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಸಂಚಲನ, ಮೈಸೂರು, ರಂಗ ರಥ, ಬೆಂಗಳೂರು:** ನಟನಾಭ್ಯಾಸ ಶಿಬಿರ. ಶಿಬಿರದ ನಿರ್ದೇಶಕರು: ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್. ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ, ಬೆಳಗ್ಗೆ 6.30ರಿಂದ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ. ಬೆಳಗ್ಗೆಯಿಂದ.

■ **ಪುರಿ ಜಗನ್ನಾಥ ಕಲ್ಚರಲ್ ಅಂಡ್ ವೆಲ್‌ಫೇರ್ ಟ್ರಸ್ಟ್:** ಜಗನ್ನಾಥ ದೇವಸ್ಥಾನದ ವಾರ್ಷಿಕೋತ್ಸವ, ಬೆಳಗ್ಗೆ 9 ರಿಂದ ಕಳಶ ಯಾತ್ರೆ, ನಾರಾಯಣ ಉಪಚಾರ ಪೂಜಾ, ಪ್ರಸಾದ ವಿನಿಯೋಗ, ಗೀತ ಯಜ್ಞ, ಕೃಷ್ಣ ಅಭಿಷೇಕಮ್, ಪ್ರಸಾದ ಸೇವಾ, ಸ್ಥಳ: ಪ್ರಭು ಜಗನ್ನಾಥ ದೇವಸ್ಥಾನ, ವಿದ್ಯಾರಣ್ಯಪುರಂ ಮುಖ್ಯ ರಸ್ತೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಇಸುಬು ರೋಗ ಮತ್ತು ಹುಳಕಡ್ಡಿ, ಬೆರಳು ಸಂದಿಯ ಫಂಗಲ್ ಇನ್ಫೆಕ್ಷನ್, ಕಿಟಿಬ ಕುಷ್ಠಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ:** ವೈ.ಪಾರ್ಥನಾರಾಯಣ ಪಂಡಿತ್–ಜೀವನ ಚರಿತ್ರೆ ಗ್ರಂಥ ಲೋಕಾರ್ಪಣೆ, ಮುಖ್ಯ ಅತಿಥಿಗಳು: ಗ್ರಂಥ ಕರ್ತೃ ಡಾ.ಪಿ.ಸತ್ಯನಾರಾಯಣ ಭಟ್, ವಿ.ಪ್ರಕಾಶ್, ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದ ಗೌಡ, ಆಯುರ್ವೇದ ಅಕಾಡೆಮಿ ಅಧ್ಯಕ್ಷ ಡಾ. ಜಯಪ್ರಕಾಶ್ ನಾರಾಯಣ್, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್:** ಉದ್ಘಾಟನಾ ಸಮಾರಂಭ, ಸಾಧಕರಿಗೆ ಪ್ರಶಸ್ತಿ ಪ್ರದಾನ, ಕ್ರೀಡಾ ವಿಜೇತರಿಗೆ ಬಹುಮಾನ ವಿತರಣೆ, ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ : ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಡಾ.ನಿಶ್ಚಲಾನಂದನಾಥ ಸ್ವಾಮೀಜಿ, ಶ್ರೀ ಮುಕ್ತಿದಾನಂದ ಸ್ವಾಮೀಜಿ ಮಹಾರಾಜ್, ಶ್ರೀ ಕಾಗಿನೆಲೆ ಶಿವಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಚಿವ ಕೆ.ವೆಂಕಟೇಶ್, ಕುವೆಂಪು ಸಾಂಸ್ಕೃತಿಕ ಪ್ರಶಸ್ತಿ ಪ್ರದಾನ ಮಾಡುವವರು: ಶಾಸಕ ಜಿ.ಟಿ.ದೇವೇಗೌಡ, ಪ್ರಶಸ್ತಿ ಪುರಸ್ಕೃತರು: ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಗೋಪಾಲಗೌಡ, ಸಾಹಿತಿ ಟಿ.ತಿಮ್ಮೇಗೌಡ, ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ನಿವೃತ್ತ ಅಧೀನ ಕಾರ್ಯದರ್ಶಿ ಎಂ.ಕೆ.ವೆಂಕಟರಾಮು; ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ರಾಮು, ಸ್ಥಳ: ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ, ಕುವೆಂಪುನಗರ, ಸಂಜೆ 4.30ಕ್ಕೆ.



ಇಂದಿನ ಪಂಚಾಂಗ

15.08.2025 ಶುಕ್ರವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025 ರಿಂದ 16.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಶೃತಿಮಂಜರಿ ಫೌಂಡೇಷನ್:** ಶ್ರಾವಣ ಯುವ ಸಂಗೀತೋತ್ಸವ, ಉದ್ಘಾಟನೆ: ಕರ್ನಾಟಕ ಬ್ಯಾಂಕ್ ಎಜಿಎಂ ಟಿ.ಆರ್.ಅರುಣ್, ಅಧ್ಯಕ್ಷತೆ: ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಅಧ್ಯಕ್ಷ ಎಂ.ದೇವರಾಜು, ವಿದ್ವಾನ್ ಜಿ.ಕೆ. ಮನಮೋಹನ್ ಕೃಷ್ಣ ಅವರಿಂದ ಗಾಯನ, ವಿದ್ವಾನ್ ವೈಭವ್ ರಮಣಿ–ವಯೋಲಿನ್, ವಿದ್ವಾನ್ ಅನಿರುದ್ಧ ಎಸ್. ಭಟ್–ಮೃದಂಗ, ವಿದುಷಿ ಭಾಗ್ಯಲಕ್ಷ್ಮಿ ಕೃಷ್ಣ–ಮೋರ್ಚಿಂಗ್, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ಪ್ರಾಧ್ಯಾಪಕ ಡಾ.ಬಿ.ವಿ. ವಸಂತಕುಮಾರ್‌ರಿಂದ ಪ್ರವಚನ, ಗಮಕ ವಿದ್ವಾನ್ ಕೃ.ರಾಮಚಂದ್ರರಿಂದ ವಾಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ

■ **ಜಿಪಿಐಇಆರ್ ರಂಗ ತಂಡ:** ಸಂಜೆ 6ರಿಂದ 31ನೇ ವಾರ್ಷಿಕೋತ್ಸವದ ಅಂಗವಾಗಿ ಶ್ರಾವಣ ರಂಗೋತ್ಸವ, ಉದ್ಘಾಟನೆ: ಸಂಗೀತ ನಿರ್ದೇಶಕ ಡಾ.ಹಂಸಲೇಖ, ಮುಖ್ಯ ಅತಿಥಿಗಳು: ಶಾಸಕ ಕೆ.ಹರೀಶ್‌ಗೌಡ, ಚಿತ್ರನಟಿ ರಿಷಿ, ಹಿರಿಯ ಕಲಾವಿದೆ ಶ್ರೀಮತಿ ಗೀತಾ ಮೋಂಟಡ್ಕ, ಅಧ್ಯಕ್ಷತೆ: ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ; ಬೆಂಗಳೂರಿನ ರಂಗಪಯಣ ಕಲಾವಿದರಿಂದ ಹೆಸರೆ ಇಲ್ಲದವರು ನಾಟಕ ಪ್ರದರ್ಶನ, ನಿರ್ದೇಶನ : ರಾಜಗುರು ಹೊಸಕೋಟೆ, ಸ್ಥಳ: ಕಿರು ರಂಗಮಂದಿರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ–ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ: ಡಾ.ಎಂ.ಎನ್. ಚಿಕ್ಕಮಾದು, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ.ಎನ್.ಮಂಜುನಾಥ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ–ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಭಾರತೀಯ ವಾಯುಸೇನಾ ಪಡೆಯ ನಿವೃತ್ತ ಸ್ಕ್ವಾಡ್ರನ್ ಲೀಡರ್ ಪರೀಧಿಸಿಂಗ್ ಕಾರ್ತಿಕ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 4.30 ಪ್ರಾಯೋಜಿತ ಕಾರ್ಯ ಕ್ರಮ–ಆಕಾಶವಾಣಿ ಕಿಸಾನ್–ಬದಲಾಗುತ್ತಿರುವ ಭಾರತದ ಹೆಮ್ಮೆ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ, 6.50 ಕೃಷಿರಂಗ – ಪರಾಗ–ಬೇಸಾಯದ ಬದುಕು ಸರಾಗ, 7.00 ಸ್ವಾತಂತ್ರ್ಯೋತ್ಸವ ಮುನ್ನ ದಿನದಂದು ಭಾರತದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪತಿ ಮುರ್ಮು ಅವರು ದೇಶವನ್ನು ಉದ್ದೇಶಿಸಿ ಮಾಡುವ ಪ್ರಸಾರ ಭಾಷಣದ ಕನ್ನಡ ಅನುವಾದದ ಮರು ಪ್ರಸಾರ, 7.45 ಕನ್ನಡದಲ್ಲಿ ಭಾಷಣ, 8.15 ರಸಮಂಜರಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

79ನೇ ಸ್ವಾತಂತ್ರ್ಯ ದಿನಾಚರಣೆ

■ **ರಾಮಕೃಷ್ಣ ವಿದ್ಯಾಕೇಂದ್ರ, ಆರ್‌ಕೆವಿಕೆ ಸಂಯುಕ್ತ ಪದವಿಪೂರ್ವ ಕಾಲೇಜು :** 79ನೇ ಸ್ವಾತಂತ್ರ್ಯ ದಿನಾಚರಣೆ, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು: ಏರ್ ಕಮಾಂಡರ್ ಕೃಷ್ಣ ಅಯ್ಯಂಗಾರ್ ರವಿ, ಸ್ಥಳ: ಶಾಲಾ ಆವರಣ, ಬೆಳಗ್ಗೆ 8ಕ್ಕೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಸ್ವಾತಂತ್ರ್ಯ ದಿನಾಚರಣೆ, ಅಧ್ಯಕ್ಷತೆ: ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಮುಖ್ಯ ಭಾಷಣಕಾರರು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜಿ.ಹೇಮಂತಕುಮಾರ್, ಸ್ಥಳ: ಆಡಳಿತ ಭವನ ಮುಂಭಾಗ, ಕರಾಮುವಿವಿ, ಬೆಳಗ್ಗೆ 7.45ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ :** ಸ್ವಾತಂತ್ರ್ಯ ದಿನಾಚರಣೆ, ಸ್ಥಳ: ಕ್ರಾಫರ್ಡ್ ಭವನದ ಮುಂಭಾಗ, ಬೆಳಗ್ಗೆ 7.30ಕ್ಕೆ

■ **ಶ್ರೀ ನಟರಾಜ ಪ್ರತಿಷ್ಠಾನ:** ಸ್ವಾತಂತ್ರ್ಯ ದಿನಾಚರಣೆ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಧ್ವಜಾರೋಹಣ: ಗಾಂಧಿಮಾರ್ಗಿ ಡಾ.ಕೆ.ಟಿ.ವೀರಪ್ಪ ಸ್ಥಳ: ಕಾಲೇಜು ಒಳಾಂಗಣ, ಬೆಳಗ್ಗೆ 7.30ಕ್ಕೆ

■ **ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು:** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ : ಮಾಜಿ ಮೇಯರ್ ಶ್ರೀಮತಿ ಪುಷ್ಪಲತಾ ಜಗನ್ನಾಥ್, ಅಧ್ಯಕ್ಷತೆ : ಶ್ರೀಶೈಲ ರಾಮಣ್ಣವರ್, ಸ್ಥಳ: ಬಯಲು ರಂಗಮಂದಿರ, ಬೆಳಗ್ಗೆ 7.30ಕ್ಕೆ.

■ **ನೆರಳು ಚಾರಿಟಬಲ್ ಟ್ರಸ್ಟ್, ತಪೋನಂದನ ಉದ್ಯಾನವನ ಬಳಗ:** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ಮಾಜಿ ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಸಮಾಜ ಸೇವಕ ಡಾ.ಎನ್.ಗಂಗಾಧರಪ್ಪ, ಸ್ಥಳ: ತಪೋನಂದನ ಉದ್ಯಾನವನ, ಕುವೆಂಪುನಗರ, ಬೆಳಗ್ಗೆ 8ಕ್ಕೆ.

■ **ಹಿರಿಯ ಗೆಳೆಯರ ಬಳಗ:** ಸ್ವಾತಂತ್ರ್ಯೋತ್ಸವ, ಬೆಳಗ್ಗೆ 8.30ಕ್ಕೆ ಧ್ವಜಾರೋಹಣ: ಪ್ರೊ.ಎ.ನಾಗರಾಜು, ಸಂಜೆ 5ಕ್ಕೆ ಗಾಯಕ ಕೃಷ್ಣಮೂರ್ತಿ ಮತ್ತು ಸುಧೀಂದ್ರ ತಂಡದವರಿಂದ ರಸಮಂಜರಿ, ಸಂಜೆ 7ಕ್ಕೆ ವಿದುಷಿ ಎಸ್.ಎನ್. ಮೇಘನಾ ರಾವ್ ಅವರಿಂದ ನೃತ್ಯೋತ್ಸವ, ಸ್ಥಳ: ನಿವೇದಿತಾನಗರದ ಸುಬ್ಬರಾವ್ ಪಾರ್ಕ್, ಬೆಳಗ್ಗೆ 8.30ಕ್ಕೆ.

■ **ಜನಪದ ಸಾಹಿತ್ಯ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್:** ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಅಭಿನಂದನಾ ಸಮಾರಂಭ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

■ **ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳು:** ಸ್ವಾತಂತ್ರ್ಯೋತ್ಸವ, ಧ್ವಜಾರೋಹಣ: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಮುಖ್ಯ ಅತಿಥಿಗಳು: ಹುಬ್ಬಳ್ಳಿ ಕಾನೂನು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ.ಈಶ್ವರ್ ಭಟ್, ಸ್ಥಳ: ಶಿಕ್ಷಣ ಸಂಸ್ಥೆ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 8.30ಕ್ಕೆ

■ **ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯ:** 79ನೇ ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯ ಅಧ್ಯಕ್ಷ ಎಂ.ಪ್ರಫುಲ್ ಕುಮಾರ್, ಸ್ಥಳ: ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯ, ಎನ್.ಆರ್.ಮೊಹಲ್ಲಾ, ಬೆಳಗ್ಗೆ 8.30ಕ್ಕೆ.

■ **ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ :** ಸ್ವಾತಂತ್ರ್ಯೋತ್ಸವ ಮತ್ತು ತಿರಂಗಾ ಯಾತ್ರೆ, ಸ್ವಾತಂತ್ರ್ಯೋತ್ಸವ ಭಾಷಣ: ಎಐಸಿಸಿ ಕಾರ್ಯದರ್ಶಿ ಬಿ.ಎಂ.ಸಂದೀಪ್, ಧ್ವಜಾರೋಹಣ: ಶಾಸಕ ತನ್ವೀರ್ ಸೇಠ್, ಸ್ಥಳ: ರಾಮಸ್ವಾಮಿ ವೃತ್ತ, ಬೆಳಗ್ಗೆ 9ಕ್ಕೆ.

■ **ಜಿಲ್ಲಾಡಳಿತ :** ಸ್ವಾತಂತ್ರ್ಯೋತ್ಸವ ದಿನಾಚರಣೆ, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಧ್ವಜಾರೋಹಣ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ಸಚಿವ ಕೆ.ವೆಂಕಟೇಶ್, ಶಾಸಕರಾದ ಸಿ. ಅನಿಲ್‌ಕುಮಾರ್, ರಮೇಶ್ ಬಂಡಿಸಿದ್ದೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ.ಮಾನಸ, ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು: ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್, ಸ್ಥಳ: ಪಂಜಿನ ಕವಾಯತು ಮೈದಾನ, ಬೆಳಗ್ಗೆ 9ಕ್ಕೆ

■ **ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿ:** ಸ್ವಾತಂತ್ರ್ಯೋತ್ಸವ, ಧ್ವಜಾರೋಹಣ: ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್, ಮೌಲಾನಾ ಮುಫ್ತಿ ತಾಜುದ್ದೀನ್, ಸ್ಥಳ: ಜಿಲ್ಲಾ ವಕ್ಫ್ ಕಚೇರಿ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 9ಕ್ಕೆ.

■ **ದೀಪಾ ಶಿಕ್ಷಣ, ಸೇವಾ ಟ್ರಸ್ಟ್:** ಸ್ವಾತಂತ್ರ್ಯೋತ್ಸವ, ಮುಖ್ಯ ಅತಿಥಿಗಳು: ಎನ್.ತೇಜಸ್ವಿನಿ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಎಂ.ರಾಮಪ್ಪ, ಸ್ಥಳ: ದೀಪಾ ಶಾಲೆ ಆವರಣ, ಬೆಳಗ್ಗೆ 9ಕ್ಕೆ.

■ **ಬಿಜೆಪಿ ಯುವ ಮೋರ್ಚಾ:** ತಿರಂಗಾ ಬೈಕ್ ರ‍್ಯಾಲಿ, ಭಾಗಿ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಚಾಮುಂಡಿಪುರಂ ವೃತ್ತ, ಬೆಳಗ್ಗೆ 10.30ಕ್ಕೆ.

■ **ದೀಕ್ಷಿತ್ ಆರೋಗ್ಯ ಧಾಮ:** ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ, ಧ್ವಜಾರೋಹಣ: ಸಮಾಜ ಸೇವಕ ಡಾ.ಚಂದ್ರಶೇಖರ್, ಸ್ಥಳ: ದೀಕ್ಷಿತ್ ಆರೋಗ್ಯಧಾಮ, ವಿಜಯನಗರ 3ನೇ ಹಂತ, ಬೆಳಗ್ಗೆ 11ಕ್ಕೆ

■ **ಮೈಸೂರು ಹಿಮೋಫಿಲಿಯಾ ಸೊಸೈಟಿ :** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ಡಾ.ದಾಕ್ಷಾಯಿಣಿ, ಉಪಸ್ಥಿತರು: ಡಾ.ಮಲ್ಲಿಕಾ, ಶ್ರೀಮತಿ ನವೀನ್ ಕುಮಾರಿ, ಡಾ.ಶಶಿಧರ್, ಸ್ಥಳ: ಎಂಎಂಸಿಆರ್‌ಐ ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಜೆ.ಕೆ.ಮೈದಾನ, ಬೆಳಗ್ಗೆ 11.30ಕ್ಕೆ.

■ **ಭೂಮಿಕಾ ಅಸೋಸಿಯೇಟ್ಸ್ :** ಸ್ವಾತಂತ್ರ್ಯೋತ್ಸವ ಅಂಗವಾಗಿ ಗಾನಗಂಧ ವಿಶೇಷ ಸಂಗೀತ ಸಂಜೆ, ಕಲಾವಿದ ಮೈಸೂರು ಆನಂದ್ ಅವರಿಂದ ಹಾಸ್ಯ ಲಹರಿ, ಸ್ಥಳ: ಶ್ರೀ ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.15ಕ್ಕೆ

ಮೈಸೂರು ಹಾಗೂ ಸುತ್ತಮುತ್ತ ನಾಳೆ...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಮೈಗ್ರೇನ್‌ಗೆ ಪರಿಹಾರ–ಆಕ್ಯುಪಂಕ್ಚರ್ ಚಿಕಿತ್ಸೆ, ಯಾವುದೇ ತರಹದ ತಲೆನೋವಿಗೆ, ಆರ್ಥರೈಟಿಸ್‌ಗೆ, ಹೈಪೋಥೈರಾಯ್ಡಿಸಮ್, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಪುರಿ ಜಗನ್ನಾಥ ಕಲ್ಚರಲ್ ಅಂಡ್ ವೆಲ್‌ಫೇರ್ ಟ್ರಸ್ಟ್:** ಜಗನ್ನಾಥ ದೇವಸ್ಥಾನದ ವಾರ್ಷಿಕೋತ್ಸವ, ಬೆಳಗ್ಗೆ 9ರಿಂದ ಪೂಜಾ, ಅಭಿಷೇಕ, ಯಜ್ಞ, ಪೂರ್ಣಾಹುತಿ, ಪ್ರಸಾದ ಸೇವೆ, ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಪ್ರಭು ಜಗನ್ನಾಥ ದೇವಸ್ಥಾನ, ವಿದ್ಯಾರಣ್ಯಪುರಂ ಮುಖ್ಯ ರಸ್ತೆ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಶನೇಶ್ವರ ಸ್ವಾಮಿಯವರ ಶ್ರಾವಣ ಶನಿವಾರದ ಪೂಜಾ ಮಹೋತ್ಸವ, ಬೆಳಗ್ಗೆ 6ರಿಂದ ಕಳಸ ಸ್ಥಾಪನೆ, ಗಣಪತಿ ಪೂಜೆ, ಶ್ರೀ ಸ್ವಾಮಿಯವರಿಗೆ ಅಭಿಷೇಕ, ಸಹಸ್ರಾಮರ್ಚನೆ, ನವಗ್ರಹ ಅಷ್ಟೋತ್ತರ ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ಮಂಡಿ ಮೊಹಲ್ಲಾ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಇಸುಬು ರೋಗ ಮತ್ತು ಹುಳಕಡ್ಡಿ, ಬೆರಳು ಸಂದಿಯ ಫಂಗಲ್ ಇನ್ಫೆಕ್ಷನ್, ಕಿಟಿಬ ಕುಷ್ಠಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

ನಾಳಿನ ಪಂಚಾಂಗ

16.08.2025 ಶನಿವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025ರಿಂದ 16.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಶ್ರೀ ದೊಡ್ಡಮ್ಮತಾಯಿ ದೇವಸ್ಥಾನ, ಶ್ರೀ ದಂಡಮ್ಮತಾಯಿ ದೇವಸ್ಥಾನ :** ದೇವತಾ ಕಾರ್ಯಗಳು, ಸ್ಥಳ: ದೇವಸ್ಥಾನದ ಆವರಣ, ಅಶೋಕಪುರಂ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಶ್ರೀಮತಿ ಜಿ ಭಾಗ್ಯಲಕ್ಷ್ಮಿ, ಗೃಹಿಣಿ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು:** ಪದವೀಧರರ ದಿನಾಚರಣೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಧಾನ ಭಾಷಣ: ಸುಪ್ರೀಂಕೋರ್ಟ್ ನ್ಯಾಯಾಧೀಶ ಉಜ್ಜಲ್ ಭುಯಾನ್, ಅಧ್ಯಕ್ಷತೆ: ಹೈಕೋರ್ಟ್ ನ್ಯಾಯಾಧೀಶರಾದ ಶ್ರೀಮತಿ ಅನು ಶಿವರಾಮನ್, ಪ್ರತಿಜ್ಞಾವಿಧಿ ಬೋಧನೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಸ್ಥಳ: ಕಾಲೇಜು ಆವರಣ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್. ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ ವಿ. ಭಟ್, ಕೆ.ಪಿ. ರೇವತಿ ಹಾಗೂ ಪಿ. ಸುರಭಿ, ವ್ಯಾಖ್ಯಾನ–ಡಾ. ಎನ್.ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ –ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತ ದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ, 4.00 ನಾಟಕ–ಇಂಥವರೂ ಇದ್ದಾರೆ? ನಿರ್ಮಾಣ–ಉಮೇಶ್ .ಎಸ್.ಎಸ್., 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), ರೂಪಕ– ಶಿವಪುರದ ವೀರ, 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ –ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಗುಂಡ್ಲುಪೇಟೆ ತಾಲೂಕು ಬೇಗೂರು ಹೋಬಳಿ ಚಿಕ್ಕಹುಂಡಿ ಗ್ರಾಮದ ಸಿ.ಬಿ. ಲೋಕೇಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್. ಕೇಶವಮೂರ್ತಿ, 8.00 ಇಸ್ ಸಪ್ತಾಹ್ ಮೆ ಸಂಸದ್, 8.15 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಮಂಗಳಮ್ ಶಂಕರ್ – ಹಾಡುಗಾರಿಕೆ

■ **ಶ್ರೀ ಗೀತಾಪ್ರಚಾರಿಣೀ ಸಭಾ ಟ್ರಸ್ಟ್ :** ಶ್ರೀ ಕೃಷ್ಣ ಜನ್ಮಾಷ್ಟಮಿ ಪೂಜಾ ಮಹೋತ್ಸವ, ಸಂಜೆ 5.30ರಿಂದ ಸ್ವಾಮಿಗೆ ಅಭಿಷೇಕ, ಅಲಂಕಾರ, ಸಂಜೆ 6.30ರಿಂದ ಶ್ರೀ ವಿದ್ಯಾ ವಿಷ್ಣುಸಭಾ ಟ್ರಸ್ಟ್ ಇವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ರಾತ್ರಿ 8.15ರಿಂದ ಗೋಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.

■ **ಯೋಗಾನರಸಿಂಹಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ:** ಆಸ್ಥಾನ ವಿದ್ವಾನ್ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳ ವಿರಚಿತ ಧರ್ಮರಾಜ ರಾಜಸೂಯಯಾಗ ಅಥವಾ ಶಿಶುಪಾಲ ದಂತವಕ್ರರ ವಧೆ ಪೌರಾಣಿಕ ನಾಟಕ ಪ್ರದರ್ಶನ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಉದ್ಘಾಟನೆ: ಪ್ರೊ. ಭಾಷ್ಯಂ ಸ್ವಾಮೀಜಿ, ಮುಖ್ಯ ಅತಿಥಿಗಳು: ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಂಸದ ಯದುವೀರ್, ಶಾಸಕ ಡಾ.ಅಶ್ವಥ್ ನಾರಾಯಣ್, ಸ್ಥಳ: ಯೋಗಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ, ಪ್ರವಚನ. ಪ್ರಾಧ್ಯಾಪಕ ಡಾ.ಬಿ.ವಿ. ವಸಂತಕುಮಾರ್‌ರಿಂದ ಪ್ರವಚನ, ಗಮಕ ವಿದ್ವಾನ್ ಕೃ.ರಾಮಚಂದ್ರರಿಂದ ವಾಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಬುದ್ಧಿದಾನಂದ ಅವರಿಂದ ನಾರದ ಭಕ್ತಿ ಸೂತ್ರಗಳು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶೃತಿಮಂಜರಿ ಫೌಂಡೇಷನ್:** ಶ್ರಾವಣ ಯುವ ಸಂಗೀತೋತ್ಸವ, ವಿದುಷಿ ಐಶ್ವರ್ಯ ಮಣಿಕರ್ಣಿಕ ಅವರಿಂದ ವೀಣಾ ವಾದನ, ವಿದ್ವಾನ್ ಎ.ರಾಧೇಶ್–ಮೃದಂಗ, ವಿದ್ವಾನ್ ಆರ್. ಕಾರ್ತಿಕ್–ಖಂಜೀರಾ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.


■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ವಿಜೇತ ಸುಬ್ರಹ್ಮಣ ಕಬೆಕ್ಕೋಡು ಮತ್ತು ವೆಂಕಟ ಯಶಸ್ವಿ ಕಬೆಕ್ಕೋಡು ಅವರಿಂದ ದ್ವಂದ್ವ ಗಾಯನ, ಶ್ರೀರಾಮ ಕಾಂಚನ–ಪಿಟೀಲು, ಡಾ.ಅಕ್ಷಯ ನಾರಾಯಣ ಕಾಂಚನ–ಮೃದಂಗ, ಧೀಮಂತ ಭಟ್ಟ–ಘಟಂ, ಸ್ಥಳ: ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಶ್ರೀರಾಂಪುರ, ಸಂಜೆ 6 ರಿಂದ.

■ **ಜಿಪಿಐಇಆರ್ ರಂಗ ತಂಡ :** 31ನೇ ವಾರ್ಷಿಕೋತ್ಸವದ ಅಂಗವಾಗಿ ಶ್ರಾವಣ ರಂಗೋತ್ಸವ, ಜಿಪಿಐಇಆರ್ ರಂಗ ತಂಡದಿಂದ ವಾರ್ಡ್ ನಂ.6 ನಾಟಕ ಪ್ರದರ್ಶನ, ಸ್ಥಳ: ಕಿರುರಂಗಮಂದಿರ, ರಂಗಾಯಣ, ಸಂಜೆ 7ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಆಗಸ್ಟ್ 15 ಶುಕ್ರವಾರ 2025
ಸಂಪುಟ: 46 | ಸಂಚಿಕೆ: 120 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com



ಕಾನೂನು ಎಲ್ಲರಿಗೂ ಒಂದೇ...

ಮತ್ತೆ ಜೈಲು 'ದರ್ಶನ'

ಸುಪ್ರೀಂಕೋರ್ಟ್ ಆದೇಶದಂತೆ ದರ್ಶನ್, ಪವಿತ್ರಾ ಗೌಡ ಸೇರಿ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಎಲ್ಲಾ ಏಳು ಮಂದಿ ಆರೋಪಿಗಳ ಮತ್ತೆ ಬಂಧಿಸಿ, ಜೈಲಿಗಟ್ಟಿದ ಪೊಲೀಸರು


ದರ್ಶನ್ ತೂಗುದೀಪ


ಪವಿತ್ರಗೌಡಳನ್ನು ಪೊಲೀಸರು ಆಕೆಯ ಮನೆಯಲ್ಲೇ ಬಂಧಿಸಿ, ಕರೆದೊಯ್ಯುತ್ತಿರುವುದು.

ನವದೆಹಲಿ,ಆ.14(ಕೆಎಂಶಿ)–ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿಗಳಾದ ನಟ ದರ್ಶನ್, ನಟಿ ಪವಿತ್ರಾಗೌಡ ಹಾಗೂ ಇತರ ಐವರು ಆರೋಪಿಗಳಿಗೆ ಕೊನೆಗೂ ಜೈಲೇ ಗತಿಯಾಗಿದೆ.

ದರ್ಶನ್, ಪವಿತ್ರಾ ಗೌಡ ಸೇರಿದಂತೆ 7 ಮಂದಿಗೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಜಾಮೀನನ್ನು ಇಂದು ವಜಾಗೊಳಿಸಿರುವ ಸುಪ್ರೀಂಕೋರ್ಟ್, ಆರೋಪಿಗಳನ್ನು ಸಾಮಾನ್ಯ ಬಂಧಿಗಳಂತೆ ನೋಡಿಕೊಳ್ಳಬೇಕು. ಅವರಿಗೆ ವಿಶೇಷ ಸವಲತ್ತು ನೀಡುವ ಅಧಿಕಾರಿಗಳ ಮೇಲೆ ಮೊದಲು ಕ್ರಮ ಕೈಗೊಳ್ಳಬೇಕು ಎಂದು ಸರ್ವೋಚ್ಛ ನ್ಯಾಯಾಲಯ ಸ್ಪಷ್ಟ ಮಾತುಗಳಲ್ಲಿ ಸೂಚಿಸಿದೆ. ಮಾತ್ರವಲ್ಲ ಎಲ್ಲಾ ಆರೋಪಿಗಳನ್ನು ಬಂಧಿಸಿಯೇ ಕಾರಾಗೃಹಕ್ಕೆ ಕಳುಹಿಸಬೇಕು ಎಂಬುದಾಗಿ ▶ 10ನೇ ಪುಟಕ್ಕೆ


ಗುರುವಾರ ಪತ್ನಿ ವಿಜಯಲಕ್ಷ್ಮಿ ಅವರ ನಿವಾಸದಿಂದ ದರ್ಶನ್ ಬಂಧಿಸಿ, ಕರೆದೊಯ್ಯುತ್ತಿರುವುದು.

3ನೇ ಬಾರಿಗೆ ಪರಪ್ಪನ ಅಗ್ರಹಾರ ಜೈಲು ಪಾಲು

ಬೆಂಗಳೂರು, ಆ.14–ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ 7 ಆರೋಪಿಗಳ ಜಾಮೀನು ರದ್ದಾಗುತ್ತಿದ್ದಂತೆ ಎಲ್ಲಾ ಆರೋಪಿಗಳನ್ನು ಬಂಧಿಸಿ ಪೊಲೀಸರು ಪರಪ್ಪನ ಅಗ್ರಹಾರಕ್ಕೆ ಕಳುಹಿಸಿದ್ದಾರೆ. ನಟ ದರ್ಶನ್, ಪವಿತ್ರಾ ಗೌಡ, ಪ್ರದೂಷ್, ನಾಗರಾಜ್ ಹಾಗೂ ಲಕ್ಷ್ಮಣನನ್ನು ಬಂಧಿಸಿ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಗೆ ಕರೆತಂದರು. ಅಲ್ಲಿ ಆರೋಗ್ಯ ತಪಾಸಣೆ ಮಾಡಿಸಿ, ಕೋರಮಂಗಲದಲ್ಲಿರುವ 64ನೇ ಸಿಸಿಹೆಚ್ ಕೋರ್ಟ್‌ನ ನ್ಯಾಯಾಧೀಶರ ಮನೆಗೆ ಕರೆದೊಯ್ದು, ಜಡ್ಜ್ ಮುಂದೆ ಹಾಜರುಪಡಿಸಿದರು. ಈ ವೇಳೆ ಸುಪ್ರೀಂ ಕೋರ್ಟ್ ಜಾಮೀನು ರದ್ದುಪಡಿಸಿದ ಆದೇಶ ಪ್ರತಿಯನ್ನು ನ್ಯಾಯಾಧೀಶರಿಗೆ ಪೊಲೀಸರು ಸಲ್ಲಿಸಿ, ಆದೇಶ ಪಾಲಿಸಲಾಗಿದೆ ಎಂದು ಮಾಹಿತಿ ನೀಡಿದರು. ಬಳಿಕ ಆರೋಪಿಗಳ ಸರ್ಕಾರಿ ದಾಖಲೆಯನ್ನು ▶ 10ನೇ ಪುಟಕ್ಕೆ

ದರ್ಶನ್ ಜಾಮೀನು ರದ್ದು ಕೇಳಿ ರೇಣುಕಾಸ್ವಾಮಿ ಕುಟುಂಬ ಭಾವುಕ

ತೀರ್ಪು ಸಮಯದಲ್ಲಿ ಲಿಂಗಪೂಜೆಯಲ್ಲಿದ್ದ ತಂದೆ



ಚಿತ್ರದುರ್ಗ, ಆ.14– ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿರುವ ನಟ ದರ್ಶನ್ ಮತ್ತು ಡಿ ಗ್ಯಾಂಗ್ ವಿರುದ್ಧದ ಜಾಮೀನನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ. ದರ್ಶನ್ ಸೇರಿದಂತೆ ಏಳು ಆರೋಪಿಗಳ ಜಾಮೀನು ರದ್ದುಪಡಿಸಿರುವ ಸುಪ್ರೀಂ ಕೋರ್ಟ್ ತೀರ್ಪು ಹಿನ್ನೆಲೆಯಲ್ಲಿ ರೇಣುಕಾಸ್ವಾಮಿಯ ಕುಟುಂಬ ಭಾವುಕರಾಗಿ ಪ್ರತಿಕ್ರಿಯಿಸಿದೆ. ಕೋರ್ಟ್ ತೀರ್ಪು ವೇಳೆ ರೇಣುಕಾಸ್ವಾಮಿಯ ತಂದೆ ಕಾಶೀನಾಥಯ್ಯ ಲಿಂಗ ಪೂಜೆಯಲ್ಲಿದ್ದರು. ಮನೆ ಬಾಗಿಲು, ತುಳಸಿಗೆ ದೀಪ ಬೆಳಗಿ ನಮಸ್ಕರಿಸಿದರು. ತೀರ್ಪು ಹೊರ ಬಂದ ಸಮಯದಲ್ಲಿ ನಾನು ಎಂದಿನಂತೆ ಬೆಳಿಗ್ಗೆ 11 ಗಂಟೆಗೆ ಪೂಜೆಯಲ್ಲಿ ತೊಡಗಿಕೊಂಡಿದ್ದೆ. ಪತ್ನಿ ರತ್ನಪ್ರಭಾ ಈ ಸುದ್ದಿ ತಿಳಿಸಿದರು. ದರ್ಶನ್ ಜಾಮೀನು ರದ್ದು ವಿಚಾರವು ನನಗೆ ಮತ್ತಷ್ಟು ಭರವಸೆ ನೀಡಿದೆ. ಕಾನೂನು ಮತ್ತು ನ್ಯಾಯಾಂಗದ ಮೇಲೆ ನನಗೆ ಸಂಪೂರ್ಣ ನಂಬಿಕೆ ಇದೆ. ನನ್ನ ಮಗನ ಹತ್ಯೆಗೆ ನ್ಯಾಯ ದೊರಕುತ್ತದೆ ಎಂಬ ವಿಶ್ವಾಸ ಬಲವಾಗಿದೆ ಎಂದು ರೇಣುಕಾಸ್ವಾಮಿ ತಂದೆ ಕಾಶೀನಾಥಯ್ಯ ಪ್ರತಿಕ್ರಿಯಿಸಿದ್ದಾರೆ.

'ಮಿತ್ರ'ನ ಮಿಂಚು –ಸತೀಶ್ ಆಚಾರ್ಯ



ಶುಭಾಶಯಗಳು



ನಾಡಿನ ಸಮಸ್ತರಿಗೂ **ಸ್ವಾತಂತ್ರ್ಯೋತ್ಸವದ ಶುಭಾಶಯಗಳು**

ಬಿಡುವು

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 16–8–2025ರ ಶನಿವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.
–ವ್ಯವಸ್ಥಾಪಕರು



ನಕ್ಕರೆ ಅದೇ ಸ್ವರ್ಗ

ರಾತ್ರಿ ವೇಳೆ ಹಾಸಿಗೆಯಲ್ಲಿ ಗುಂಡ ಕುರ್ ಕುರ್ ಶಬ್ದ ಮಾಡುತ್ತಾ ಚಿಪ್ಸ್ ತಿನ್ನುತ್ತಿದ್ದ. ಮೊಬೈಲ್ ಟಾರ್ಚ್ ಮೂಲಕ ನೋಡಿದ ರಂಗ, ಚಿಪ್ಸ್ ಬೆಳಗ್ಗೆ ತಿನ್ನಬಹುದಿತ್ತಲ್ಲ. ಅಷ್ಟು ಅವಸರ ಏನಿತ್ತು?
ಗುಂಡ : ಬೆಳಗಾದರೆ ಚಿಪ್ಸ್‌ನ ಎಕ್ಸ್‌ಪೈರಿ ಡೇಟ್ ಮುಗಿದು ಬಿಡುತ್ತೆ. ಅದಕ್ಕೆ ಈಗಲೇ ತಿಂದು ಮುಗಿಸುತ್ತಿದ್ದೇನೆ!

ಮೈಸೂರು ಮಿತ್ರ
ಶುಕ್ರವಾರ, 15 ಆಗಸ್ಟ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಮಾತು ಬರದ ನಾಯಿಯನ್ನು ನಂಬು ಆದರೆ, ಮಾತಿನಲ್ಲೇ ಮರಳು ಮಾಡುವ ಮನುಷ್ಯನನ್ನು ನಂಬಬೇಡ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೋಪವೆಂಬುದು ಅನರ್ಥ ಸಾಧನ.

ನಿಮ್ಮ ಪತ್ರಗಳು

ಕುವೆಂಪುನಗರದ ನೃಪತುಂಗ ರಸ್ತೆ ಪರಿಸ್ಥಿತಿ

ಮಾನ್ಯರೆ,



ಇದು ಮೈಸೂರಿನ ಪ್ರತಿಷ್ಠಿತ ಬಡಾವಣೆಯಾದ ಕುವೆಂಪು ನಗರದ ನೃಪತುಂಗ ರಸ್ತೆಯ ಪರಿಸ್ಥಿತಿ. (ಕುವೆಂಪುನಗರದ ಕಾಂಪ್ಲೆಕ್ಸ್‌ನಿಂದ ಕೆಎಸ್‌ಆರ್‌ಟಿಸಿ ಡಿಪೋ ತನಕದ ರಸ್ತೆ), ಈ ರಸ್ತೆಯ ಉದ್ದಕ್ಕೂ ರಸ್ತೆಯ ಮಧ್ಯೆ ಭಾಗದಲ್ಲೇ ಸುಮಾರು ಒಂದು ಅಡಿ ಆಳದ ಗುಂಡಿಗಳಾಗಿರುವುದನ್ನು ಕಾಣ ಬಹುದು. ಕಳೆದ ಎರಡು ವರ್ಷಗಳಿಂದಲೂ ಈ ರಸ್ತೆಯು ಡಾಂಬರೀಕರಣವನ್ನೇ ಕಂಡಿಲ್ಲ. ಈ ರೀತಿ ಸಾರ್ವಜನಿಕರಿಂದ ದೂರು ಬಂದಾಗ ನಗರ ಪಾಲಿಕೆಯವರು ಈ ಗುಂಡಿಗಳನ್ನು, ಕಾಟಾಚಾರಕ್ಕೆ ಮುಚ್ಚುತ್ತಾರೆ. ಆದರೆ ಒಂದು ತಿಂಗಳ ನಂತರ ಯಥಾಸ್ಥಿತಿ ಗುಂಡಿಗಳು ನಿರ್ಮಾಣವಾಗುತ್ತಿವೆ. ಇದರಿಂದಾಗಿ ಸುಗಮ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಆಗಾಗ್ಗೆ ಸಣ್ಣ ಪುಟ್ಟ ಅಪಘಾತಗಳು ಸಂಭವಿಸುತ್ತಲೇ ಇವೆ. ಎಲ್ಲಕ್ಕಿಂತ ಮುಖ್ಯವಾಗಿ ಈ ರಸ್ತೆಯ ಫುಟ್‌ಪಾತ್ ಅನ್ನು ಇಲ್ಲಿ ಕಾಂಪ್ಲೆಕ್ಸ್ ನಿರ್ಮಾಣ ಮಾಡುವವರು, ತರಕಾರಿ ಮತ್ತು ಹಣ್ಣು ಮಾರುವವರು ಸ್ವಲ್ಪ ಮಟ್ಟಿಗೆ ಆಕ್ರಮಿಸಿಕೊಂಡಿರುವುದು ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ. ಇತ್ತೀಚೆಗೆ ವಿವೇಕಾನಂದ ನಗರದ ಸರ್ಕಲ್‌ನ ಬಳಿ ದುರಂತ ಸಂಭವಿಸಿದಂತೆ ಈ ರಸ್ತೆಯಲ್ಲಿ ದುರಂತ ಸಂಭವಿಸದಂತೆ ಸಂಚಾರ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಮತ್ತದೇ ದಸರೆ, ಅದೇ ತೇಪೆ!

ಮಾನ್ಯರೆ,

ವಿಶ್ವ ಪ್ರಸಿದ್ಧ ನವರಾತ್ರಿ ದಸರೆ 22ನೇ ಸೆಪ್ಟೆಂಬರ್‌ನಿಂದ ಪ್ರಾರಂಭವಾಗಲಿದೆ. ದಸರೆಯಲ್ಲಿ ಭಾಗವಹಿಸುವ ಕೆಲ ಆನೆಗಳು ಬಂದಿವೆ. ಸ್ಥಳೀಯ ಆಡಳಿತ ತರಾತುರಿಯಲ್ಲಿ ಸಮಿತಿಗಳನ್ನು ರಚಿಸುತ್ತಿದೆ. ಈ ನಡುವೆ ಎಂದಿನಂತೆ 10 ಕೋಟಿ ರೂ. ವೆಚ್ಚದಲ್ಲಿ ನಗರ ಪಾಲಿಕೆಯಿಂದ ರಸ್ತೆಗೆ ಡಾಂಬರೀಕರಣವಾಗುವುದಂತೆ. ಮಳೆ ಮತ್ತು ದಸರೆ ಎರಡೂ ದೋಸ್ತಿಗಳೇ ಸರಿ. ಪ್ರತಿ ವರುಷವೂ ತರಾತುರಿಯಲ್ಲಿ ತೇಪೆ ಹಾಕಿ ಗುಂಡಿ ಮುಚ್ಚಿ ಮತ್ತೆ ಹಾಳಾಗುವ ರಸ್ತೆಗಳ ಬದಲಿಗೆ ಸಮಗ್ರ ಡಾಂಬರೀಕರಣವನ್ನೇಕೆ ಮಾಡಬಾರದು ಎಂಬುದು ನಾಗರಿಕರ ಪ್ರಶ್ನೆ. ಒಟ್ಟಿನಲ್ಲಿ ಈ ಸಂದರ್ಭ ನಮಗೆ ನೆನಪಿಗೆ ಬರುವುದು ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಅವರ ಹಾಡು ಮತ್ತದೇ ಬೇಸರ ಅದೇ ಸಂಜೆ. ಅದರ ದಾಟಿಯಲ್ಲೇ ಮತ್ತದೇ ದಸರೆ, ಅದೇ ತೇಪೆ, ಅದೇ ಗುಂಡಿ ಎನ್ನುವುದು.

–ವಿಜಯ್ ಹೆಮ್ಮಿಗೆ, ಮೈಸೂರು

ಸತ್ಯವಂತರಿಗಿದು ಕಾಲವಲ್ಲ !

ಮಾನ್ಯರೆ,

ರಾಜ್ಯದ ಓರ್ವ ಪ್ರಭಾವಿ ಸಚಿವರಾಗಿದ್ದ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪರಮಾಪ್ತರಲ್ಲಿ ಒಬ್ಬರೆಂದು ಹೇಳಲಾಗಿದ್ದ ಕೆ.ಎನ್.ರಾಜಣ್ಣನವರನ್ನು ರಾಜ್ಯ ಸಚಿವ ಸಂಪುಟದಿಂದ ವಜಾಗೊಳಿಸಿರುವ ನಾಟಕೀಯ ಬೆಳವಣಿಗೆ 'ಸತ್ಯವಂತರಿಗಿದು ಕಾಲವಲ್ಲ' ಎಂಬ ದಾಸರ ಕೀರ್ತನೆಯನ್ನು ಜ್ಞಾಪಕಕ್ಕೆ ತರುತ್ತದೆ. ಇದ್ದದ್ದನ್ನು ಇದ್ದ ಹಾಗೆ ಹೇಳುವ ಜಾಯಮಾನದವರಾದ ರಾಜಣ್ಣನವರು ಲೋಕ ಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿಯವರಿಗೆ ಮುಜುಗರ ಉಂಟು ಮಾಡುವ ಹೇಳಿಕೆ ನೀಡಿದ್ದೇ ಅವರ ಉಚ್ಚಾಟನೆಗೆ ಕಾರಣವೆಂದು ಹೇಳಲಾಗುತ್ತಿದೆ. ಈಗ ದೇಶಾದ್ಯಂತ ಸದ್ದು ಮಾಡುತ್ತಿರುವ ಮತಕಳವು ಪ್ರಕರಣ ದಿನೇ ದಿನೆ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿರುವಾಗಲೇ ರಾಜಣ್ಣನವರನ್ನು ಸಂಪುಟದಿಂದ ವಜಾಗೊಳಿಸಿರುವುದು ಪ್ರಕರಣಕ್ಕೆ ಮತ್ತೊಂದು ತಿರುವು ನೀಡಿದಂತಾಗಿದೆ. ರಾಜಣ್ಣನವರನ್ನು ಏಕಾಏಕಿ ಸಂಪುಟದಿಂದ ವಜಾಗೊಳಿಸಿ, ಪ್ರತಿ ಪಕ್ಷಗಳ ಟೀಕಾ ಪ್ರಹಾರಗಳಿಗೆ ಒಳಗಾಗುವ ಬದಲು, ಕಾಂಗ್ರೆಸ್ ವರಿಷ್ಠ ಮಂಡಳಿ ಈ ವಿವಾದವನ್ನು ಬೇರೆ ರೀತಿಯಲ್ಲಿ ನಿರ್ವಹಿಸಬಹುದಿತ್ತು. ಏನು ಮಾಡುವುದು ಕಾಲ ಮಿಂಚಿ ಹೋಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಆರ್‌ಬಿಐ ನಿಯಂತ್ರಣವೇಕಿಲ್ಲ?

ಮಾನ್ಯರೆ,

ಹೊಸ ಖಾತೆದಾರರು ಐಸಿಐಸಿಐ ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ರೂ 50 ಸಾವಿರ ರೂ. ಕನಿಷ್ಠ ಠೇವಣಿ ಇಡಬೇಕು ಎಂದು ಐಸಿಐಸಿಐ ಬ್ಯಾಂಕ್ ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿರುವ ಅರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರ, ಉಳಿತಾಯ ಖಾತೆ ಯಲ್ಲಿ ಎಷ್ಟು ಮೊತ್ತ ಇರಿಸಬೇಕು ಎನ್ನುವುದು ಅರ್‌ಬಿಐನ ನಿಯಂತ್ರಣ ವ್ಯಾಪ್ತಿಗೆ ಬರುವುದಿಲ್ಲ. ಕನಿಷ್ಠ ಮೊತ್ತ ಅವರ ವಿವೇಚನೆಗೆ ಬಿಟ್ಟ ವಿಷಯ ಎಂದು ಹೇಳಿರುವುದು ಸರಿಯಾದ ನಿರ್ಧಾರವಲ್ಲ. ಹಾಗಿದ್ದರೆ ಬ್ಯಾಂಕ್‌ಗಳು ಅರ್‌ಬಿಐ ನಿಯಂತ್ರಣದಲ್ಲಿ ಇಲ್ಲವೇ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಇತ್ತೀಚೆಗೆ ಕೆನರಾ ಬ್ಯಾಂಕ್ ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಇಲ್ಲದಿದ್ದರೂ ದಂಡ ವಿಧಿಸುವುದಿಲ್ಲ ಎಂದು ಹೇಳಿತ್ತು. ಇದೀಗ ಎಸ್‌ಬಿಐ ಕೂಡ ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳುವ ಅಗತ್ಯ ಇಲ್ಲ ಎಂದು ಹೇಳಿರುವುದು ಪತ್ರಿಕೆಗಳಲ್ಲಿ (12.8.25.) ವರದಿಯಾಗಿದೆ. ಇದೊಂದು ಸ್ವಾಗತಾರ್ಹ ನಿರ್ಧಾರ. ಈ ಬಗ್ಗೆ ಬ್ಯಾಂಕ್ ತನ್ನ ಆದೇಶವನ್ನು ಪ್ರಕಟಿಸಬೇಕು ಹಾಗೂ ಬ್ಯಾಂಕ್ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಬೇಕು. ಅಂಚೆ ಕಚೇರಿಯಲ್ಲಿ ಉಳಿತಾಯ ಖಾತೆಯ ಮೊತ್ತಕ್ಕೆ ಶೇ 4 ಬಡ್ಡಿ ನೀಡುತ್ತಾರೆ. ಆದರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕೇವಲ ಶೇ 2.5 ರಿಂದ 3 ರಷ್ಟು ಮಾತ್ರ ಬಡ್ಡಿ ನೀಡುತ್ತಾರೆ. ಇದು ಅಂಚೆ ಕಚೇರಿಗಿಂತ ಹೆಚ್ಚಿರಬೇಕು. ಈ ಬಗ್ಗೆ ಅರ್‌ಬಿಐ ಗಮನ ಹರಿಸಬೇಕು. ಅಂದ ಹಾಗೆ ಕೆಲವೇ ವರ್ಷಗಳ ಹಿಂದೆ ಇದೇ ಎಸ್‌ಬಿಐ ಉಳಿತಾಯ ಖಾತೆಗಳಲ್ಲಿ ಗ್ರಾಹಕರು ಕನಿಷ್ಠ ಮೊತ್ತ ಹೊಂದಿಲ್ಲ ಎಂದು ಹೇಳಿ 2–3 ತಿಂಗಳಲ್ಲಿ ದಂಡ ವಿಧಿಸಿ, ಸುಮಾರು 25 ಸಾವಿರ ಕೋಟಿಗೂ ಹೆಚ್ಚು ಹಣವನ್ನು ಸುಲಿಗೆ ಮಾಡಿತ್ತು. ಈಗ ಬ್ಯಾಂಕ್ ತನ್ನ ತಪ್ಪಿಗೆ ಗ್ರಾಹಕರ ಕ್ಷಮೆ ಕೋರಿ ದಂಡದ ಹಣವನ್ನು ಬಡಪಾಯಿ ಗ್ರಾಹಕರಿಗೆ ಮರಳಿಸುವುದೇ? ಏಕೆಂದರೆ ಅದು ಗ್ರಾಹಕರ ದುಡಿಮೆಯ ಹಣ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಪರಿಪೂರ್ಣ ಸ್ವಾತಂತ್ರ್ಯ ಪಡಿಮೂಡಬೇಕು





–ಬಿ.ವೈ.ವಿಜಯೇಂದ್ರ ಯಡಿಯೂರಪ್ಪ
ರಾಜ್ಯಾಧ್ಯಕ್ಷರು
ಭಾರತೀಯ ಜನತಾ ಪಕ್ಷ

ಲಕ್ಷಾಂತರ ಜನರ ಹೋರಾಟ, ತ್ಯಾಗ–ಬಲಿದಾನದಿಂದ ಸ್ವಾತಂತ್ರ್ಯ ಪಡೆದಿರುವ ನಾವು, ಅದನ್ನು ಸಾರ್ಥಕಗೊಳಿಸುವ ನಿಟ್ಟಿನಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಹೆಜ್ಜೆ ಇಡಲಾಗಿಲ್ಲ. 70ರ ದಶಕದಲ್ಲಿ ಸರ್ವಾಧಿಕಾರಿ ಮನಸ್ಥಿತಿಯ ಆಡಳಿತವು, ಪ್ರಜಾಪ್ರಭುತ್ವದ ಕತ್ತು ಹಿಸುಕಿದ ತುರ್ತು ಪರಿಸ್ಥಿತಿಯನ್ನು ಹೇರಿತು. 1975ರ ಜೂನ್ 25 ರಿಂದ 1977ರ ಮಾರ್ಚ್ 21ರವರೆಗೆ ಕರಾಳ ದಿನಗಳನ್ನು ಅನುಭವಿಸಬೇಕಾಯಿತು.

ಈಗಲೂ ದೇಶದಲ್ಲಿ ಭಾರತೀಯತೆಯ ಮೇಲಿನ ದಾಳಿ ಮುಂದುವರೆದಿದೆ. ಭಾರತ ವಿರೋಧಿ ಶಕ್ತಿ, ದೇಶದ ಹೊರಗೆ ಮತ್ತು ಒಳಗೆ ಉಪಟಳ ನೀಡುತ್ತಲೇ ಇದೆ. ಇದನ್ನು ಯಶಸ್ವಿಯಾಗಿ ಬಗ್ಗು ಬಡಿಯುವ ಪ್ರಯತ್ನ ಕಳೆದೊಂದು ದಶಕದಲ್ಲಿ ತಾರ್ಕಿಕ ಅಂತ್ಯ ತಲುಪುತ್ತಿದೆ. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ದೇಶದ ಸಾರ್ವಭೌಮತ್ವಕ್ಕೆ ಸವಾಲೊಡ್ಡುವ ಶಕ್ತಿಗಳಿಂದ ದೇಶವನ್ನು ರಕ್ಷಿಸುವುದು ನಮ್ಮ ಮುಂದಿರುವ ಸವಾಲಾಗಿದೆ. ಮತ ಬ್ಯಾಂಕ್ ಆಧಾರಿತ ರಾಜಕಾರಣದ ಮೂಲೋತ್ಪಾಟನೆ ಮಾಡಿ, ನಿರ್ಭಯ ವಾತಾವರಣದ ಸುಂದರ ಶಾಂತಿಯ ತೋಟ ನಿರ್ಮಿಸಬೇಕಿದೆ.

12ನೇ ಶತಮಾನದಲ್ಲಿ ಬಸವಣ್ಣನವರು ಕಾಯಕ ತತ್ವವನ್ನು ಉತ್ತೇಜಿಸುವುದರ ಜೊತೆಗೆ ಮಹಾತ್ಮ ಗಾಂಧೀಜಿಯವರ ಸ್ವದೇಶಿ ಚಳುವಳಿಯನ್ನು ಸಾರ್ಥಕಗೊಳಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರ 'ಮೇಕ್ ಇನ್ ಇಂಡಿಯಾ', 'ಕೌಶಲ್ಯ ಭಾರತ್', 'ಆತ್ಮನಿರ್ಭರ'ದಂತಹ ಯೋಜನೆಗಳನ್ನು ಉತ್ತೇಜಿಸುವ ಮೂಲಕ ಉತ್ಪಾದಕ ಶಕ್ತಿಯನ್ನು ಹೆಚ್ಚಿಸಬೇಕಿದೆ. ಇದರೊಂದಿಗೆ ಪ್ರತಿಯೊಬ್ಬ ಪ್ರಜೆಯೂ ಉದ್ಯಮಿಯಾಗಿ ಹೊರಹೊಮ್ಮುವ ಅವಕಾಶಗಳನ್ನು ಕಲ್ಪಿಸಿಕೊಡಬೇಕಿದೆ.

'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂದು ನಾವು ಸ್ವಾತಂತ್ರ್ಯ ಚಳುವಳಿ ನಡೆಸಿದೆವು. ಆದರೆ ಇಂದು ವಿದೇಶಿ ಉತ್ಪನ್ನಗಳು ವ್ಯವಸ್ಥಿತವಾಗಿ ಭಾರತದ ಉತ್ಪನ್ನ ಕ್ಷೇತ್ರದ ಮೇಲೆ ಆಕ್ರಮಣ ನಡೆಸುತ್ತಿವೆ. ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ವಿದೇಶಿ ಉತ್ಪನ್ನದ ಮೇಲೆ ಅವಲಂಬಿಸಿದ್ದಾನೆ. ಇದು ಸ್ವಾತಂತ್ರ್ಯ ಚಳುವಳಿಯನ್ನು ಪರೋಕ್ಷವಾಗಿ ಅವಮಾನಿಸುವ ಪರಿಯನ್ನು ಸಂಕೇತಿಸುತ್ತಿದೆ. ಈ ಪರಿಸ್ಥಿತಿಯಲ್ಲಿ ಸ್ವದೇಶಿ ಉತ್ಪನ್ನಗಳು ವ್ಯಾಪಕವಾಗಿ ತಲೆ ಎತ್ತುವಂತೆ ಪ್ರೋತ್ಸಾಹಿಸಿ, ತಾಂತ್ರಿಕ ನೈಪುಣ್ಯತೆ ಹೊಂದಿರುವವರು ವಿದೇಶಗಳಿಗೆ ವಲಸೆ ಹೋಗದಂತೆ ಇಲ್ಲಿಯೇ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ಮುಖೇನ ನಮ್ಮ ಉತ್ಪನ್ನ ಕ್ಷೇತ್ರವನ್ನು ಸಮೃದ್ಧಿಗೊಳಿಸಬೇಕಿದೆ. ಈ ರೀತಿಯಲ್ಲಿ 'ಭಾರತೀಯ ಉತ್ಪನ್ನಗಳಿಗೆ ಮುಕ್ತ ಸ್ವಾತಂತ್ರ್ಯ' ಅರ್ಥಾತ್ 'ಅರ್ಥಪೂರ್ಣ ಸ್ವಾತಂತ್ರ್ಯ'ಕ್ಕೆ ಅಂಕಿತ ಹಾಕಬೇಕಿದೆ. ಸ್ತ್ರೀ ಕುಲದ ಮೇಲೆ ನಡೆಯುತ್ತಿರುವ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ, ಶೋಷಣೆ ಹಾಗೂ ಅಸಮಾನತೆಗಳನ್ನು ತೊಲಗಿಸುವ ಸ್ವಾತಂತ್ರ್ಯ ಇಂದು ಪ್ರತಿಷ್ಠಾಪನೆಯಾಗಬೇಕಿದೆ. ಈ ನಿಟ್ಟಿನಲ್ಲಿ ಮಹಿಳಾ ಮೀಸಲಾತಿಯ ಚಾರಿತ್ರಿಕ ವಿಧೇಯಕ ತಂದ ಪ್ರಧಾನಿ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವನ್ನು ಅಭಿನಂದಿಸಿದರೆ ಸ್ವಾತಂತ್ರ್ಯೋತ್ಸವದ ಆಚರಣೆ ವೇಳೆ ಅರ್ಥಪೂರ್ಣ ಸಂದೇಶ ರವಾನಿಸಿದಂತಾಗುತ್ತದೆ.

> "ಭಾರತ, ಭಾರತವಾಗಿ ಉಳಿಯಬೇಕಾದರೆ ಹತ್ತು–ಹಲವು ಕ್ಷೇತ್ರಗಳಲ್ಲಿ ಸ್ವಾತಂತ್ರ್ಯದ ನೈಜ ಅರ್ಥವನ್ನು ಬಿತ್ತುವ ಸವಾಲು ನಮ್ಮ ಮುಂದಿದೆ. 'ಜಾತ್ಯತೀತ ತತ್ವ' ರಾಜಕಾರಣದ ಪಗಡೆಯಾಗಬಾರದು. ಧರ್ಮದ ಹೆಸರಿನ ರಾಜಕಾರಣ ನೈಜ ಭಾರತೀಯತೆಗೆ ಕಂಟಕವಾಗಬಾರದು. ಈ ನಿಟ್ಟಿನಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಚಿಂತನೆ ನಡೆಸಬೇಕು. ರಾಷ್ಟ್ರವನ್ನು ಪ್ರೀತಿಸಿ, ರಾಷ್ಟ್ರಕ್ಕೆ ಕೃತಜ್ಞತೆ ಸಲ್ಲಿಸುವ ಪ್ರಜಾಪ್ರಭುತ್ವದ ಮಹತ್ವ ಅನುಭವಿಸುವಂತಹ ವಾತಾವರಣ ಸೃಷ್ಟಿಸಬೇಕಿದೆ.

ಭಾರತ ಹಳ್ಳಿಗಳ ದೇಶ, ರೈತ ಈ ದೇಶದ ಬೆನ್ನೆಲುಬು ಎಂದವರು ಗಾಂಧಿ. ಆದರೆ ರೈತರ ಬದುಕನ್ನು ಚೈತನ್ಯ ಪೂರ್ಣಗೊಳಿಸುವ ನಿಟ್ಟಿನಲ್ಲಿ ಈವರೆಗಿನ ಪ್ರಯತ್ನಗಳು ನಿರೀಕ್ಷಿತ ಫಲ ನೀಡಿಲ್ಲ. ಜಗತ್ತಿನ ಅನೇಕ ದೇಶಗಳು ಎದುರಿಸುತ್ತಿರುವ ಆಹಾರ ಕೊರತೆಯ ಬಹುದೊಡ್ಡ ಭಾಗವನ್ನು ನೀಗಿಸಿ, ಹಸಿವು ಮುಕ್ತ ಮಾಡುವ ಶಕ್ತಿ ನಮ್ಮ ಕೃಷಿ ಕ್ಷೇತ್ರಕ್ಕಿದೆ. ಆದರೆ ಕೃಷಿ ಕ್ಷೇತ್ರವನ್ನು ಮೋದಿಯವರು ಅಧಿಕಾರಕ್ಕೆ ಬರುವವರೆಗೂ ಆದ್ಯತೆಯ ವಲಯವನ್ನಾಗಿ ಪರಿಗಣಿಸಿ ಉತ್ತೇಜಿಸುವ ಪ್ರಯತ್ನ ನಡೆದೇ ಇರಲಿಲ್ಲ. ಈ ಕಾರಣದಿಂದಾಗಿ ರೈತರಿಗೆ ಆರ್ಥಿಕ ಚೈತನ್ಯ ತುಂಬುವ ಪ್ರಯತ್ನಗಳು ತ್ವರಿತವಾಗಿ ನಿರೀಕ್ಷಿತ ಗುರಿ ಸಾಧಿಸಲು ಸಾಧ್ಯವಾಗುತ್ತಿಲ್ಲ. ಸ್ವಾತಂತ್ರ್ಯ ಪಡೆದು 78 ವರ್ಷವಾದರೂ ರೈತ ಸಮುದಾಯ ಸ್ವಾತಂತ್ರ್ಯದ ನೈಜ ಸಿಹಿಯನ್ನು ಸವಿಯಲಾಗಿಲ್ಲ. ಗ್ರಾಮೀಣರ ಬದುಕು ಹಸನಾದರೆ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ. ರೈತನ ಬೆವರಿಗೆ ಬಂಗಾರದ ಬೆಲೆ ದಕ್ಕಿದರೆ ಮಾತ್ರ ಸುವರ್ಣ ಭಾರತವಾಗುತ್ತದೆ. ಆದ್ದರಿಂದ 'ರೈತ ಭಾರತದ ನಿರ್ಮಾಣ' ನಮ್ಮ ವಿಶೇಷ ಸಂಕಲ್ಪವಾಗಬೇಕಿದೆ.

ನಿರುದ್ಯೋಗ ಮುಕ್ತ ಭಾರತದ ಸಂಕಲ್ಪ ಸಾಧಿಸುವ ನಿಟ್ಟಿನಲ್ಲಿ ಪ್ರತಿಭೆ ಹಾಗೂ ಆಸಕ್ತಿ ವಲಯವನ್ನು ಆಧರಿಸಿ ಶಿಕ್ಷಣ ಕಲ್ಪಿಸಲು ಒತ್ತು ನೀಡಬೇಕಿದೆ. ಅವಕಾಶಗಳನ್ನು ಸೃಷ್ಟಿಸಿ ಯುವ ಸಮೂಹಕ್ಕೆ ತಲುಪಿಸುವುದು ಸರ್ಕಾರಗಳ ಪ್ರಥಮ ಆದ್ಯತೆಯಾಗಬೇಕಿದೆ. ಮನುಕುಲ ಸೇರಿದಂತೆ ಜೀವ ಜಗತ್ತು ಉಳಿಯಬೇಕಾದರೆ ಪರಿಸರ ಸಂಪನ್ಮೂಲಗಳ ರಕ್ಷಣೆ ಹಾಗೂ ಪರಿಸರ ವಲಯಕ್ಕೆ ಮುಕ್ತ ಸ್ವಾತಂತ್ರ್ಯವನ್ನು ದೊರಕಿಸಿ ಕೊಡಬೇಕಿದೆ. ನದಿಯ ಮಾಲಿನ್ಯತೆ ತಡೆಗಟ್ಟಿ 'ಮಾತೆ'ಯಾಗಿ ಪೂಜಿಸುವ ಮೂಲಕ ನದಿಗಳಿಗೆ ಸ್ವಾತಂತ್ರ್ಯ ನೀಡಬೇಕಿದೆ. ಸ್ವಚ್ಛಂದವಾಗಿ ಗಿಡ–ಮರಗಳು ಬೆಳೆಯಲು ಸ್ವಾತಂತ್ರ್ಯ ನೀಡಬೇಕಿದೆ. ಪ್ರತಿಯೊಂದು ಜೀವಿಗೂ ಸ್ವಾತಂತ್ರ್ಯದ ಸುಖ ಅನುಭವಿಸಲು ಅನುವು ಮಾಡಿಕೊಡುವ ಮೂಲಕ ನಮ್ಮ ಮುಂದಿನ ಪೀಳಿಗೆಗೆ ನಿಜವಾದ ಸ್ವಾತಂತ್ರ್ಯವನ್ನು ವರ್ಗಾಯಿಸಬೇಕಿದೆ.

ಇಂದು ಸರ್ವ ವ್ಯಾಪಿಯಾಗಿ ಪ್ರತಿಯೊಂದು ಮಗುವನ್ನೂ ಅಪ್ಪಿಕೊಳ್ಳದ ಅಸಮಾನತೆಯ ಶಿಕ್ಷಣ ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ಭಾರತದಲ್ಲಿ ಜನಿಸುವ ಪ್ರತಿ ಮಗುವೂ ಸಮಾನತೆಯ ಶಿಕ್ಷಣವನ್ನು ಪಡೆಯುವ ವ್ಯವಸ್ಥೆ ರೂಪಿತವಾದಾಗ ಮಾತ್ರ ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣ ಸ್ವಾತಂತ್ರ್ಯ ಈ ದೇಶದ ಬಹುದೊಡ್ಡ ಆದ್ಯತೆಯಾಗಬೇಕಾಗಿದೆ.

ಆರೋಗ್ಯ ಕ್ಷೇತ್ರ ಉಳ್ಳವರ ಪಾಲಿನ ಧನ್ವಂತರಿಯಾಗಿದೆ. ಆದರೆ ಆರೋಗ್ಯ ಭಾಗ್ಯ ಪ್ರತಿಯೊಬ್ಬ ಪ್ರಜೆಗೂ 'ದೇವ ಧನ್ವಂತರಿ'ಯಾಗಿ ಲಭಿಸಿದರೆ ಮಾತ್ರ ಸ್ವತಂತ್ರ ಭಾರತದ ಕಿರೀಟಕ್ಕೆ ಗರಿ ಮೂಡಿಸಿದಂತಾಗುತ್ತದೆ. ಮಾರಣಾಂತಿಕ ಕಾಯಿಲೆಗಳು ತಂದೊಡ್ಡುವ ಆರ್ಥಿಕ ಹೊರೆಯಿಂದ ಅನೇಕ ಕುಟುಂಬಗಳು ಬೀದಿ ಪಾಲಾಗುವುದನ್ನು ನಾವು ಕಾಣುತ್ತಿದ್ದೇವೆ. ಆರೋಗ್ಯ ಪಡೆಯುವುದು ಪ್ರತಿಯೊಬ್ಬ ಪ್ರಜೆಯ ಹಕ್ಕಾಗಬೇಕು. 'ಆರೋಗ್ಯ ಸ್ವಾತಂತ್ರ್ಯ' ಜನರ ಭರವಸೆಯ ಬೆಳಕಾಗಬೇಕು.

ಧಾರ್ಮಿಕ ಸ್ವಾತಂತ್ರ್ಯದ ಹೆಸರಿನಲ್ಲಿ ಭಾರತೀಯ ಸಂಸ್ಕೃತಿಯನ್ನು ಆಪೋಶನ ಮಾಡಿಕೊಳ್ಳುವ ಕುಕೃತ್ಯಗಳು ಮೇಲಿಂದ ಮೇಲೆ ವರದಿಯಾಗುತ್ತಲೇ ಇವೆ. ಈ ನಿಟ್ಟಿನಲ್ಲಿ ಧಾರ್ಮಿಕ ಸ್ವಾತಂತ್ರ್ಯದ ನೈಜ ಅರ್ಥ ತಿಳಿಸಿ ಕೊಡುವ ಕಾರ್ಯವಾಗಬೇಕಿದೆ. ಪ್ರತಿಯೊಬ್ಬರಿಗೂ ಅವರ ಸಂಸ್ಕೃತಿ, ಧರ್ಮ ಅನುಸರಿಸುವ ಸಾಂವಿಧಾನಿಕ ಹಕ್ಕಿದೆ. ಆದರೆ ಅದರ ನೆಪದಲ್ಲಿ ರಾಜಕೀಯ ಬೇಳೆ ಬೇಯಿಸಿಕೊಂಡು ಮತ ಬ್ಯಾಂಕ್ ರಾಜಕಾರಣಕ್ಕಾಗಿ ದೇಶದ ಹಿತಾಸಕ್ತಿ ಬಲಿಕೊಡುವವರ ಬಗ್ಗೆ ಜಾಗ್ರತೆ ವಹಿಸಿ, ರಾಷ್ಟ್ರದ ಸುರಕ್ಷತೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ.

ಭಾರತದ ಸಂಸ್ಕೃತಿ, ವಿಶ್ವಕ್ಕೇ ಉಣಬಡಿಸುವಷ್ಟು ಶ್ರೀಮಂತವಾಗಿದೆ. ಅದರಲ್ಲೂ ನಮ್ಮ ಜನಪದ ಸಂಸ್ಕೃತಿ ಭಾರತದ ಸಂಸ್ಕೃತಿಯ ಬೇರುಗಳಾಗಿವೆ. ಆದರೆ ಇಂದು ಸಂಸ್ಕೃತಿಯನ್ನು ನಂಬಿರುವ ಸಮುದಾಯಗಳು ಹಾಗೂ ಕಲಾವಿದರ ಬದುಕಿನ ಸ್ಥಿತಿ ಅತ್ಯಂತ ದಯನೀಯವಾಗಿದೆ. ಗ್ರಾಮೀಣ ಪ್ರದೇಶದ ಅನೇಕ ಜನಪದ ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಸಮರೋಪಾದಿಯ ಪ್ರಯತ್ನಗಳಾಗ ಬೇಕಿದೆ. ಸಾಂಸ್ಕೃತಿಕ ಸ್ವಾತಂತ್ರ್ಯಕ್ಕೆ ಉತ್ತೇಜನ ದೊರಕಬೇಕಿದೆ.

150 ಕೋಟಿ ಜನಸಂಖ್ಯೆಯ ಹತ್ತಿರಕ್ಕೆ ಸಾಗುತ್ತಿರುವ ಭಾರತ ಹತ್ತಾರು ಧರ್ಮಗಳ, ನೂರಾರು ಸಂಸ್ಕೃತಿಗಳ, ಹಲವಾರು ಭಾಷೆಗಳ ಬಹುತ್ವವನ್ನು ತನ್ನ ಗರ್ಭದಲ್ಲಿರಿಸಿಕೊಂಡಿದೆ. ವಿವಿಧತೆಯಲ್ಲಿ ಏಕತೆಯನ್ನು ಸಾರುವ ಮುಖೇನ ಸ್ವಾಭಿಮಾನದಿಂದ ತಲೆ ಎತ್ತಿ ನಿಂತಿದೆ. ವಿಶ್ವವೇ ನಿಬ್ಬೆರಗಾಗುವ ರೀತಿಯಲ್ಲಿ ನೂರಾರು ಸವಾಲುಗಳನ್ನು ಮೆಟ್ಟಿ ನಿಂತಿದೆ. ಭಾರತದ ಸಂವಿಧಾನವು ಧರ್ಮ, ಸಂಸ್ಕೃತಿ, ಭಾಷೆಗಳನ್ನು ಉಳಿಸುವಲ್ಲಿ ವಿಶೇಷ ಆದ್ಯತೆ ನೀಡಿದೆ. ಈ ನೆಲದ ಇತಿಹಾಸಕ್ಕೆ ಸಾಕ್ಷಿಯಾಗಬಲ್ಲ ಭಾಷೆಗಳಿಗೆ ರಕ್ಷಣೆ ನೀಡಿದೆ. ಇದರ ನಡುವೆಯೂ ಕೆಲವು ಭಾಷೆಗಳು ಅಳಿದು ಹೋಗಿದ್ದು ದುರಂತವೇ ಸರಿ. ಪ್ರತಿಯೊಂದು ಭಾಷೆಯ ಅಸ್ತಿತ್ವವನ್ನು ಉಳಿಸುವುದು ಆಡಳಿತ ವ್ಯವಸ್ಥೆಯ ಬಹುದೊಡ್ಡ ಜವಾಬ್ದಾರಿಯಾಗಿದೆ. ಪ್ರತಿಯೊಂದು ಭಾಷೆ ಹಾಗೂ ಭಾಷಿಕರನ್ನು ಉತ್ತೇಜಿಸುವ ಹಾಗೂ ಆ ಭಾಷೆಗಳ ಬೆಳವಣಿಗೆಗೆ ಮಹತ್ವಪೂರ್ಣ ಕಾರ್ಯಕ್ರಮ ರೂಪಿಸುವ ಮೂಲಕ ಭಾಷಾ ಸ್ವಾತಂತ್ರ್ಯಕ್ಕೆ ಪ್ರೋತ್ಸಾಹಿಸಬೇಕಿದೆ.

ಭಾರತ, ಭಾರತವಾಗಿ ಉಳಿಯಬೇಕಾದರೆ ಹತ್ತು–ಹಲವು ಕ್ಷೇತ್ರಗಳಲ್ಲಿ ಸ್ವಾತಂತ್ರ್ಯದ ನೈಜ ಅರ್ಥವನ್ನು ಬಿತ್ತುವ ಸವಾಲು ನಮ್ಮ ಮುಂದಿದೆ. 'ಜಾತ್ಯತೀತ ತತ್ವ' ರಾಜಕಾರಣದ ಪಗಡೆಯಾಗಬಾರದು. ಧರ್ಮದ ಹೆಸರಿನ ರಾಜಕಾರಣ ನೈಜ ಭಾರತೀಯತೆಗೆ ಕಂಟಕವಾಗಬಾರದು. ಈ ನಿಟ್ಟಿನಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಚಿಂತನೆ ನಡೆಸಬೇಕು. ರಾಷ್ಟ್ರವನ್ನು ಪ್ರೀತಿಸಿ, ರಾಷ್ಟ್ರಕ್ಕೆ ಕೃತಜ್ಞತೆ ಸಲ್ಲಿಸುವ ಪ್ರಜಾಪ್ರಭುತ್ವದ ಮಹತ್ವ ಅನುಭವಿಸುವಂತಹ ವಾತಾವರಣ ಸೃಷ್ಟಿಸಬೇಕಿದೆ. 78 ವರ್ಷ ಪೂರೈಸಿದ ಈ ಸ್ವಾತಂತ್ರ್ಯದ ಸಂದರ್ಭದಲ್ಲಿ 'ಭಾರತ ನಮ್ಮ ಹೆಮ್ಮೆ' ಎಂಬ ಸಾರ್ಥಕ ಭಾವ, ಪ್ರತೀ ಭಾರತೀಯನಲ್ಲಿ ಮೂಡಬೇಕಿದೆ. ರಾಷ್ಟ್ರ ಕಟ್ಟುವ ಸಂಕಲ್ಪ ತೊಟ್ಟು ನಾವೆಲ್ಲರೂ ಹೆಜ್ಜೆ ಹಾಕಿ, ಆ ಮೂಲಕ ಪರಿಪೂರ್ಣ ಸ್ವಾತಂತ್ರ್ಯದ ಕಲ್ಪನೆ ಪಡಿಮೂಡಿಸಬೇಕಿದೆ.

ಪ್ರತಿ ಭಾರತೀಯ ಭಾರತದ ಸ್ವಾತಂತ್ರ್ಯದ ಇತಿಹಾಸ ತಿಳಿಯಬೇಕು

ಸ್ವಾತಂತ್ರ್ಯ ದಿನಾಚರಣೆ ಮುನ್ನ ದಿನ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ

ನವದೆಹಲಿ, ಆ.14– ಭಾರತದ 79ನೇ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾ ದಿನದಂದು ರಾಷ್ಟ್ರಪತಿ ದ್ರೌಪದಿ ಮುರ್ಮು ದೇಶವನ್ನು ಉದ್ದೇಶಿಸಿ ಮಾತನಾಡಿದರು. ಪ್ರತಿಯೊಬ್ಬ ಭಾರತೀಯನು ಸ್ವಾತಂತ್ರ್ಯದ ಸಂತೋಷ ಮತ್ತು ಇತಿಹಾಸದ ಬಗ್ಗೆ ತಿಳಿದುಕೊಂಡಿರಬೇಕು ಎಂದು ಹೇಳಿದರು.



ದ್ರೌಪದಿ ಮುರ್ಮು

ಸ್ವಾತಂತ್ರ್ಯ ದಿನ ಮತ್ತು ಗಣರಾಜ್ಯೋತ್ಸವ "ಮಹಾ ಉತ್ಸಾಹದ ದಿನಗಳು". ಇವು ಪ್ರತಿಯೊಬ್ಬರಲ್ಲೂ ಹೆಮ್ಮೆಯ ಭಾರತೀಯರೆಂಬ ಗುರುತನ್ನು ನೆನಪಿಸುತ್ತದೆ. ವಿವಿಧ ಪ್ರದೇಶ, ಧರ್ಮ ಮತ್ತು ಸಮುದಾಯಗಳ ಪುರುಷರು ಮತ್ತು ಮಹಿಳೆಯರು ಸ್ವಾತಂತ್ರ್ಯ ಹೋರಾಟಕ್ಕೆ ಒಟ್ಟಾಗಿ ಪಾಲ್ಗೊಂಡಿದ್ದರು. ಅವರ ಆಶಾವಾದ ಮತ್ತು ತ್ಯಾಗ ಇಂದಿನ ಭಾರತಕ್ಕೆ ಅಡಿಪಾಯ ರೂಪಿಸಿದವು. ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಗೌರವಾರ್ಥವಾಗಿ ತ್ರಿವರ್ಣ ಧ್ವಜಕ್ಕೆ ನಮಸ್ಕರಿಸುವಂತೆ ಕರೆ ನೀಡಿದರು.

ದೇಶದ ವಿಭಜನೆಯಿಂದ ಉಂಟಾದ ಹಿಂಸಾಚಾರ ಹಾಗೂ ಆಘಾತವನ್ನು ನಾವು ಮರೆಯಬಾರದು. ಆ ವೇಳೆ ಮಾನವ ಇತಿಹಾಸದಲ್ಲಿ ಅತಿದೊಡ್ಡ ವಲಸೆ ಘಟಿಸಿತು. ವಿಭಜನೆಯಿಂದ ಲಕ್ಷಾಂತರ ಜನ ಸ್ಥಳಾಂತರಗೊಂಡರು. ಭಯಾನಕ ಹಿಂಸಾಚಾರ ನಡೆಯಿತು. ಸ್ವಾತಂತ್ರ್ಯದೊಂದಿಗೆ ಭಾರತ ಮತ್ತು ಪಾಕಿಸ್ತಾನಗಳಾಗಿ ವಿಭಜಿಸಿತು. ಪಂಜಾಬ್ ಮತ್ತು ಬಂಗಾಳದಂತಹ ಪ್ರಾಂತ್ಯಗಳು ಕೋಮು ಗಲಭೆಗಳು, ಸಾಮೂಹಿಕ ಹತ್ಯೆಗಳು, ಲೂಟಿ, ಹಸಿವು ಮತ್ತು ವ್ಯಾಪಕ ಹಿಂಸಾಚಾರ ಅನುಭವಿಸಿದವು ಎಂದರು.

ನಮ್ಮ ಸ್ವಾತಂತ್ರ್ಯವನ್ನು ಮರಳಿ ಪಡೆದ ನಂತರ, ಸಾರ್ವತ್ರಿಕ ವಯಸ್ಕ ಮತದಾನದೊಂದಿಗೆ ಪ್ರಜಾಪ್ರಭುತ್ವ ನಿರ್ಮಾಣವಾಯಿತು. ಭಾರತ 'ಪ್ರಜಾಪ್ರಭುತ್ವದ ತಾಯಿ'. ಈ ನೀತಿಯ ಬೇರುಗಳನ್ನು ಪ್ರಾಚೀನ ಗಣರಾಜ್ಯಗಳಲ್ಲಿ ಗುರುತಿಸಲಾಯಿತು. ಸಂವಿಧಾನ ಪ್ರಜಾಪ್ರಭುತ್ವ ಆಡಳಿತಕ್ಕೆ ಬಲವಾದ ಅಡಿಪಾಯ ನೀಡಿತು. ನಾವು ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಎಲ್ಲಕ್ಕಿಂತ ಹೆಚ್ಚಾಗಿ ಗೌರವಿಸುತ್ತೇವೆ ಎಂದು ಅವರು ಒತ್ತಿ ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ: ಸ್ವಾತಂತ್ರ್ಯ ದಿನವು ಕೇವಲ ಸ್ವಾತಂತ್ರ್ಯದ ಆಚರಣೆಯಲ್ಲ. ನಾವು ತ್ರಿವರ್ಣ ಧ್ವಜಕ್ಕೆ ನಮಸ್ಕರಿಸಿದಾಗ 78 ವರ್ಷಗಳ ಹಿಂದೆ ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿದ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸ್ಮರಿಸಿ, ಗೌರವಿಸಬೇಕು ಎಂದರು.

2047ರ ವೇಳೆಗೆ ಸರ್ಕಾರದ ವಿಕಸಿತ ಭಾರತದ ಗುರಿಯತ್ತ 'ದೈತ್ಯ ಹೆಜ್ಜೆ'ಗಳನ್ನು ಇಡುತ್ತಿದೆ. ಸ್ವಾತಂತ್ರ್ಯ ದಿನವು ಆಚರಣೆಗೆ ಮಾತ್ರವಲ್ಲ, ಚಿಂತನೆಗೂ ವೇದಿಕೆಯಾಗಿದೆ. ಭಾರತದ ಪ್ರಯಾಣವನ್ನು ನಿರ್ಣಯಿಸಲು ಮತ್ತು ಭವಿಷ್ಯಕ್ಕಾಗಿ ಸಾಮೂಹಿಕ ಸಂಕಲ್ಪ ಮಾಡಲು ಒಂದು ಅವಕಾಶ. ಆಂತರಿಕ ಸವಾಲುಗಳು ಮತ್ತು ಬಾಹ್ಯ ಒತ್ತಡಗಳನ್ನು ಎದುರಿಸುತ್ತಿರುವಾಗ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳೊಂದಿಗೆ ನಾಗರಿಕರು ಒಟ್ಟಾಗಿ ನಿಲ್ಲಬೇಕು ಎಂದು ಕರೆ ನೀಡಿದರು.

ಹರಿಕೃಷ್ಣ ಪುಣ್ಯಸ್ಮರಣೆ



ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಐಪಿಎಸ್ ಅಧಿಕಾರಿ ಟಿ.ಹರಿಕೃಷ್ಣ ಅವರ 33ನೇ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಮೈಸೂರಿನ ಎಸ್ಪಿ ಕಚೇರಿ ಜಂಕ್ಷನ್‌ನಲ್ಲಿರುವ ಹರಿಕೃಷ್ಣ ಅವರ ಪುತ್ಥಳಿಗೆ ಅವರ ಅಭಿಮಾನಿಯಾದ ಪೊಲೀಸ್ ಇಲಾಖೆ ನಿವೃತ್ತ ಸಿಬ್ಬಂದಿ ಎಸ್.ಶ್ರೀನಿವಾಸ ರಾಜು ಪುಷ್ಪ ನಮನ ಸಲ್ಲಿಸಿದರು. 1992ರ ಆಗಸ್ಟ್ 14ರಂದು ವೀರಪ್ಪನ್ ಮತ್ತು ಅವನ ಸಹಚರರು ನಡೆಸಿದ ದಾಳಿಯಲ್ಲಿ ಹರಿಕೃಷ್ಣ, ಸಬ್‌ಇನ್ಸ್‌ಪೆಕ್ಟರ್ ಶಕಿಲ್ ಸೇರಿದಂತೆ ಆರು ಪೊಲೀಸರು ಹುತಾತ್ಮರಾದರು.

ಆಪರೇಷನ್ ಸಿಂಧೂರದಲ್ಲಿ ಭಾಗಿಯಾದ ವಾಯುಪಡೆ ಅಧಿಕಾರಿಗಳಿಗೆ ಶೌರ್ಯ ಪದಕ

ನವದೆಹಲಿ, ಆ.14– ಸ್ವಾತಂತ್ರ್ಯ ದಿನಾಚರಣೆಯ ಮುನ್ನಾ ದಿನದಂದು ಭಾರತೀಯ ವಾಯುಪಡೆ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿಗೆ ಸರ್ಕಾರವು ಶೌರ್ಯ ಮತ್ತು ಸೇವಾ ಪದಕಗಳನ್ನು ಘೋಷಿಸಿದೆ. ಧೈರ್ಯ ಮತ್ತು ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಲಾಗಿದೆ.

ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಮುರಿದ್ಕೆ ಮತ್ತು ಬಹಾವಲ್ಪುರ್‌ನಲ್ಲಿರುವ ಭಯೋತ್ಪಾದಕರ ಪ್ರಮುಖ ನೆಲೆಗಳನ್ನು ಗುರಿಯಾಗಿಸಿಕೊಂಡು ಭಾರತದ ವಾಯುಪಡೆ ದಾಳಿ ನಡೆಸಿತ್ತು. ಈ ದಾಳಿಯಲ್ಲಿ ಭಾಗಿಯಾದ ಒಂಬತ್ತು ವಾಯುಪಡೆ ಅಧಿಕಾರಿಗಳಿಗೆ ಭಾರತದ ಮೂರನೇ ಅತ್ಯುನ್ನತ ಯುದ್ಧಕಾಲದ ಶೌರ್ಯ ಪದಕವಾದ ವೀರ ಚಕ್ರ ನೀಡಿ ಗೌರವಿಸಲಾಗುತ್ತಿದೆ. ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಕನಿಷ್ಠ ಆರು ಪಾಕಿಸ್ತಾನಿ ವಿಮಾನಗಳನ್ನು ಹೊಡೆದುರುಳಿಸಲಾಗಿತ್ತು.

ವಾಯುಪಡೆಯ ಉಪ ಮುಖ್ಯಸ್ಥ ಏರ್ ಮಾರ್ಷಲ್ ನರ್ನದೇಶ್ವರ್ ತಿವಾರಿ, ಪಶ್ಚಿಮ ವಾಯುಪಡೆ ಕಮಾಂಡರ್ ಏರ್ ಮಾರ್ಷಲ್ ಜೀತೇಂದ್ರ ಮಿಶ್ರಾ ಮತ್ತು ಡಿಜಿ ವಾಯು ಕಾರ್ಯಾಚರಣೆಗಳ ಏರ್ ಮಾರ್ಷಲ್ ಅವದೇಶ್ ಭಾರ್ತಿ ಸೇರಿದಂತೆ ನಾಲ್ವರು ಹಿರಿಯ ವಾಯುಪಡೆ ಅಧಿಕಾರಿಗಳು ಸಿಂಧೂರ್ ಕಾರ್ಯಾಚರಣೆಯ ಸಮಯದಲ್ಲಿ ಅವರ ನಾಯಕತ್ವಕ್ಕಾಗಿ ಸರ್ವೋತ್ತಮ ಯುದ್ಧ ಸೇವಾ ಪದಕವನ್ನು ಪಡೆದುಕೊಂಡಿದ್ದಾರೆ.

ದಾಳಿಗಳನ್ನು ಕಾರ್ಯಗತಗೊಳಿಸುವಲ್ಲಿ ಮತ್ತು ಸ್ವಂತ ವಾಯುಪ್ರದೇಶವನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಕ್ಕಾಗಿ 13 ಭಾರತೀಯ ವಾಯುಪಡೆ ಅಧಿಕಾರಿಗಳಿಗೆ ವಿಶಿಷ್ಟ ಯುದ್ಧ ಸೇವಾ ಪದಕವನ್ನು ನೀಡಲಾಗಿದೆ. ಈ ಅಧಿಕಾರಿಗಳಲ್ಲಿ ಏರ್ ವೈಸ್ ಮಾರ್ಷಲ್ ಜೋಸೆಫ್ ಸುವಾರೆಸ್, ಎವಿಎಂ ಪ್ರಜ್ವಲ್ ಸಿಂಗ್ ಮತ್ತು ಏರ್ ಕಮೋಡೋರ್ ಅಶೋಕ್ ರಾಜ್ ಠಾಕೂರ್ ಸೇರಿದ್ದಾರೆ.

4 ಕೀರ್ತಿ ಚಕ್ರಗಳು, 4 ವೀರ ಚಕ್ರಗಳು ಮತ್ತು 8 ಶೌರ್ಯ ಚಕ್ರ ಭಾರತೀಯ ಸೇನೆಯ ಇಬ್ಬರು ಹಿರಿಯ ಅಧಿಕಾರಿಗಳಿಗೂ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನದಂದು ಸರ್ವೋತ್ತಮ ಯುದ್ಧ ಸೇವಾ ಪದಕವನ್ನು ನೀಡಲಾಯಿತು. ಶೌರ್ಯ ಪ್ರಶಸ್ತಿ ಪುರಸ್ಕೃತರ ಪಟ್ಟಿಯಲ್ಲಿ 4 ಕೀರ್ತಿ ಚಕ್ರಗಳು, 4 ವೀರ ಚಕ್ರಗಳು ಮತ್ತು 8 ಶೌರ್ಯ ಚಕ್ರಗಳು ಸೇರಿವೆ ಎಂದು ಭಾರತೀಯ ಸೇನಾ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಪಡೆಗಳ ಸಿಬ್ಬಂದಿಗೆ 1,090 ಪೊಲೀಸ್ ಪದಕಗಳನ್ನು ಸರ್ಕಾರ ಘೋಷಿಸಿತು. ಇದರಲ್ಲಿ 233 ಶೌರ್ಯ ಪದಕಗಳು, 99 ರಾಷ್ಟ್ರಪತಿಯ ವಿಶಿಷ್ಟ ಸೇವಾ ಪದಕಗಳು ಮತ್ತು 758 ಪದಕಗಳು ಸೇರಿವೆ. ಶೌರ್ಯ ಪದಕಗಳಲ್ಲಿ, 152 ಜಮ್ಮು ಮತ್ತು ಕಾಶ್ಮೀರದಲ್ಲಿ ಕಾರ್ಯಾಚರಣೆಗಳಲ್ಲಿ ತೊಡಗಿರುವ ಸಿಬ್ಬಂದಿಗೆ, 54 ನಕ್ಸಲ್ ವಿರೋಧಿ ಕಾರ್ಯಾಚರಣೆಗಳಿಗೆ, ಮೂರು ಈಶಾನ್ಯದಲ್ಲಿ ಕರ್ತವ್ಯಗಳಿಗೆ ಮತ್ತು 24 ಇತರ ಪ್ರದೇಶಗಳಿಂದ ಬಂದವು. ನಾಲ್ವರು ಅಗ್ನಿಶಾಮಕ ಸಿಬ್ಬಂದಿ ಮತ್ತು ಒಬ್ಬ ಹೋಮ್ ಗಾರ್ಡ್/ನಾಗರಿಕ ರಕ್ಷಣಾ ಅಧಿಕಾರಿಗೂ ಪ್ರಶಸ್ತಿಗಳು ಸಂದಾಯವಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಹಾರಾಜ ಟ್ರೋಫಿ-2025

ಕೊನೆಗೂ ಖಾತೆ ತೆರೆದ ಬೆಂಗಳೂರು ಬ್ಲಾಸ್ಟರ್ಸ್



ಎಲ್.ಆರ್.ಚೇತನ್

ಮೈಸೂರು, ಆ.14(ವಿವಿಹೆಚ್)– ಎಲ್.ಆರ್.ಚೇತನ್ ಅವರ ಆಕರ್ಷಕ ಅರ್ಧಶತಕದ ನೆರವಿನಿಂದ ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಸತತ 2 ಸೋಲುಗಳಿಂದ ಕಂಗೆಟ್ಟಿದ್ದ ಬೆಂಗಳೂರು ಟೂರ್ನಿಯಲ್ಲಿ ಕೊನೆಗೂ ಖಾತೆ ತೆರೆಯುವಲ್ಲಿ ಯಶಸ್ವಿಯಾಗಿದೆ.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗುರುವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಮಿಸ್ಟಿಕ್ಸ್ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಬೌಲರ್‌ಗಳ ಬೌಲಿಂಗ್ ದಾಳಿಗೆ ತತ್ತರಿಸಿ 19.5 ಓವರ್‌ಗಳಲ್ಲಿ 112 ರನ್‌ಗಳಿಗೆ ಆಲೌಟಾಯಿತು. ಗುಲ್ಬರ್ಗಾ ನೀಡಿದ ಸಾಧಾರಣ ಮೊತ್ತ ಬೆನ್ನತ್ತಿದ ಬೆಂಗಳೂರು 14.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 113 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಮಿಸ್ಟಿಕ್ಸ್ ಇನ್ನಿಂಗ್ಸ್ ಆರಂಭದಿಂದಲೂ ನಿರಂತರವಾಗಿ ವಿಕೆಟ್ ಕಳೆದುಕೊಂಡಿತು. ಪರಿಣಾಮ ಯಾವುದೇ ಆಟಗಾರರು ಬೆಂಗಳೂರು ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿ ಎದುರಿಸಲಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಆದರೆ ಲುವ್ನಿತ್ ಸಿಸೋಡಿಯಾ 13, ಸಮರನ್ ರವಿಚಂದ್ರನ್ 12 ಹಾಗೂ ಲವಿಶ್ ಕುಶಾಲ್ 30 ಎಸೆತಗಳಲ್ಲಿ 5 ಸಿಕ್ಸರ್, 2 ಬೌಂಡರಿ ಒಳಗೊಂಡ ಅಜೇಯ 54 ರನ್ ಗಳಿಸಿ ತಂಡದ ಮೊತ್ತ ನೂರರ ಗಡಿ ದಾಟಿಸಿದರು. ಉಳಿದಂತೆ ನಿಕಿನ್ ಜೋಸ್ 1, ಪ್ರಜ್ವಲ್ ಪವನ್ 2, ಸಿದ್ದಾರ್ಥ 5, ಪೃಥ್ವಿರಾಜ್ ಶೇಕಾವತ್ 8, ಪ್ರವೀಣ್ ದುಬೆ 1, ಯೂನಸ್ ಅಲಿ 0, ನಾಯಕ ವೈಶಾಕ್ ವಿಜಯ್ ಕುಮಾರ್ 1 ಮತ್ತು ಕೆ.ಶಶಿ ಕುಮಾರ್ 8 ರನ್ ಗಳಿಸಿದರು.

ಬೆಂಗಳೂರು ಪರ ಮೋಸಿನ್ ಖಾನ್, ವಿದ್ಯಾಧರ್ ಪಾಟೀಲ್, ಶುಭಾಂಗ್ ಹೆಗ್ಡೆ ಹಾಗೂ ರೋಹನ್ ನವೀನ್ ತಲಾ 2, ನವೀನ್ 1 ವಿಕೆಟ್ ಕಬಳಿಸಿದರು.

ಗುಲ್ಬರ್ಗಾ ನೀಡಿದ ಸಾಧಾರಣ ಮೊತ್ತ ಬೆನ್ನತ್ತಿದ ಬೆಂಗಳೂರು ಆರಂಭದಲ್ಲೇ 7 ರನ್ ಗಳಿಸಿದ್ದ ರೋಹನ್ ಪಟೇಲ್ ವಿಕೆಟ್ ಕಳೆದುಕೊಂಡು ಆರಂಭಿಕ ಆಘಾತ ಅನುಭವಿಸಿತು. ಆದರೆ ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಭದ್ರ ಇನ್ನಿಂಗ್ಸ್ ಕಟ್ಟಿದ ಎಲ್.ಆರ್. ಚೇತನ್ ತಮ್ಮ ಅಜೇಯ ಆಟದ ಮೂಲಕ ತಂಡಕ್ಕೆ ಮೊದಲ ಗೆಲುವು ತಂದುಕೊಟ್ಟರು. ಅಂತಿಮವಾಗಿ ಚೇತನ್ 10ಬೌಂಡರಿ, 3 ಸಿಕ್ಸರ್ ಒಳಗೊಂಡು 75 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಭುವನ್ ರಾಜು, ನಾಯಕ ಶುಭಾಂಗ್ ಹೆಗ್ಡೆ ತಲಾ 2, ಸೂರಜ್ ಅಹುಜಾ 7, ಸಿದ್ದಾರ್ಥ್ ಅಖಿಲ್ 0, ರೋಹನ್ ನವೀನ್ ಅಜೇಯ 16 ರನ್ ಗಳಿಸಿದರು. ಗುಲ್ಬರ್ಗಾ ಪರ ನಾಯಕ ವೈಶಾಖ್ ವಿಜಯ್‌ಕುಮಾರ್ 3, ಮೋನಿಶ್ ರೆಡ್ಡಿ ಹಾಗೂ ಶಶಿಕುಮಾರ್ ಒಂದೊಂದು ವಿಕೆಟ್ ಪಡೆದರು. ಗೆಲುವಿನ ಇನ್ನಿಂಗ್ಸ್ ಆಡಿದ ಎಲ್.ಆರ್.ಚೇತನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು–ಮಂಗಳೂರು ಪಂದ್ಯ ರದ್ದು

ಗುರುವಾರ ಮಧ್ಯಾಹ್ನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಮೈಸೂರು ವಾರಿಯರ್ಸ್ ಮತ್ತು ಮಂಗಳೂರು ಡ್ರ್ಯಾಗನ್ಸ್ ಪಂದ್ಯ ಒಂದು ಎಸೆತ ಕಾಣದೇ ಮಳೆಯಿಂದ ರದ್ದಾಯಿತು. ಇದರಿಂದಾಗಿ ಉಭಯ ತಂಡಗಳಿಗೂ ಒಂದೊಂದು ಅಂಕ ನೀಡಲಾಗಿದ್ದು, ಮಂಗಳೂರು ಆಡಿರುವ ಮೂರು ಪಂದ್ಯಗಳಲ್ಲಿ 2 ಜಯ, 1 ಡ್ರಾದೊಂದಿಗೆ 5 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರೆದಿದ್ದು, ಮೈಸೂರು ತಲಾ 1 ಜಯ, ಸೋಲು, ಡ್ರಾದೊಂದಿಗೆ 3 ಅಂಕ ಗಳಿಸಿ 3ನೇ ಸ್ಥಾನದಲ್ಲಿದೆ.

ಸಂದೇಶ್ ಹುಟ್ಟುಹಬ್ಬ

ನಾಳೆ ಹಣ್ಣು–ಹಂಪಲು ವಿತರಣೆ



ಮೈಸೂರು, ಆ. 14–ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ರಾಷ್ಟ್ರ ಪ್ರಶಸ್ತಿ ವಿಜೇತ ಚಿತ್ರ ನಿರ್ಮಾಪಕ ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸಂದೇಶ್ ನಾಗರಾಜ್ ಜನ್ಮದಿನ ಆಚರಣಾ ಸಮಿತಿಯ ಸಂಚಾಲಕ ವಿಕ್ರಾಂತ್ ಪಿ.ದೇವೇಗೌಡ ನೇತೃತ್ವದಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆ ರೋಗಿಗಳಿಗೆ ಆಗಸ್ಟ್ 16 (ಶನಿವಾರ) ಬೆಳಗ್ಗೆ 11 ಗಂಟೆಗೆ ಹಣ್ಣು–ಹಂಪಲು, ಬ್ರೆಡ್ ವಿತರಣೆ ಮಾಡಲಾಗುತ್ತಿದೆ.

ನಾನು ಮುಖ್ಯಮಂತ್ರಿ ಸ್ಥಾನದ ಸ್ಪರ್ಧಿ ಅಲ್ಲ



ಬೆಂಗಳೂರು, ಆ.14(ಕೆಎಂಶಿ)–ಮುಖ್ಯಮಂತ್ರಿ ಸ್ಥಾನದ ಸ್ಪರ್ಧೆಯಲ್ಲಿ ನಾನಿಲ್ಲ ಎಂದು ಮಾಜಿ ಸಚಿವ ಆರ್.ವಿ. ದೇಶಪಾಂಡೆ ವಿಧಾನಸಭೆಗೆ ಇಂದು ಸ್ಪಷ್ಟಪಡಿಸಿದರು.

ಬೆಳಿಗ್ಗೆ ಸದನ ಸಮಾವೇಶಗೊಂಡಾಗ ಮಾತನಾಡಿದ ಅವರು, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಈಗಾಗಲೇ 5 ವರ್ಷ ಪೂರ್ಣಗೊಳಿಸಿದ್ದಾರೆ. ಎರಡನೇ ಬಾರಿಗೆ ಮತ್ತೆ ಐದು ವರ್ಷ ಪೂರ್ಣಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದರು. ಜಾತಿ ಬಲ ಇಲ್ಲದಿದ್ದರೂ ಒಂಭತ್ತು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದೇನೆ. ಹತ್ತು ಬಾರಿ ಸ್ಪರ್ಧೆ ಮಾಡಿದ್ದು ಒಮ್ಮೆ 2008ರಲ್ಲಿ ಮಾತ್ರ ಸೋತಿದ್ದೇನೆ. ಎಸ್.ಎಂ. ಕೃಷ್ಣ, ಧರ್ಮಸಿಂಗ್, ಹೆಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯ ಸೇರಿದಂತೆ ಎಂಟು ಮುಖ್ಯಮಂತ್ರಿಗಳ ಸಂಪುಟದಲ್ಲಿ ಸಚಿವನಾಗಿ ಕಾರ್ಯನಿರ್ವಹಿಸಿದ್ದೇನೆ. ಯುವಜನತೆ ರಾಜಕಾರಣಕ್ಕೆ ಬರಲು ಹೆದರುತ್ತಿದ್ದಾರೆ. ಒಳ್ಳೆಯವರು ರಾಜಕೀಯಕ್ಕೆ ಬರಬೇಕು. ಜನರ ಪ್ರೀತಿ, ವಿಶ್ವಾಸ ಗಳಿಸಬೇಕು, ಕ್ಷೇತ್ರ ಅಭಿವೃದ್ಧಿಯಾಗಬೇಕು ಎಂದರು.

IN THE COURT OF THE 9th ADDITIONAL CIVIL JUDGE & J.M.F.C AT MYSORE
O.S. NO. 749/2023

Plaintiff : CANARA BANK
Shakthi Nagara Branch, Mysore
Represented by its Senior Manager
V/s
Defendant : 1) Sri. M. Sandeep S/o K. Manjunath Rao R/at No. 2/1186. LIG, 4th Cross Kalyanagiri Nagara, Mysore.
2) Sri. K. Manjunath Rao S/o Late Krishnaji Rao R/at No. 2/1186. LIG, 4th Cross Kalyanagiri Nagara, Mysore.
3) Sri. K. Venkatesh S/o Kandegowda R/at No. 197, 3nd Cross, 2nd Main Raghavendra Nagara, Mysore.

SUMMONS TO DEFENDANT No. 01 to 03 UNDER ORDER V RULE 20 OF C.P.C BY NEWS PAPER PUBLICATION

WHEREAS, the Plaintiff Canara Bank, Shakthi Nagara Branch, Mysore has instituted the above Suit against you as Defendant No. 01 to 03 for recovery of a Sum of Rs. 4,83,342/- with interest and Costs. You are hereby summoned to appear either in person or by a Pleader duly instructed by you on **11/09/2025** at 11.00 A.M, before the Hon'ble court to answer the said claim, in default the above suit will be determined ex-parte

Given under my hand and seal this Court dated this 12-8-2025 at Mysore


By Order of the Court
Sd/- Chief Ministerial Officer
Civil Judge & JMFC Court, Mysuru

Advocate for Plaintiff
Sd/- D.B. Praveen. B.A. L.L.B.
Advocate KAR 2085/2007
#178/1, 1st Floor, 11th Main,
5th Cross, Near Javaregowda Park,
Saraswathipuram, Mysore.
Ph. No: 7090227512
Place: Mysore Date: 12-08-2025

ಹುಟ್ಟುಹಬ್ಬದ ಶುಭಾಶಯಗಳು



ಎನ್. ಶ್ರೀಧರ್ ದೀಕ್ಷಿತ್
ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ರಾಜ್ಯ ಪ್ರಶಸ್ತಿ ಪುರಸ್ಕೃತರು
ಅಧ್ಯಕ್ಷರು, ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಾಲಯಗಳ ನೌಕರರ ಸಂಘ (ರಿ.)
ಕಾರ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕಲ ಚೇತನರ ಒಕ್ಕೂಟ(ರಿ)
ಸಮಾಜ ಸೇವಕರು ಹಾಗೂ ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷರು
ಶುಭಾಶಯಕೋರುವವರು : ಮಲ್ಲಹಳ್ಳಿ ಕುಮಾರ, ಕಿರಾಲು ನಾಗರಾಜು
ಲಕ್ಷ್ಮೀಪುರ ಕೆಂಪರಾಮು, ಎಂ.ಆರ್. ಡಬ್ಲ್ಯು.ಸ್ವಾಮಿ ಆರ್.ಎಂ.



ನಾಡಿನ ಸಮಸ್ತ ಜನತೆಗೆ
79ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು
ಅಧ್ಯಕ್ಷರು ಶಿವಾರ್ಚಕ
ಬನ್ನೂರು ನಾಗರಾಜು
ಸುವರ್ಣ ರಾಜ್ಯ ಶಿವಾರ್ಚಕ ಸಂಘ, ಮೈಸೂರು



ಸ್ವಾತಂತ್ರ್ಯ ದಿನಾಚರಣೆಯ ಶುಭಾಷಯಗಳು
ಶುಭಕೋರುವವರು
ಎಸ್.ಪಿ. ಮಂಜುನಾಥ್
ವಕೀಲರು
ಅಧ್ಯಕ್ಷರು, ಕಾಂಗ್ರೆಸ್ ಕಾನೂನು ಘಟಕ, ಮೈಸೂರು ನಗರ

ಕಾರು ಮಾರಾಟಕ್ಕಿದೆ
ರೆನಾಲ್ಟ್ ಪಲ್ಸ್

ಇಂಧನ ಪ್ರಕಾರ	:	ಡೀಸೆಲ್
ಬಣ್ಣ	:	ಗ್ರೇ
ಮಾದರಿ	:	2013
ಕಿಮೀ	:	221000 ಕಿಮೀ
ಮೈಲೇಜ್	:	19 ಕಿಮೀ/ಲೀ

ಏಕ ಮಾಲೀಕತ್ವ, ಕಂಪನಿಯು ಹೊಂದಿದ್ದ ಕಾರು
ಬೆಲೆ : 2 ಲಕ್ಷ
ಎಲ್ಲಾ ಸೇವೆಗಳೂ ರೆನೋಲ್ಟ್ ಸರ್ವೀಸ್‌ನಲ್ಲಿ ಮಾಡಲಾಗಿದೆ
ಕರೆಮಾಡಿ : 7829125100

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜೈಪುರ ಹೋಬಳಿ, ಹಂಪಾಪುರ ಹೋಬಳಿ ಹಾಗೂ ಹುಲ್ಲಹಳ್ಳಿ ಹೋಬಳಿ ಹಾಗೂ ಗದ್ದಿಗೆ ಮುಖ್ಯ ರಸ್ತೆಯಲ್ಲಿ 9 ಗುಂಟೆ, 12 ಗುಂಟೆ, 18 ಗುಂಟೆ, 27 ಗುಂಟೆ, 36 ಗುಂಟೆ ಹಾಗೂ 1.4 ಗುಂಟೆ ಜಮೀನು ಅತೀ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ. ಆಸಕ್ತಿ ಇರುವವರು ಸಂಪರ್ಕಿಸಿ:
Mob: 9945661696

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

30x40 ಅಳತೆಯ ನಿವೇಶನಗಳು ದೊರೆಯುತ್ತವೆ
ರಮಣಶ್ರೀ ಸೆರೇನ್ ವಸತಿ ಬಡಾವಣೆ (ವರುಣ)
ಟಿ.ನರಸೀಪುರ ರಸ್ತೆ, ಸುತ್ತೂರು ರಾಜ್ಯ ಹೆದ್ದಾರಿಯಲ್ಲಿ ನೋಂದಾವಣೆಗೆ ಮತ್ತು ಮನೆ ನಿರ್ಮಿಸಲು ಸಿದ್ಧವಿರುತ್ತದೆ, ಬ್ಯಾಂಕ್ ಸಾಲ ಸೌಲಭ್ಯವಿರುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
7411914135

9ನೇ ವರ್ಷದ ಸವಿನೆನಪು



ಸುರೇಶ್.ಬಿ
(ಗುತ್ತಿಗೆದಾರರು), ಶ್ರೀರಾಂಪುರ ಮೈಸೂರು

ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವವರು : ಪತ್ನಿ, ಮಕ್ಕಳು ಹಾಗೂ ಕುಟುಂಬವರ್ಗದವರು ಬಂಧುಮಿತ್ರರು

4ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ಪತ್ನಿ ಎಂ.ಸಿ.ವನಜಾಕ್ಷಿ, ಮಗಳು ಮೊಮ್ಮಕ್ಕಳು ಮತ್ತು ಸಹೋದರರು, ಗೌರಿಶಂಕರ ನಗರ, ಮೈಸೂರು
ಶ್ರೀ ವಿ.ನಾಗರಾಜುರವರು (ನಾಗಣ್ಣ)

25 ಮತ್ತು 13ನೇ ವರ್ಷದ ಸವಿನೆನಪು



ಶ್ರೀಮತಿ ಚನ್ನಮ್ಮ ಮತ್ತು ಶ್ರೀ ಪುಟ್ಟಯ್ಯ
ನೀವು ನಮ್ಮನ್ನಗಲಿ 25 ವರ್ಷ ಕಳೆದರೂ ಹಾಗೂ 13 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದು:ಖತಪ್ತರು ಕೃಷ್ಣ – ಲಕ್ಷ್ಮಿ ಹಾಗೂ ಕುಟುಂಬವರ್ಗದವರು, ಜಯನಗರ, ಕೆ.ಜಿ. ಕೊಪ್ಪಲು, ಮೈಸೂರು

15ನೇ ವರ್ಷದ ಸವಿನೆನಪು



ನೀವು ನಮ್ಮನೆಲ್ಲಾ ಅಗಲಿ ಇಂದಿಗೆ 15 ವರ್ಷಗಳಾದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಮರ ಸದಾ ನಿಮ್ಮನ್ನು ನೆನೆಯುತ್ತಿರುವ,
ಶ್ರೀ ಮಧುಗಿರಿ ವೆಂಕಟಪ್ಪ
ಕೆ.ಜಿ.ಕೊಪ್ಪಲು, ಮೈಸೂರು. (ಮರಣ: 16–8–2010)
ಇಂತಿದುಃಖತಪ್ತರು: ಪತ್ನಿ: ಶಾರದಮ್ಮ, ಮಕ್ಕಳು ಮತ್ತು ಕುಟುಂಬವರ್ಗ
ಮಗ: ಶ್ರೀನಿವಾಸ್, ಎನ್‌ಐಇ (NIE) ಕಾಲೇಜು.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಸಂಖ್ಯೆ:ಮೈ ಅ ಪ್ರಾ /ವ .ಕ–6/144/2025–26 ದಿನಾಂಕ : 11.08.2025
ಪತ್ರಿಕಾ ಪ್ರಕಟಣೆ

ಶ್ರೀ ವೆಂಕಟರಾಜು ರವರಿಗೆ ಮೈಸೂರು ನಗರದ ಕೆ.ಸಿ ನಗರ ಬಡಾವಣೆಯ ನಿವೇಶನ ಸಂಖ್ಯೆ: 144 ಅಳತೆ 12.00 x 18.00 ಮೀ ನಿವೇಶನವು ಸದರಿ ನಿವೇಶನವು ಸಮಾಪನಾಧಿಕಾರಿ, ದಿ ಪ್ಯಾಲೇಸ್ ಸೆಂಟ್ರಲ್ ಕೋ. ಆಪರೇಟಿವ್ ಸೊಸೈಟಿ ಲಿ., ಮೈಸೂರು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮೈಸೂರು ಉಪವಿಭಾಗ, ಮೈಸೂರು ರವರು ಸಂಘದ ವಶಿಯಿಂದ ಶ್ರೀ ವೆಂಕಟರಾಜು ರವರ ಹೆಸರಿಗೆ ದಿ: 06.02.1997 ರಂದು ಮಂಜೂರಾತಿ ಪತ್ರ ನೀಡಿರುತ್ತಾರೆ ದಿನಾಂಕ: 07.11.1998 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ.

ಮೂಲ ಮಂಜೂರಾತಿದಾರರಾದ ಶ್ರೀ ವೆಂಕಟರಾಜು ರವರು ದಿನಾಂಕ: 31.08.2011 ರಂದು ಮರಣ ಹೊಂದಿರುವುದರಿಂದ ಇವರ ಪತ್ನಿಯಾದ ಶ್ರೀಮತಿ ವೆಂಕಟಲಕ್ಷ್ಮಮ್ಮ ರವರ ಹೆಸರಿಗೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ವರ್ಗಾವಣೆ ಪತ್ರ ಪಡೆದಿರುತ್ತಾರೆ.

ವರ್ಗಾವಣೆದಾರರಾದ ಶ್ರೀಮತಿ ವೆಂಕಟಲಕ್ಷ್ಮಮ್ಮ ರವರು ದಿನಾಂಕ: 05.05.2021 ರಂದು ಮರಣ ಹೊಂದಿರುವ ಬಗ್ಗೆ ಮೈಸೂರು ಮಹಾನಗರಪಾಲಿಕೆ ಮೈಸೂರು ಮರಣ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಹಾಗೂ ಉಪ ತಹಸೀಲ್ದಾರ್ ಸಿಟಿ ಸರ್ಕಲ್ ಹೋಬಳಿ, ಬೆಂಗಳೂರು ನಾರ್ತ್ ತಾಲ್ಲೂಕು, ಬೆಂಗಳೂರು ಜಿಲ್ಲೆ ರವರು ನೀಡಿರುವ ವಂಶವೃಕ್ಷದ RD5019267606903 ದಿನಾಂಕ: 07.06.2023 ರಂದು ನೀಡಿರುವ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ಶ್ರೀ ವೆಂಕಟರಾಜು ರವರ ಪತ್ನಿ ಶ್ರೀಮತಿ ವೆಂಕಟಲಕ್ಷ್ಮಮ್ಮ ರವರ ಮಕ್ಕಳುಗಳಾದ ಶ್ರೀಮತಿ ವಸಂತಕುಮಾರಿ, ಶ್ರೀಮತಿ ಧನಲಕ್ಷ್ಮಿ, ಶ್ರೀ ವಿ. ಕೃಷ್ಣರಾಜು, ಶ್ರೀಮತಿ ನಾಗರತ್ನ, ಶ್ರೀಮತಿ ಗೀತಾ, ಶ್ರೀಮತಿ ಬೃಂದಾ, ಶ್ರೀ ಕಾಂತರಾಜು ವಿ. ರವರು ಪೌತಿ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುವುದರಿಂದ, ಸದರಿಯವರ ಹೆಸರಿಗೆ ಮೇಲ್ಕಂಡ ನಿವೇಶನವನ್ನು ಜಂಟಿ ಪೌತಿ ವರ್ಗಾವಣೆ ಮಾಡುವ ಸಂಬಂಧ ಯಾರಿಂದಾದರೂ ತಂಟೆ ತಕರಾರು/ಆಕ್ಷೇಪಣೆ ಏನಾದರೂ ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/–
ವಿಶೇಷ ತಹಸೀಲ್ದಾರ್
ವಲಯ ಕಛೇರಿ–6
ಮೈಸೂರು ಅಭಿವೃದ್ಧಿ ಪ್ರಾಧಿಕಾರ,
ಮೈಸೂರು

ಭಾರತ ಸರ್ಕಾರ

79ನೇ ಸ್ವಾತಂತ್ರ್ಯ ದಿನದ
ಸಂದರ್ಭದಲ್ಲಿ ಎಲ್ಲಾ ನಾಗರೀಕರಿಗೆ ಹೃತ್ಪೂರ್ವಕ ಶುಭಾಶಯಗಳು



ಭಾರತ ಅಭಿವೃದ್ಧಿಯೆಡೆಗೆ ದಾಪುಗಾಲಿಡಲು ಸಿದ್ಧವಾಗಿದೆ ಎಂದು ಇಂದು ಜಗತ್ತು ಭಾವಿಸಿದರೆ, ಅದರ ಹಿಂದೆ 11 ವರ್ಷಗಳ ಪ್ರಬಲ ಪರಿಶ್ರಮವಿದೆ.
– ನರೇಂದ್ರ ಮೋದಿ

CBC 46101/13/0016/2526

ಬೆಳಿಗ್ಗೆ 6:30 ರಿಂದ ದೂರದರ್ಶನದಲ್ಲಿ, ಕೆಂಪು ಕೋಟೆಯ ಪ್ರಾಂಗಣದಿಂದ ಸ್ವಾತಂತ್ರ್ಯ ದಿನಾಚರಣೆಯ ನೇರ ಪ್ರಸಾರ.

ಒಳ ಮೀಸಲಾತಿ ಸಂಬಂಧದ ನ್ಯಾ. ನಾಗಮೋಹನ್ ದಾಸ್ ವರದಿ ಪುನರ್ ಪರಿಶೀಲನೆಗೆ ಆಗ್ರಹಿಸಿ ಬಲಗೈ ಜಾತಿಗಳ ಪ್ರತಿಭಟನೆ



ನ್ಯಾಯಮೂರ್ತಿ ನಾಗಮೋಹನ್ ದಾಸ್ ಏಕ ಸದಸ್ಯ ವಿಚಾರಣಾ ಆಯೋಗ ಸಲ್ಲಿಸಿರುವ ಒಳ ಮೀಸಲಾತಿ ವರದಿಯನ್ನು ಪುನರ್ ಪರಿಶೀಲಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಯಿತು.

ಮೈಸೂರು, ಆ.14(ಎಂಟಿವೈ)- ನ್ಯಾಯಮೂರ್ತಿ ನಾಗಮೋಹನ್ ದಾಸ್ ಏಕ ಸದಸ್ಯ ವಿಚಾರಣಾ ಆಯೋಗ ಸಲ್ಲಿಸಿರುವ ಒಳ ಮೀಸಲಾತಿ ವರದಿಯನ್ನು ಪುನರ್ ಪರಿಶೀಲಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ ಬೃಹತ್ ಪ್ರತಿಭಟನೆ ನಡೆಯಿತು.

ಮೈಸೂರಿನ ಪುರಭವನದ ಅಂಬೇಡ್ಕರ್ ಪ್ರತಿಮೆ ಬಳಿ ಸಿದ್ದಾರ್ಥ ನಗರದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಧರಣಿ ನಡೆಸಲಾಯಿತು. ನಾಗಮೋಹನ್ ದಾಸ್ ವರದಿಯೂ ಅವೈಜ್ಞಾನಿಕವಾಗಿದೆ. ನ್ಯಾಯಮೂರ್ತಿಗಳು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಮಾಡಿರುವ ಶಿಫಾರಸ್ಸುಗಳು ಬಲಗೈ, ಹೊಲೆಯ, ಛಲವಾದಿ ಮತ್ತು ಬಲಗೈ ಸಂಬಂಧಿತ ಜಾತಿಗಳಿಗೆ ಅನ್ಯಾಯ ಮಾಡಲಾಗಿದೆ ಎಂದು ಆಕ್ರೋಶ ಹೊರಹಾಕಿದರು.

ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದ ಮುಖ್ಯರಸ್ತೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಯಾವುದೇ ಜಾತಿಯ ವಿರುದ್ಧ ನಾವು ಹೋರಾಟ ಮಾಡುತ್ತಿಲ್ಲ. ದುರುದ್ದೇಶ ಪೂರ್ವಕವಾಗಿ ಹೊಲೆಯ ಮತ್ತು ಮಾದಿಗ ಸಂಬಂಧಿತ ಜಾತಿಗಳನ್ನು ವರ್ಗೀಕರಣ ಮಾಡಿರುವುದರ ವಿರುದ್ಧ ನಮ್ಮ ಹೋರಾಟವಾಗಿದೆ. ಹೊಲೆಯ ಸಂಬಂಧಿತ ಜಾತಿಗಳನ್ನು ವರ್ಗೀಕರಣ ಮಾಡಲು ಅಧಿಕಾರ ಕೊಟ್ಟವರು ಯಾರು ಎಂದು ಪ್ರಶ್ನಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ನಮ್ಮ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದೇವೆ. ನಮಗೇ ಯಾವುದೇ ಸಮುದಾಯದ ಮೇಲೆ ವೈಷಮ್ಯ ಇಲ್ಲ. ನಾಗಮೋಹನ್ ದಾಸ್ ಅವರ ಸಂವಿಧಾನ ಓದು ಕೃತಿಯನ್ನು ಸುಡಬೇಕು. ಮುಂಬರುವ ದಿನಗಳಲ್ಲಿ ಹೊಲಯ ಸಂಬಂಧಿತ ಜಾತಿಗಳ ಜನರು ಮಹರ್ ಎಂದು ಬರೆಸಬೇಕು ಎಂದು ಹೇಳಿದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಮಾತನಾಡಿ, ವರದಿಯಲ್ಲಿ ಹೊಲಯ ಸಮುದಾಯದ ಜನರನ್ನು ಕಡಿಮೆ ಸಂಖ್ಯೆಯಲ್ಲಿ ತೋರಿಸಿದ್ದಾರೆ. ಇದು ಸಾಮಾಜಿಕ ನ್ಯಾಯದ ವಿರೋಧಿ. ಚಾರಿತ್ರಿಕವಾದ ಮಹಾದ್ರೋಹ. ನಾವು ಒಳ ಮೀಸಲಾತಿ ವಿರೋಧಿ ಅಲ್ಲ ಎಂದು ಹೇಳಿದರು.

ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್. ಭಾಸ್ಕರ್, ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ, ದಸಂಸ ಮುಖಂಡರಾದ ಹರಿಹರ ಆನಂದಸ್ವಾಮಿ, ವಕೀಲ ಎ.ಆರ್.ಕಾಂತರಾಜ್, ಆಲಗೂಡು ಶಿವಕುಮಾರ್, ಸಿ. ನರೇಂದ್ರ, ದೇವಗಳ್ಳಿ ಸೋಮಶೇಖರ್, ಎಡಿಜಿಪಿ ತಿಮ್ಮಯ್ಯ, ಪುಟ್ಟರಸ, ಭರತ್ ರಾಮಸ್ವಾಮಿ, ಲೇಖಕ ಸಿದ್ದಸ್ವಾಮಿ, ಗಾಯಕ ಲಕ್ಷ್ಮೀರಾಮ್, ಕಲ್ಲಹಳ್ಳಿಕುಮಾರ್, ಈಶ್ವರ್ ಚಕ್ಕಡಿ ಇನ್ನಿತರರು ಪಾಲ್ಗೊಂಡಿದ್ದರು.

ಪಟ್ಟು ಬಿಡದ ಹೋರಾಟಗಾರರು: ಕ್ಷಮೆ ಯಾಚಿಸಿದ ಜಿಲ್ಲಾಧಿಕಾರಿ

ಒಳ ಮೀಸಲಾತಿ ವರದಿ ವಿರೋಧಿಸಿ ಬೃಹತ್ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಕಚೇರಿ ಬಳಿಗೆ ಆಗಮಿಸಿದ ಪರಿಶಿಷ್ಟ ಜಾತಿ ಬಲಗೈ ಸಮುದಾಯದವರು ಮನವಿ ಸ್ವೀಕರಿಸಲು ಜಿಲ್ಲಾಧಿಕಾರಿಗಳೇ ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದರು. ಮನವಿ ಪತ್ರ ಸ್ವೀಕರಿಸಲು ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಸ್ಥಳಕ್ಕೆ ಆಗಮಿಸುತ್ತಿದ್ದಂತೆ ರೊಚ್ಚಿಗೆದ್ದ ಪ್ರತಿಭಟನಾಕಾರರು, ಜಿಲ್ಲಾಧಿಕಾರಿಗಳೇ ಬರಬೇಕು ಎಂದು ಘೋಷಣೆ ಕೂಗಿದರು. ಜಿಲ್ಲಾಧಿಕಾರಿಗಳು ಕಾರ್ಯ ನಿಮಿತ್ತ ಹುಣಸೂರಿಗೆ ತೆರಳಿದ್ದಾರೆ ಎನ್ನುತ್ತಿದ್ದಂತೆ ಜಿಲ್ಲಾಧಿಕಾರಿಗಳ ವಿರುದ್ಧವೇ ಧಿಕ್ಕಾರ ಕೂಗಿದರು. ಈ ವೇಳೆ ಪರಿಸ್ಥಿತಿ ವಿಕೋಪಕ್ಕೆ ತೆರಳುವುದನ್ನು ಅರಿತ ಅಪರ ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸದೆ ಹಿಂದಿರುಗಿದರು.

ಕೆಲ ಸಮಯದ ಬಳಿಕ ಬಂದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ನಿಮ್ಮ ಮನವಿಯನ್ನು ಸ್ವೀಕರಿಸಬಾರದು ಎಂಬ ದುರುದ್ದೇಶದಿಂದ ನಾನು ಹೋಗಿರಲಿಲ್ಲ, ತುರ್ತು ಕೆಲಸದ ನಿಮಿತ್ತ ಹೊರ ಹೋಗಿದ್ದೆ. ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸಿ ಎಂದರು.

ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿ ಯಥಾವತ್ ಜಾರಿಗೆ ಸಾಹಿತಿ ದೇವನೂರು ಮಹದೇವ ಆಗ್ರಹ

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಬಹಿರಂಗ ಪತ್ರ



ಸಿದ್ದರಾಮಯ್ಯ



ದೇವನೂರು ಮಹದೇವ

ಮೈಸೂರು, ಆ.14- ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗದ ವರದಿಯನ್ನು ಯಥಾವತ್ತಾಗಿ ಅನುಷ್ಠಾನ ಮಾಡಬೇಕೆಂದು ಸಾಹಿತಿ ದೇವನೂರ ಮಹದೇವ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿಗಳಿಗೆ ಬಹಿರಂಗ ಪತ್ರ ಬರೆದಿರುವ ಅವರು, ಇಂದು ದಲಿತ ಸಮುದಾಯ ದಿನ ದಿನಕ್ಕೂ ಚಲನಶೀಲತೆ ಪಡೆದುಕೊಂಡು ಬದಲಾವಣೆಯಾಗುತ್ತಿರುವುದರಿಂದ ಅದಕ್ಕೆ ತಕ್ಕಂತೆ ಮೀಸಲಾತಿ ಪ್ರಾತಿನಿಧ್ಯವನ್ನು ಸಮತೋಲನ ಮಾಡುವುದಕ್ಕಾಗಿ ಹಾಗೂ ಕಾಲ ಕಾಲಕ್ಕೆ ಹೊಸ ದತ್ತಾಂಶಗಳಿಂದ ಒಳ ಮೀಸಲಾತಿಯ ಪ್ರಮಾಣವನ್ನು ಪರಿಷ್ಕರಿಸಲು, ಹಿಂದುಳಿದ ವರ್ಗಗಳಿಗೆ ಇರುವಂತೆಯೇ ಪರಿಶಿಷ್ಟ ಜಾತಿಗಳ ಆಯೋಗಕ್ಕೂ ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ಒದಗಿಸಬೇಕು ಎಂದಿದ್ದಾರೆ.

ಈ ಹಿಂದೆ ಮೀಸಲಾತಿ ಹೆಚ್ಚಳ ಆಯೋಗದ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಸಲ್ಲಿಸಿದ ವರದಿಯಲ್ಲಿ ಪರಿಶಿಷ್ಟ ಜಾತಿ ಸಮುದಾಯ ಶೇ.17.98, ಪರಿಶಿಷ್ಟ ಪಂಗಡ ಶೇ.7.41 ಜನಸಂಖ್ಯೆ ಇರುವುದರಿಂದ ಎಸ್ಸಿಗೆ ಶೇ.18 ಹಾಗೂ ಎಸ್‌ಟಿಗೆ ಶೇ.7.50ರಷ್ಟು ಮೀಸಲಾತಿ ನೀಡುವುದು ಸೂಕ್ತ ಎಂದಿದ್ದರು. (ಆದರೆ, ಅಂದು ಆ ಆಯೋಗದ ಮುಂದೆ ಮೀಸಲಾತಿಯನ್ನು ಶೇ.17ಕ್ಕೆ ಏರಿಸುವ ವಿಚಾರವಷ್ಟೇ ಇದ್ದುದರಿಂದ, ಶಿಫಾರಸ್ಸು ಅಷ್ಟಕ್ಕೆ ಸೀಮಿತವಾಗಿತ್ತು). ತಾವು ಶೇ.1ರಷ್ಟು ಹೆಚ್ಚಳದ ನಿರ್ಧಾರ ಕೈಗೊಂಡರೆ ಹೆಚ್ಚುವರಿಯಾಗಿ ಸಿಗುವ ಶೇ.1ರಿಂದ ಇಂದಿನ ಗೊಂದಲಗಳನ್ನು ಪರಿಹರಿಸಿಕೊಳ್ಳಬಹುದಾದ ಸಾಧ್ಯತೆ ಇದೆ. ಇದು ಸರ್ಕಾರದ ಕೈಯಲ್ಲೇ ಇದೆ ಎಂದುಕೊಂಡಿದ್ದೇನೆ. ನೀವು ಈ ಕುರಿತು ಆಶ್ವಾಸನೆ ನೀಡಿದರೂ ದಲಿತ ಸಮುದಾಯ ನಂಬುತ್ತದೆ ಎಂದು ದೇವನೂರು ಮಹದೇವ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

2024ರ ಸುಪ್ರೀಂಕೋರ್ಟ್ ತೀರ್ಪಿನಲ್ಲಿ ಪರಿಶಿಷ್ಟ ಜಾತಿಗಳು ವೈವಿಧ್ಯಮಯ ಭಿನ್ನ ರೂಪತೆಯ (Heterogeneous) ಗುಂಪುಗಳಾಗಿವೆ ಎಂದು ಅಭಿಪ್ರಾಯ ನೀಡಿದೆ. ವರ್ಗೀಕರಣ ನಿರ್ಧರಿಸುವಾಗ ಸರ್ವಾಂಗೀಣ ಹಿಂದುಳಿದಿರುವಿಕೆಯನ್ನೂ ಪರಿಗಣಿಸಿ ನಿರ್ಧರಿಸಬೇಕಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನ್ಯಾಯಮೂರ್ತಿ ನಾಗಮೋಹನ್ ದಾಸ್‌ರವರ ವರದಿಯನ್ನು ಗಮನಿಸಿದರೆ ಅದು ಸುಪ್ರೀಂ ಕೋರ್ಟ್ ಆಶಯಕ್ಕೆ ತಕ್ಕಂತೆಯೇ ಇರುವಂತೆ ಕಾಣಿಸುತ್ತದೆ. ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿಯು ಸಮಗ್ರ ಸಮೀಕ್ಷೆ ಮಾಡುವ ಮೂಲಕವೇ ಅಂಕಿ-ಅಂಶಗಳನ್ನು ಸಂಗ್ರಹಿಸಿದೆ.

ವಿಸ್ತಾರವಾದ ಸಮೀಕ್ಷೆ ಮಾಡಿ ಶೇ. 94 ರಷ್ಟು ಜನರ ಮಾಹಿತಿ ಸಂಗ್ರಹಿಸಿದೆ. ಮನೆ ಮನೆ ಸರ್ವೆ, ನಿಗದಿತ ಕೇಂದ್ರಗಳಲ್ಲಿ ಸರ್ವೆ, Online ಸರ್ವೆ ಅವಕಾಶ ಹೀಗೆ ಸಮಗ್ರ ಪ್ರಯತ್ನ ಮಾಡಿದೆ. ಈ ರೀತಿ ಸಮೀಕ್ಷೆ ಅಪರೂಪ. ಮೊದಲು ಇದನ್ನು ಎಲ್ಲರೂ ಗೌರವಿಸಬೇಕಾಗಿದೆ. ಹಾಗೆಂದು ಈಗ ಎದ್ದಿರುವ ಆಕ್ಷೇಪಣೆಗಳನ್ನು ತಳ್ಳಿ ಹಾಕಬೇಕಿಲ್ಲ. ಅವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಾಶ್ವತ ಆಯೋಗಕ್ಕೆ ಹೆಚ್ಚಿನ ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ತಾವು ಘೋಷಣೆ ಮಾಡುವುದಾದರೆ, ಅದು ಮುಂದಿನ ದಿನಗಳಲ್ಲಿ ಕಾಲಕಾಲಕ್ಕೆ ಲಭ್ಯವಾಗುವ ಜಾತಿ/ಜನಗಣತಿಯ ದತ್ತಾಂಶಗಳ ಪರಿಷ್ಕರಣೆಯ ಮೂಲಕ ಸಮತೋಲನ ಮಾಡಲು ಅವಕಾಶವಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಮೈಸೂರು ಪಾಲಿಕೆಯಿಂದ ದಸರಾ ಗಜಪಡೆಯೊಂದಿಗೆ ಹರ್ ಘರ್ ತಿರಂಗಾ ನಡಿಗೆ



ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ದಸರಾ ಗಜಪಡೆಯೊಂದಿಗೆ 'ಹರ್ ಘರ್ ತಿರಂಗಾ' ನಡಿಗೆ ಆಯೋಜಿಸಿತ್ತು.

ಮೈಸೂರು, ಆ.14(ಎಂಟಿವೈ)- ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ದಸರಾ ಗಜಪಡೆಯೊಂದಿಗೆ 'ಹರ್ ಘರ್ ತಿರಂಗಾ' ನಡಿಗೆ ಆಯೋಜಿಸಿತ್ತು.

ಮೈಸೂರು ಅರಮನೆಯ ಆವರಣದಲ್ಲಿರುವ ಆನೆ ಶಿಬಿರದ ಬಳಿ ಗುರುವಾರ ಬೆಳಗ್ಗೆ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಆಸೀಫ್ ನೇತೃತ್ವದಲ್ಲಿ ಪಾಲಿಕೆ ಅಧಿಕಾರಿಗಳು ದಸರಾ ಗಜಪಡೆ ನಾಯಕ ಅಭಿಮನ್ಯು ಸೇರಿದಂತೆ ಮೊದಲ ತಂಡದ ಎಲ್ಲಾ 9 ಆನೆಗಳ ಮಾವುತ, ಕಾವಾಡಿಗಳ ಕೈಗೆ ತ್ರಿವರ್ಣ ಧ್ವಜ ನೀಡಿ, ಹರ್ ಘರ್ ತಿರಂಗಾ ನಡಿಗೆಗೆ ಚಾಲನೆ ನೀಡಿದರು. ಸ್ವಾತಂತ್ರ್ಯ ದಿನಾಚರಣೆ ಮಹತ್ವ ಹಾಗೂ ಸ್ವಚ್ಛತಾ ಅಭಿಯಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಅರಮನೆಯ ಬಲರಾಮ ದ್ವಾರದಿಂದ ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆಯಲ್ಲಿ ಸರ್ಕಾರಿ ಆಯುರ್ವೇದ ಕಾಲೇಜಿನವರೆಗೂ ರಸ್ತೆಯುದ್ದಕ್ಕೂ 100ಕ್ಕೂ ಹೆಚ್ಚು ಮಂದಿ ಪೌರಕಾರ್ಮಿಕರಿಗೆ ತ್ರಿವರ್ಣ ಧ್ವಜ ನೀಡಿ ನಿಲ್ಲಿಸಲಾಗಿತ್ತು.

ಬೆಳಗ್ಗೆ 7.30ಕ್ಕೆ ಹರ್ ಘರ್ ತಿರಂಗಾ ನಡಿಗೆ ಆರಂಭವಾಯಿತು. ತುಂತುರು ಮಳೆ ನಡುವೆಯೂ ದಸರಾ ಗಜಪಡೆ ತ್ರಿವರ್ಣ ಧ್ವಜದೊಂದಿಗೆ ರಾಜಮಾರ್ಗದಲ್ಲಿ ಸಂಚರಿಸಿ ದೇಶಭಕ್ತಿ ಮೆರೆಸಿದವು. ದಾರಿಯುದ್ದಕ್ಕೂ ನೆರೆದಿದ್ದ ಜನ ತ್ರಿವರ್ಣ ಧ್ವಜದೊಂದಿಗೆ ಬಂದ ಗಜಪಡೆಯನ್ನು ಕಣ್ತುಂಬಿಕೊಂಡರು.

ಈ ಸಂದರ್ಭದಲ್ಲಿ ಪಾಲಿಕೆಯ ಎಇಇ ಮೃತ್ಯುಂಜಯ, ಪರಿಸರಾಧಿಕಾರಿ ಮೈತ್ರಿ, ಅರಮನೆ ಭದ್ರತಾ ಪಡೆಯ ಎಸಿಪಿ ಚಂದ್ರಶೇಖರ್, ಆರ್‌ಎಫ್‌ಓ ನದೀಮ್, ಪಶುವೈದ್ಯ ಡಾ.ಆದರ್ಶ್, ಪಾಲಿಕೆಯ ವಲಯ ಅಭಿಯಂತರರು, ಆರೋಗ್ಯ ಪರಿವೀಕ್ಷಕರು ಪಾಲ್ಗೊಂಡಿದ್ದರು.

ದೇಶಭಕ್ತಿ ಗೀತೆಗಳ ಗಾಯನ



ದೇಶಭಕ್ತಿ ಗೀತೆಗಳ ಗಾಯನ ಕಾರ್ಯಕ್ರಮಕ್ಕೆ ನಿವೃತ್ತ ಯೋಧರಾದ ಅಭಿನವ್ ಚತುರ್ವೇದಿ, ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಮೈಸೂರು, ಆ.14(ವಿವಿಹೆಚ್)- ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ವತಿಯಿಂದ ಮೈಸೂರಿನ ಶ್ರೀ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣದ ಶ್ರೀವಾಸುದೇವಾಚಾರ್ಯ ಭವನದಲ್ಲಿ ಗುರುವಾರ 79ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ವಿವಿಧ ಶಾಲಾ ಮಕ್ಕಳಿಂದ ದೇಶಭಕ್ತಿ ಗೀತೆಗಳ ಗಾಯನ ಹಾಗೂ ನಿವೃತ್ತ ವೀರ ಯೋಧರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ನಡೆಯಿತು.

ಭಾರತ ಸೇನೆಯ ನಿವೃತ್ತ ಯೋಧರಾದ ಕರ್ನಲ್ ಸಿ.ರಾಜೇಂದ್ರ ಮತ್ತು ಕ್ಯಾಪ್ಟನ್ ಅಭಿನವ್ ಚತುರ್ವೇದಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಸದ್ವಿದ್ಯಾ ಶಿಕ್ಷಣ ಸಂಸ್ಥೆ, ಪ್ರಮತಿ ಹಿಲ್‌ವ್ಯೂ ಅಕಾಡೆಮಿ, ವಿಜಯ ವಿಠಲ ವಿದ್ಯಾಶಾಲೆ, ಶ್ರೀ ಶಾರದಾ ಪಬ್ಲಿಕ್ ಶಾಲೆ, ಎಕ್ಸೆಲ್ ಪಬ್ಲಿಕ್ ಶಾಲೆ, ಅರಿವು ವಿದ್ಯಾ ಶಾಲೆ, ಶಾರದ ವಿಲಾಸ್ ಶಿಕ್ಷಣ ಸಂಸ್ಥೆ, ವನಿತಾ ಸದನ ಶಾಲೆ, ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್, ವಿದ್ಯಾವರ್ಧಕ ಶಾಲೆ ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್‌ನ ಅಧ್ಯಕ್ಷ ಟಿ.ಆರ್.ಹರೀಶ್, ಸುಗಮ ಸಂಗೀತ ಅಕಾಡೆಮಿ ಸಂಸ್ಥಾಪಕರಾದ ಎಚ್.ಆರ್.ಲೀಲಾವತಿ ಹಾಜರಿದ್ದರು.

ಸಹಜರಂಗ ರಂಗ ತರಬೇತಿ ಶಿಬಿರ

ಮೈಸೂರು, ಆ. 14- ನಿರಂತರ ಫೌಂಡೇಶನ್ ವತಿಯಿಂದ ಮೈಸೂರು ಕಾಲೇಜು ವಿದ್ಯಾರ್ಥಿಗಳಿಗಾಗಿ ಸಹಜರಂಗ 2025 ರಂಗ ತರಬೇತಿ ಶಿಬಿರವನ್ನು ಮಾನಸ ಗಂಗೋತ್ರಿಯ ಗಾಂಧಿ ಭವನದಲ್ಲಿ ಆಯೋಜಿಸಲಾಗಿದೆ. ಆ. 17ರಂದು ಉದ್ಘಾಟನಾ ಸಮಾರಂಭ ಮಾನಸ ಗಂಗೋತ್ರಿಯ ಗಾಂಧಿ ಭವನದಲ್ಲಿ ಸಂಜೆ 6 ಗಂಟೆಗೆ ನಡೆಯಲಿದೆ.

ಶಿಬಿರದಲ್ಲಿ ಕಲೆ, ರಂಗಭೂಮಿ, ಜಾನಪದ, ಸಹಜ ಕೃಷಿ, ನೆಲ, ಜಲಗಳಂತಹ ವಿಷಯಗಳ ಚರ್ಚೆ, ಸಂವಾದ, ತರಬೇತಿಗಳು ಇರುತ್ತವೆ. ಶಿಬಿರದ ಕೊನೆಯಲ್ಲಿ ಶಿಬಿರಾರ್ಥಿಗಳೇ ಪ್ರಯೋಗಿಸುವ ಹೊಸ ನಾಟಕವೂ ಪ್ರದರ್ಶನಗೊಳ್ಳಲಿದೆ. ಹಿರಿಯ ರಂಗಕರ್ಮಿ ಬಸವಲಿಂಗಯ್ಯ, ಗಾಂಧಿ ಭವನದ ನಿರ್ದೇಶಕ ಡಾ. ಎಸ್. ನರೇಂದ್ರ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ನಿರಂತರ ನಿರ್ದೇಶಕ ಪ್ರಸಾದ್ ಕುಂದೂರ್ ಭಾಗವಹಿಸಲಿದ್ದಾರೆ.

ಮಾದಕವಸ್ತು ವಿರೋಧಿ ಕಾರ್ಯಪಡೆಗೆ ಸಮರ್ಥರನ್ನು ನೇಮಿಸಿ

ಗೃಹಸಚಿವರಿಗೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಒತ್ತಾಯ



ಬೆಂಗಳೂರು, ಆ.14- ಮಾದಕ ವಸ್ತುಗಳ ಬಳಕೆಗೆ ಕಡಿವಾಣ ಹಾಕುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅಸ್ತಿತ್ವಕ್ಕೆ ತಂದಿರುವ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ ಘಟಕಕ್ಕೆ ಸಮರ್ಥ ಅಧಿಕಾರಿಗಳನ್ನು ನೇಮಿಸಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಆಗ್ರಹಿಸಿದ್ದಾರೆ.

ವಿಧಾನಮಂಡಲ ಅಧಿವೇಶನದ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಮೈಸೂರಿನಲ್ಲಿ ತಯಾರಾದ ಮಾದಕ ವಸ್ತುವಿಗೆ ಮಹಾರಾಷ್ಟ್ರದ ನಂಟು ಪತ್ತೆಯಾಗಿರುವುದು ಜನರ ಆತಂಕಕ್ಕೆ ಕಾರಣವಾಗಿದ್ದು, ಬುಡ ಸಮೇತ ಇಂತಹ ಜಾಲಗಳನ್ನು ಕಿತ್ತು ಬಿಸಾಕುವಂತಹ ನಿಟ್ಟಿನಲ್ಲಿ ದಕ್ಷ ಅಧಿಕಾರಿಗಳನ್ನು ಕಾರ್ಯಪಡೆ ಘಟಕಕ್ಕೆ ನೇಮಿಸಿ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಗೃಹ ಸಚಿವರ ಗಮನಸೆಳೆದರು.

ರಾಜ್ಯದಲ್ಲಿ ಮಾದಕ ವಸ್ತುಗಳ ಉತ್ಪಾದನೆ, ಮಾರಾಟ ಮತ್ತು ಬಳಕೆ ತಡೆಯುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ ಘಟಕವನ್ನು ಸರಕಾರ ರಚಿಸಿ ಆದೇಶ ಹೊರಡಿಸಿದೆ. ಘಟಕಕ್ಕೆ ಸೂಕ್ತ ವ್ಯಕ್ತಿ ಮತ್ತು ಅಗತ್ಯ ಸೌಕರ್ಯಗಳನ್ನು ಒದಗಿಸಿ. ಆಗ, ಸೇಲ್, ಆಕ್ಟ್, ತಯಾರಕರು ಮತ್ತು ಅವರ ಹಿಂದಿರುವ ದೊಡ್ಡ ಶಕ್ತಿಗಳನ್ನು ಮುಲಾಜಿಲ್ಲದೆ ಮಟ್ಟ ಹಾಕಬೇಕೆಂದು ಮನವಿ ಮಾಡಿದರು.

ಸಾಂಸ್ಕೃತಿಕ ನಗರಿ ಮೈಸೂರು ಇತ್ತೀಚೆಗೆ ಮಾದಕ ವ್ಯಸನ ಮತ್ತು ಡ್ರಗ್ಸ್ ಜಾಲದ ಕೇಂದ್ರವಾಗಿ ಮಾರ್ಪಟ್ಟಿರುವುದು ತೀವ್ರ ಆತಂಕಕಾರಿಯಾದ ವಿಷಯವಾಗಿದೆ. ಮಾದಕ ವ್ಯಸನವು ಯುವಜನತೆ ಮತ್ತು ವಿದ್ಯಾರ್ಥಿಗಳ ಭವಿಷ್ಯವನ್ನು ನಾಶಪಡಿಸುತ್ತಿದ್ದು, ಈ ವಸ್ತುಗಳ ಸುಲಭ ಲಭ್ಯತೆಯು ದುಶ್ಚಟಕ್ಕೆ ಬಲಿಪಶುಗಳಾಗುವಂತೆ ಮಾಡುತ್ತಿದೆ. ಇದರಿಂದಾಗಿ ಅಪರಾಧ ಚಟುವಟಿಕೆಗಳು ಹೆಚ್ಚಾಗುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಹಾಗಾಗಿ ಇಂತಹ ಜಾಲವನ್ನು ಮಟ್ಟ ಹಾಕಬೇಕೆಂದರು.

ದಸರಾ ಮಹೋತ್ಸವದಲ್ಲಿ ಎಲ್ಲಾ ಫಲಕ, ಮುದ್ರಿತ ಸಾಮಗ್ರಿ ಮೊದಲಾದವು ಶೇ.60ರಷ್ಟು ಕನ್ನಡ ಭಾಷೆಯಲ್ಲೇ ಇರಬೇಕು

ಜಿಲ್ಲಾಡಳಿತ, ರಾಜ್ಯ ಸರ್ಕಾರಕ್ಕೆ ಕನ್ನಡ ಕ್ರಿಯಾ ಸಮಿತಿ ಆಗ್ರಹ



ಮೈಸೂರಿನ ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆಯಲ್ಲಿ ಗುರುವಾರ ಕನ್ನಡ ಕ್ರಿಯಾ ಸಮಿತಿಯಿಂದ ಸಭೆ ನಡೆಯಿತು.

ಮೈಸೂರು, ಆ.14(ಪಿಎಂ)- ದಸರಾ ಮಹೋತ್ಸವದಲ್ಲಿ ಎಲ್ಲಾ ಫಲಕಗಳು, ಮುದ್ರಿತ ಸಾಮಗ್ರಿಗಳು, ಪಾಸ್‌ಗಳು, ಬ್ಯಾಡ್ಜ್‌ಗಳು ರಾಜ್ಯ ಭಾಷಾ ಅಧಿನಿಯಮದಂತೆ ಶೇ.60ರಷ್ಟು ಕನ್ನಡ ಭಾಷೆಯಲ್ಲಿಯೇ ಇರುವಂತೆ ಕ್ರಮ ವಹಿಸಲು ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಕನ್ನಡ ಕ್ರಿಯಾ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಮೈಸೂರಿನ ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆ ಸಭಾಂಗಣದಲ್ಲಿ ಕನ್ನಡ ಕ್ರಿಯಾ ಸಮಿತಿ ವತಿಯಿಂದ ರಾಜ್ಯದಲ್ಲಿ ಕನ್ನಡ ಭಾಷೆಯ ಬಳಕೆ ಹಾಗೂ ಬೆಳವಣಿಗೆ ಕುರಿತು ಗುರುವಾರ ಹಮ್ಮಿಕೊಂಡಿದ್ದ ಸಮಿತಿ ಪದಾಧಿಕಾರಿಗಳು ಹಾಗೂ ಕನ್ನಡ ಭಾಷಾಭಿಮಾನಿಗಳ ಸಭೆಯಲ್ಲಿ ಈ ನಿರ್ಣಯ ಸೇರಿದಂತೆ ಹಲವು ನಿರ್ಣಯಗಳನ್ನು ಮಾಡಲಾಯಿತು.

ರಾಜ್ಯ ಭಾಷೆಯಾದ ಕನ್ನಡವನ್ನು ಪೂರ್ವ ಪ್ರಾಥಮಿಕದಿಂದ 12ನೇ ತರಗತಿವರೆಗೂ ಕಡ್ಡಾಯವಾಗಿ ಪ್ರಥಮ ಭಾಷೆಯಾಗಿ ವಿದ್ಯಾರ್ಥಿಗಳಿಗೆ ಕಲಿಸಬೇಕು. ಸಂವಹನ ಭಾಷೆಯಲ್ಲದೇ ಯಾವುದೇ ಭಾಷೆ ಪ್ರಥಮ ಭಾಷೆಯಾಗಬಾರದು. ಈ ಕುರಿತು ಸಂಬಂಧಿಸಿದವರ ಗಮನ ಸೆಳೆಯಲು ನಿರ್ಧಾರ ಕೈಗೊಳ್ಳಲಾಯಿತು. ಸಂಚಾರ ನಿಯಮಕ್ಕೆ ಸಂಬಂಧಿಸಿದ ಫಲಕಗಳು, ಅಡ್ಡಗಟ್ಟೆ (ಬ್ಯಾರಿಕೇಡ್) ಗಳಲ್ಲಿ ಪೊಲೀಸ್ ಇಲಾಖೆಯು ಕಡ್ಡಾಯವಾಗಿ ಕನ್ನಡ ಬಳಸಬೇಕು. ಅಂತೆಯೇ ಮೈಸೂರು ಮಹಾನಗರ ಪಾಲಿಕೆ ಸಹ ನಗರದಲ್ಲಿ ಅಳವಡಿಸುವ ಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸಬೇಕು. ಈ ಕುರಿತು ಸಂಬಂಧಿಸಿದವರನ್ನು ಭೇಟಿ ಮಾಡಿ ಒತ್ತಾಯಿಸಲು ನಿರ್ಣಯಿಸಲಾಯಿತು.

ಸರ್ಕಾರಿ ವಾಹನಗಳಲ್ಲಿ ಹಿಂದಿನಂತೆ ಇಂಗ್ಲಿಷ್ ಸಂಖ್ಯಾ ಫಲಕದ ಜೊತೆಗೆ ಕನ್ನಡ ಅಂಕಿಗಳನ್ನು ಬಳಸಬೇಕು. ಸಾರ್ವಜನಿಕ ವಾಹನಗಳಲ್ಲೂ ಕನ್ನಡ ಅಂಕಿ ಬಳಸಲು ಅವಕಾಶ ಕಲ್ಪಿಸಬೇಕು. ಈ ನಿಟ್ಟಿನಲ್ಲಿ ಸಂಬಂಧಿಸಿದ ಪ್ರಾಧಿಕಾರದ ಗಮನ ಸೆಳೆಯಲು ನಿರ್ಧರಿಸಲಾಯಿತು. ಸಹಕಾರ ಸಂಘಗಳು ಹಾಗೂ ಬ್ಯಾಂಕುಗಳಲ್ಲಿ ಇತ್ತೀಚೆಗೆ ಕನ್ನಡ ಬಳಕೆಯನ್ನು ಕಡಿಮೆ ಮಾಡಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಹಕಾರ ಇಲಾಖೆ ಗಮನ ಸೆಳೆಯಲು ನಿರ್ಧರಿಸಲಾಯಿತು.

ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಕನ್ನಡ ಬಳಸುವ ಬಗ್ಗೆ ಜಾಗೃತಿ ಮೂಡಿಸಲು 'ಕನ್ನಡ ಬಳಸಿ ಸಂವಾದ' ಕಾರ್ಯಕ್ರಮವನ್ನು ಕನ್ನಡ ಕ್ರಿಯಾ ಸಮಿತಿಯಿಂದ ಕನಿಷ್ಠ ಎರಡು ತಿಂಗಳಿಗೊಮ್ಮೆ ಏರ್ಪಡಿಸಲು ನಿರ್ಧರಿಸಲಾಯಿತು. ಇದೇ ವೇಳೆ ಈಗಿರುವ ಪದಾಧಿಕಾರಿಗಳ ಜೊತೆಗೆ ಕನ್ನಡ ಕ್ರಿಯಾ ಸಮಿತಿಗೆ ಸಂಚಾಲಕರಾಗಿ ಅರವಿಂದ ಶರ್ಮ ಅವರನ್ನು ನೇಮಿಸಲಾಯಿತು.

ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಮ.ಗು.ಸದಾನಂದಯ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ, ಹಿರಿಯ ಸಾಹಿತಿಗಳಾದ ಪ್ರೊ.ಕೆ.ಎಸ್.ಭಗವಾನ್, ಹೊರೆಯಾಲ ದೊರೆಸ್ವಾಮಿ, ಮುಖಂಡರಾದ ಜಿ.ಪ್ರಕಾಶ್, ಡಾ.ಕೆ.ಕಾಳಚನ್ನೇಗೌಡ, ಪಂಡಿತಾರಾಧ್ಯ, ಹೆಚ್.ಎನ್.ಲೋಕೇಶಪ್ಪ, ವಿ.ಆನಂದ, ಎಂ.ಮಂಜುನಾಥ್, ಜಯಕುಮಾರ್, ಬೋಗಾದಿ ಸಿದ್ದೇಗೌಡ, ಈ.ಧನಂಜಯ ಎಲಿಯೂರು ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮತಗಳ್ಳತನದ ಮೂಲಕ ಅಧಿಕಾರಕ್ಕೆ ಆರೋಪ: ಬಿಜೆಪಿ ವಿರುದ್ಧ ಕಾಂಗ್ರೆಸ್ ಕ್ಯಾಂಡಲ್ ರ್‍ಯಾಲಿ



ನಗರದ ಗಾಂಧಿಚೌಕದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕ್ಯಾಂಡಲ್ ಬೆಳಗಿ ಪ್ರತಿಭಟನೆ ನಡೆಸಿದರು.

ಮೈಸೂರು, ಆ.14(ವಿವಿಹೆಚ್)- ಪ್ರಜಾಪ್ರಭುತ್ವದ ಪ್ರಮುಖ ಅಂಗವಾದ 'ಮತದಾನ'ದ ಹಕ್ಕನ್ನು ದುರುಪಯೋಗ ಮಾಡಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿ ವಿರುದ್ಧ ಕಾಂಗ್ರೆಸ್ ದೇಶಾದ್ಯಂತ 'ಕ್ಯಾಂಡಲ್ ಮಾರ್ಚ್ ರ್‍ಯಾಲಿ' ನಡೆಸುತ್ತಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ವಿಜಯ್ ಕುಮಾರ್ ಹೇಳಿದರು.

ಮೈಸೂರು ನಗರ ಹಾಗೂ ಜಿಲ್ಲಾ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮೈಸೂರಿನ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಬಿಜೆಪಿ ಮತಗಳ್ಳತನ ವಿರುದ್ಧ ಗುರುವಾರ ಆಯೋಜಿಸಿದ್ದ 'ನನ್ನ ಮತ, ನನ್ನ ಆ ಜನ್ಮ ಸಿದ್ಧ ಹಕ್ಕು' ಘೋಷವಾಕ್ಯದಡಿ ಕ್ಯಾಂಡಲ್ ಮಾರ್ಚ್ ರ್‍ಯಾಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ ಚುನಾವಣಾ ಆಯೋಗವನ್ನು ದುರುಪಯೋಗ ಮಾಡಿಕೊಂಡು ದೇಶದ ಅಧಿಕಾರ ಚುಕ್ಕಾಣಿ ಹಿಡಿದಿದೆ. ಬಹಳ ವ್ಯವಸ್ಥಿತವಾಗಿ ಚುನಾವಣೆ ನಡೆಯುವ ರಾಜ್ಯಗಳಲ್ಲಿ ಬಿಜೆಪಿ ಮತಗಳ್ಳತನ ಮಾಡುತ್ತಿದೆ. ಇದರ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದಾಖಲೆಗಳ ಸಹಿತ ಮಾಹಿತಿ ಮುಂದಿಟ್ಟಿದ್ದಾರೆ. ರಾಗಾ ಅವರ ಪ್ರಶ್ನೆಗಳಿಗೆ ಬಿಜೆಪಿಯಿಂದ ಈವರೆಗೆ ಯಾವುದೇ ಉತ್ತರಗಳು ಬಂದಿಲ್ಲ. ಹೀಗಾಗಿ ಬಿಜೆಪಿ ವಿರುದ್ಧ 'ಮತಗಳ್ಳರೇ ಅಧಿಕಾರ ಬಿಡಿ' ಎಂದು ಕ್ಯಾಂಡಲ್ ಮಾರ್ಚ್ ನಡೆಸಲಾಗಿದೆ ಎಂದರು.

ಇಂದು ನಮ್ಮ ಸಂವಿಧಾನ ಅಪಾಯದ ಅಂಚಿನಲ್ಲಿದೆ. ಸಾಂವಿಧಾನಿಕ ಸಂಸ್ಥೆಗಳನ್ನೇ ಬಳಸಿಕೊಂಡು ಸಂವಿಧಾನದ ಆಶಯಗಳನ್ನು ಹತ್ತಿಕ್ಕುವ ಕೆಲಸ ಮಾಡುತ್ತಿರುವ ಬಿಜೆಪಿ ವಿರುದ್ಧ ನಮ್ಮ ಹೋರಾಟ ನಿರಂತರವಾಗಿರಲಿದೆ ಎಂದು ತಿಳಿಸಿದರು.

ಪ್ರತಿಭಟನೆ ವೇಳೆ ಬಿಜೆಪಿ, ನರೇಂದ್ರ ಮೋದಿ, ಚುನಾವಣಾ ಆಯೋಗದ ವಿರುದ್ಧ ಘೋಷಣೆ ಕೂಗಿದರು.

ನಗರಾಧ್ಯಕ್ಷ ಮೂರ್ತಿ, ಎಸ್ಸಿ ಘಟಕದ ಅಧ್ಯಕ್ಷ ಸಿದ್ದರಾಜು, ಎಸ್ಟಿ ಘಟಕದ ಅಧ್ಯಕ್ಷ ಮಹೇಶ್, ಓಬಿಸಿ ಘಟಕದ ನಗರ ಹಾಗೂ ಗ್ರಾಮಾಂತರ ಅಧ್ಯಕ್ಷರಾದ ನಾಗೇಶ್, ಸೋಮು, ಮಹಿಳಾ ಘಟಕ ಅಧ್ಯಕ್ಷರಾದ ಪುಷ್ಪಲತಾ ಚಿಕ್ಕಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಣ್ಣ ಶಿವಪ್ರಸಾದ್, ಪಾಲಿಕೆ ಮಾಜಿ ಸದಸ್ಯ ಶೌಕತ್ ಪಾಷಾ, ರಾಜೇಂದ್ರ ಪ್ರಸಾದ್, ಅಶೋಕ್, ರಾಜಶೇಖರ್, ಮಾಜಿ ಮೇಯರ್ ಚಿಕ್ಕಣ್ಣ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು, ನಾಯಕರು ಮತ್ತು ನೂರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿದ್ದರು.

ಅದೆಂಗಡ ಗೌರಿ ಮೋಹನ್ (ಜಾಜಿ) ನಿಧನ



ಮೈಸೂರು, ಆ.14- ಮೈಸೂರು ಜಯಲಕ್ಷ್ಮಿಪುರಂನ ನೇಸರ ಅಪಾರ್ಟ್‌ಮೆಂಟ್ ನಿವಾಸಿ ದಿವಂಗತ ಅದೆಂಗಡ ಮೋಹನ್ ಅವರ ಪತ್ನಿ ಶ್ರೀಮತಿ ಅದೆಂಗಡ ಗೌರಿ ಮೋಹನ್ (ಜಾಜಿ-73) ಅವರು ಇಂದು ನಿಧನರಾದರು. ಇವರು ಪುತ್ರ, ಪುತ್ರಿ, ಅಳಿಯ, ಸೊಸೆ, ಮೊಮ್ಮಗ, ಮೊಮ್ಮಗಳು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಆ.16(ಶನಿವಾರ)ರ ಮಧ್ಯಾಹ್ನ 1 ಗಂಟೆಗೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪತ್ರಿಕಾ ವಿತರಕರ ರಾಜ್ಯ ಸಮ್ಮೇಳನದ ಲಾಂಛನ ಬಿಡುಗಡೆ ಮಾಡಿದ ಸಿಎಂ



ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಮೈಸೂರಲ್ಲಿ ಆ.28ರಂದು ನಡೆಯಲಿರುವ ರಾಜ್ಯ ಸಮ್ಮೇಳನದ ಲಾಂಛನವನ್ನು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಪತ್ರಿಕಾ ವಿತರಕರಿಗೆ ಅಪಘಾತ ಪರಿಹಾರ ವಿಮೆ ಯೋಜನೆ ಜಾರಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ, ಸುವರ್ಣ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದನ್ನು ಸ್ಮರಿಸಿ, ಅಭಿನಂದಿಸಲಾಯಿತು. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಶಂಭುಲಿಂಗ, ಮೈಸೂರು ಜಿಲ್ಲಾ ಅಧ್ಯಕ್ಷ ಹೋಮದೇವ ಜೆ.ಎಸ್., ರಾಜ್ಯ ಪ್ರಶಸ್ತಿ ಪುರಸ್ಕೃತ ಪತ್ರಿಕಾ ವಿತರಕ ಜವರಪ್ಪ, ಪತ್ರಿಕಾ ವಿತರಕರಾದ ಶ್ರೀಕಾಂತ್, ನಾಗೇಶ್, ರಾಜಶೇಖರ್ ಮತ್ತಿತರರು ಇದ್ದರು

ಮೈಸೂರು ನಗರ ಪೊಲೀಸರಿಂದ ತಿಂಗಳಲ್ಲಿ ನಡೆದ 21 ಪ್ರಕರಣದಲ್ಲಿ 22 ಮಂದಿ ಬಂಧನ

● ಒಟ್ಟು 47.57 ಲಕ್ಷ ಮೌಲ್ಯದ ನಗದು, ಚಿನ್ನಾಭರಣ ಜಪ್ತಿ ● ವಿವಿಧ ಠಾಣಾ ವ್ಯಾಪ್ತಿಯ ಕಳ್ಳತನ, ಸುಲಿಗೆ, ಸರಗಳ್ಳತನ ಬಯಲು

ಮೈಸೂರು, ಆ.14(ಎಂಟಿವೈ)– ಮೈಸೂರಲ್ಲಿ ಅಪರಾಧ ಪ್ರಕರಣಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ವಿವಿಧ ಕ್ರಮ ಕೈಗೊಂಡಿರುವ ನಗರ ಪೊಲೀಸರು, ಕಳೆದ 1 ತಿಂಗಳ ಅವಧಿಯಲ್ಲಿ ನಡೆದ 21 ಅಪರಾಧ ಪ್ರಕರಣಗಳನ್ನು ಪತ್ತೆ ಮಾಡಿ 22 ಮಂದಿಯನ್ನು ಬಂಧಿಸಿ, 47.57 ಲಕ್ಷ ರೂ. ಮೌಲ್ಯದ ನಗದು, ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

ಮೈಸೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿ, ಕಳೆದ ಜುಲೈ 14ರಿಂದ ಇದುವರೆವಿಗೂ ಮೈಸೂರು ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ನಡೆದ ಕಳ್ಳತನ, ಸುಲಿಗೆ, ಸರಗಳ್ಳತನ ಪ್ರಕರಣಗಳನ್ನು ಬೆನ್ನತ್ತಿದ್ದ ಪೊಲೀಸರು, ತ್ವರಿತಗತಿಯಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಳೆದ 1 ತಿಂಗಳಲ್ಲಿ 21 ಸ್ವತ್ತು ಕಳವು ಪ್ರಕರಣಗಳ ಪತ್ತೆ ಮಾಡಲಾಗಿದೆ. ಅವುಗಳಲ್ಲಿ 5–ಕನ್ನ ಕಳವು, 1–ಸರಗಳ್ಳತನ, 1–ಸುಲಿಗೆ, 1–ಮನೆ ಕಳ್ಳತನ, 1–ಮನೆ ಕೆಲಸದವರಿಂದ ಕಳ್ಳತನ, 9–ವಾಹನ ಕಳ್ಳತನ, 3– ಸಾಮಾನ್ಯ ಕಳ್ಳತನ ಸೇರಿದಂತೆ ಒಟ್ಟು 21 ಸ್ವತ್ತು ಕಳವು ಪ್ರಕರಣಗಳನ್ನು ಪತ್ತೆ ಮಾಡಿದ್ದು, ಸದರಿ ಪ್ರಕರಣಗಳಿಂದ 47,57,000 ಮೌಲ್ಯದ ಒಟ್ಟು 442 ಗ್ರಾಂ ಚಿನ್ನಾಭರಣ, 10 ದ್ವಿಚಕ್ರ ವಾಹನಗಳು, 8,50,000 ನಗದು ಹಣ, 1–ಎಲ್ಇಡಿ ಟಿ.ವಿ., 8–ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಪತ್ತೆಯಾದ ಈ ಪ್ರಕರಣಗಳಲ್ಲಿ ಒಟ್ಟು 22 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ ಎಂದರು.



ಸುದ್ದಿಗೋಷ್ಠಿಯಲ್ಲಿ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾತನಾಡಿದರು.

ಎನ್.ಆರ್.ಠಾಣೆ: 1 ಸುಲಿಗೆ ಪ್ರಕರಣ –ಐವರ ಬಂಧನ, 7.92 ಲಕ್ಷ ನಗದು ಜಪ್ತಿ

ದೇವರಾಜ ಠಾಣೆ: 1 ಮನೆಗಳ್ಳತನ – ಓರ್ವನ ಬಂಧನ, 18 ಲಕ್ಷ ರೂ. ಚಿನ್ನಾಭರಣ, ಮತ್ತೊಂದು ಪ್ರಕರಣದಲ್ಲಿ ಓರ್ವನ ಬಂಧಿಸಿ, –78 ಸಾವಿರ ರೂ. ಮೌಲ್ಯದ 7 ಮೊಬೈಲ್ ವಶಪಡಿಸಿಕೊಳ್ಳಲಾಗಿದೆ. ಕನ್ನ ಕಳವು, 2 ವಾಹನ ಕಳವು ಪ್ರಕರಣದಲ್ಲಿ ಇಬ್ಬರನ್ನು ಬಂಧಿಸಿ, 1.1 ಲಕ್ಷ ರೂ. ಮೌಲ್ಯದ ಸ್ಕೂಟರ್, ಎಲ್ಇಡಿ ಟಿವಿ ವಶಕ್ಕೆ ಪಡೆಯಲಾಗಿದೆ ಎಂದರು.

ವಿದ್ಯಾರಣ್ಯಪುರಂ ಠಾಣೆ: ಸರಗಳ್ಳತನ, ದೇವಸ್ಥಾನ ಕಳವು, ಬೈಕ್ ಕಳವು ಪ್ರಕರಣದಲ್ಲಿ ಇಬ್ಬರನ್ನು ಬಂಧಿಸಿ 2.65 ಲಕ್ಷ ರೂ. ಮೌಲ್ಯದ ಚಿನ್ನಾಭರಣ, 2 ದ್ವಿಚಕ್ರ ವಾಹನ ವಶ, ಮತ್ತೊಂದು ಕಳ್ಳತನ ಪ್ರಕರಣದಲ್ಲಿ ಮಹಿಳೆ ಬಂಧಿಸಿ 3.2 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ.

ವಿಜಯನಗರ ಠಾಣೆ: ಮನೆ ಕಳ್ಳತನ ಪ್ರಕರಣದಲ್ಲಿ ಮೂವರ ಬಂಧಿಸಿ 6 ಲಕ್ಷ ಮೌಲ್ಯದ ನಗದು, ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದರು.

ಆಲನಹಳ್ಳಿ ಠಾಣೆ: ಕಳ್ಳತನ ಪ್ರಕರಣದಲ್ಲಿ ಇಬ್ಬರನ್ನು ಬಂಧಿಸಿ 32 ಸಾವಿರ ರೂ. ನಗದು ವಶ.

ಕುವೆಂಪುನಗರ ಠಾಣೆ: ಬೈಕ್ ಕಳವು ಪ್ರಕರಣದಲ್ಲಿ ಓರ್ವನ ಬಂಧಿಸಿ 2 ಬೈಕ್ ವಶಕ್ಕೆ ಪಡೆಯಲಾಗಿದೆ.

ಮೇಟಗಳ್ಳಿ ಠಾಣೆ: ಬೈಕ್ ಕಳವು– ಮೂವರ ಬಂಧನ– ಮೂರು ಸ್ಕೂಟರ್ ವಶಕ್ಕೆ ಪಡೆಯಲಾಗಿದೆ.

303 ಪ್ರಕರಣ ದಾಖಲು: ಒಂದು ತಿಂಗಳ ಅವಧಿಯಲ್ಲಿ ನಗರಾದ್ಯಂತ ಪಾರ್ಕ್, ಪಿ.ಜಿ.ಗಳು. ಲಾಡ್ಜ್‌ಗಳು ಮತ್ತು ಇತರೆ ಸಾರ್ವಜನಿಕರ ಸ್ಥಳಗಳಲ್ಲಿ ವಿಶೇಷ ತಪಾಸಣೆ ಕೈಗೊಂಡು ಸುಮಾರು 2,400ಕ್ಕೂ ಅಧಿಕ ಅನುಮಾನಿತ ಗಾಂಜಾ ಸೇವನೆ ಮಾಡುವವರನ್ನು ಪತ್ತೆ ಮಾಡಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಇವರಲ್ಲಿ ಮಾದಕ ಪದಾರ್ಥ ಸೇವನೆ ದೃಢಗೊಂಡ 316 ಆರೋಪಿಗಳ ವಿರುದ್ಧ ಒಟ್ಟು 303 ಪ್ರಕರಣಗಳನ್ನು ದಾಖಲಿಸಲಾಗಿದೆ. ಅಲ್ಲದೆ ನಗರದ ವಿವಿಧ ಸ್ಥಳಗಳಲ್ಲಿ ವಿಶೇಷ ದಾಳಿಗಳನ್ನು ಕೈಗೊಂಡು ಮಾದಕ ಪದಾರ್ಥಗಳನ್ನು ಹೊಂದಿದ್ದ ಮೇರೆಗೆ ಒಟ್ಟು 23 ಪ್ರಕರಣಗಳನ್ನು ದಾಖಲಿಸಿ 24 ಆರೋಪಿಗಳನ್ನು ಬಂಧಿಸಲಾಗಿದ್ದು, 13 ಕೆ.ಜಿ. 930 ಗ್ರಾಂ ಗಾಂಜಾ, 149 ಗ್ರಾಂ 53 ಮಿ.ಗ್ರಾಂ ಸಿಂಥೆಟಿಕ್ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಡಿಸಿಪಿಗಳಾದ ಸುಂದರ್‌ರಾಜ್, ಬಿಂದುಮಣಿ ಇದ್ದರು.

‘ಕೊರವಂಜಿ ಕಸ್ತೂರಿ’, ‘ನಾ.ಕಸ್ತೂರಿ ಅವರ ಬದುಕು–ಬರಹ’ ಕೃತಿ ಲೋಕಾರ್ಪಣೆ

ಹಾಸ್ಯದ ಮೂಲಕವೇ ವಾಸ್ತವ ಸಂಗತಿ ತೆರೆದಿಡುತ್ತಿದ್ದ ನಾ.ಕಸ್ತೂರಿ



‘ನಾ.ಕಸ್ತೂರಿ ಸಂಸ್ಮರಣೋತ್ಸವ’ದಲ್ಲಿ ‘ಕೊರವಂಜಿ ಕಸ್ತೂರಿ’ ಹಾಗೂ ‘ನಾ.ಕಸ್ತೂರಿ ಅವರ ಬದುಕು–ಬರಹ’ ಕೃತಿಯನ್ನು ಗುರುವಾರ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಮೈಸೂರು, ಆ.14(ಜಿಎ)–ಹಾಸ್ಯದ ಮೂಲಕವೇ ವಾಸ್ತವ ಸಂಗತಿಯನ್ನು ತೆರೆದಿಡುವ ಪ್ರತಿಭೆ ನಾ.ಕಸ್ತೂರಿ ಅವರದ್ದಾಗಿತ್ತು ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ‘ನಾ.ಕಸ್ತೂರಿ ಹಾಸ್ಯ ರಸಿಕ ವೃಂದ’ ಹಾಗೂ ‘ಆಕಾಶವಾಣಿ ಮೈಸೂರು’ ಆಯೋಜಿಸಿದ್ದ ‘ನಾ.ಕಸ್ತೂರಿ ಸಂಸ್ಮರಣೋತ್ಸವ’ದಲ್ಲಿ ‘ಕೊರವಂಜಿ ಕಸ್ತೂರಿ’ ಹಾಗೂ ‘ನಾ.ಕಸ್ತೂರಿ ಅವರ ಬದುಕು–ಬರಹ’ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಅವರ ಮಾತೃಭಾಷೆ ಮಲಯಾಳಂ ಆದರೂ ಕನ್ನಡ ಸಾಹಿತ್ಯ ಲೋಕಕ್ಕೆ ನಾ.ಕಸ್ತೂರಿ ಕೊಡುಗೆ ಅನನ್ಯ. ಬನುಮಯ್ಯ ಪ್ರೌಢಶಾಲೆಯಲ್ಲಿ ಅಧ್ಯಾಪಕ ವೃತ್ತಿ ಆರಂಭಿಸಿದ ಅವರು, 25ನೇ ವಯಸ್ಸಿಗೆ ಕನ್ನಡ ಕಲಿತು, ನಾಟಕಗಳು, ಕಾದಂಬರಿಗಳು, ಅನುವಾದ ಸೇರಿದಂತೆ ಎಲ್ಲ ಪ್ರಕಾರಗಳಲ್ಲಿ ಅತ್ಯಮೂಲ್ಯ ಕೃತಿಗಳನ್ನು ಕೊಟ್ಟರು. ತಮ್ಮ ಬರಹಗಳಿಂದ ಹಾಸ್ಯಪ್ರಜ್ಞೆ ಮೂಡಿಸುವ ಕೆಲಸವನ್ನು ಸಮರ್ಥವಾಗಿ ಮಾಡಿದ್ದರು ಎಂದರು.

ಕುವೆಂಪು ಸಾಹಿತ್ಯ ಸೃಷ್ಟಿಯಲ್ಲಿ ಕಸ್ತೂರಿ ಅವರ ಪ್ರೋತ್ಸಾಹವಿದೆ. ‘ನನ್ನ ಕವನಗಳ ಯೋಗ್ಯತೆ ಕಂಡು ಹಿಡಿದು ಉತ್ತೇಜನ ಕೊಟ್ಟವರು ಕಸ್ತೂರಿ ಮತ್ತು ಸಿದ್ದೇಶ್ವರಾನಂದರು’ ಎಂದು ಕುವೆಂಪು ಅವರೇ ಬರೆದುಕೊಂಡಿದ್ದಾರೆ. ಹಾಗೇ ನಾ.ಕಸ್ತೂರಿ ಅವರು ಮೈಸೂರಿನಲ್ಲಿ ರಾಮಕೃಷ್ಣ ಆಶ್ರಮದ ಸ್ಥಾಪನೆಗೆ ಸಾಕಷ್ಟು ಶ್ರಮಿಸಿದರು. ಸಿದ್ದೇಶ್ವರಾನಂದ ಅವರು ಕಸ್ತೂರಿ ಅವರ ಬಾಲ್ಯದ ಗೆಳೆಯ. ಅಲ್ಲದೇ ಗೋಪಾಲಸ್ವಾಮಿ ಅವರು ಆರಂಭಿಸಿದ ಬಾನುಲಿ ಕೇಂದ್ರಕ್ಕೆ ‘ಆಕಾಶವಾಣಿ’ ಎಂದೆಸರಿಟ್ಟವರೇ ಕಸ್ತೂರಿ ಎಂದು ಸ್ಮರಿಸಿದರು. ಯಾವುದೇ ನಗುವಿನ ಹಿಂದೆ ಸಂಕಟವಿರುತ್ತದೆ. ಆರು ಬೆರಳುಗಳು ಅನಿಷ್ಟವೆಂದು ಅವರ ಎರಡೂ ಕೈಗಳ 6ನೇ ಬೆರಳನ್ನು ಅವರ ಅಜ್ಜಿ ಕತ್ತರಿಸಿದ್ದರು. ಆ ‘ಸಿಸೇರಿಯನ್’ನಿಂದ ಅದೃಷ್ಟ ಎಂದೂ ಜೊತೆಯಲ್ಲಿಲ್ಲವೆಂದು ಹೇಳಿ ನಗಿಸುತ್ತಿದ್ದರು. ಬದುಕಿನ ಯಾವುದೇ ನೋವನ್ನು ಮನಸ್ಸಿಗೆ ಹಚ್ಚಿಕೊಳ್ಳದೇ ಸಹಜೀವಿಯಾಗಿ ಬದುಕಿದರು ಎಂದರು. ಕಾರ್ಯಕ್ರಮದಲ್ಲಿ ರಾಮಾನುಜ, ಪ್ರೊ.ಎಂ.ಕೃಷ್ಣೇಗೌಡ, ಬೇಲೂರು ರಾಮಮೂರ್ತಿ, ರಾಜಾರಾಂ ಉಪಸ್ಥಿತರಿದ್ದರು.

ಮೆಡಿಕಲ್ ಕಾಲೇಜು ಆಸ್ಪತ್ರೆ ಇರುವ ಜಿಲ್ಲೆಯ ತಾಲೂಕಲ್ಲಿ ಜಿಲ್ಲಾಸ್ಪತ್ರೆ ಆರಂಭ

ಪ್ರಸಕ್ತ ವರ್ಷ ಕೊಳ್ಳೇಗಾಲ ಸೇರಿ ಮೂರು ಕಡೆ ಪ್ರಾರಂಭ

ಬೆಂಗಳೂರು,ಆ.14(ಕೆಎಂಶಿ)–ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿರುವ ಜಿಲ್ಲೆಗಳ ಆಯಾ ತಾಲೂಕು ಕೇಂದ್ರದಲ್ಲಿ ಜಿಲ್ಲಾ ಆಸ್ಪತ್ರೆಗಳನ್ನು ಪ್ರಾರಂಭಿಸುವುದಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.



ಪ್ರಶ್ನೋತ್ತರ ವೇಳೆಯಲ್ಲಿ ಚನ್ನಬಸಪ್ಪ, ಅರಗ ಜ್ಞಾನೇಂದ್ರ, ಶಾರದಾ ಪೂರ್‍ಯಾನಾಯ್ಕ ಸೇರಿದಂತೆ ಸದಸ್ಯರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಪ್ರಸಕ್ತ ವರ್ಷ ಕೊಳ್ಳೇಗಾಲ, ಸಿಂಧನೂರು, ಬಸವಕಲ್ಯಾಣದಲ್ಲಿ ಪ್ರಾರಂಭಿಸುವುದಾಗಿ ತಿಳಿಸಿದರು. ವೈದ್ಯಕೀಯ ಕಾಲೇಜು ಆರಂಭ ಸಂದರ್ಭದಲ್ಲಿ ಜಿಲ್ಲಾಸ್ಪತ್ರೆಯನ್ನೇ ವೈದ್ಯಕೀಯ ಶಿಕ್ಷಣ ಸಂಸ್ಥೆಯನ್ನಾಗಿ ಮಾರ್ಪಡಿಸಲಾಗುತ್ತದೆ. ಜಿಲ್ಲೆಯ ದೊಡ್ಡ ತಾಲೂಕಿನಲ್ಲಿ ಹಾಲಿ ಸರ್ಕಾರಿ ಆಸ್ಪತ್ರೆಗಳನ್ನೇ ಅಭಿವೃದ್ಧಿಪಡಿಸಿ ಜಿಲ್ಲಾಸ್ಪತ್ರೆಗಳನ್ನಾಗಿ ಪರಿವರ್ತಿಸಲಾಗುವುದು ಎಂದರು.

ಅಭಿನಂದನೆ...



ಜಯಪುರ ಬಿಜೆಪಿ ಮಹಾಶಕ್ತಿ ಕೇಂದ್ರಕ್ಕೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಗಿರೀಶ್ ಬರಡನಪುರ ಅವರನ್ನು ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಪಕ್ಷದ ಶಾಲು ಹೊದಿಸಿ, ತ್ರಿವರ್ಣ ಧ್ವಜ ನೀಡಿ, ಅಭಿನಂದಿಸಿದರು. ಕ್ಷೇತ್ರದ ಅಧ್ಯಕ್ಷ ವೈ.ಟಿ.ರವಿ, ಪ್ರಧಾನ ಕಾರ್ಯದರ್ಶಿ ಹೇಮಂತ್‌ಕುಮಾರ್‌ಗೌಡ, ಶಿವಕುಮಾರ್ ಚಿಕ್ಕಕಾನ್ಯ, ಮುಖಂಡರಾದ ಗೆಜ್ಜಗಳ್ಳಿ ಮಹೇಶ್, ಡಿ.ಚಂದ್ರಶೇಖರ್, ಈರಪ್ಪ ಮೋಹನ, ನಾರಾಯಣ, ಪ್ರಭು, ಲೋಹಿತ್, ಮಹೇಶ್, ಸುನಿಲ್ ಇತರರಿದ್ದರು.

ಕ್ರೇನ್‌ಗೆ ಬುಲೆಟ್ ಬೈಕ್ ಡಿಕ್ಕಿ: ವಿದ್ಯಾರ್ಥಿ ಸಾವು, ಮತ್ತೊಬ್ಬನಿಗೆ ತೀವ್ರ ಗಾಯ

● ಮೈಸೂರು ವಿವಿಯ ಬಯಲು ರಂಗಮಂದಿರದ ಬಳಿ ದುರಂತ ● ಕಾರೊಂದನ್ನು ಹಿಂದಿಕ್ಕುವ ಭರದಲ್ಲಿ ಘೋರ ಘಟನೆ ● ಹೆವಿ ಡ್ಯೂಟಿ ಕ್ರೇನ್ ಹರಿದು ನಜ್ಜುಗುಜ್ಜಾದ ಸವಾರನ ದೇಹ



ಮೈಸೂರು ವಿವಿ ಬಯಲು ರಂಗಮಂದಿರದ ಬಳಿ ಕ್ರೇನ್‌ಗೆ ಬುಲೆಟ್ ಬೈಕ್ ಡಿಕ್ಕಿ ಹೊಡೆದಿರುವುದು.



ಕ್ರೇನ್ ಹರಿದು ಬುಲೆಟ್ ಬೈಕ್ ನಜ್ಜುಗುಜ್ಜಾಗಿರುವುದು.

ಮೈಸೂರು,ಆ.14(ಎಂಟಿವೈ)–ರಾಯಲ್ ಎನ್ಫಿಲ್ಡ್ (ಬುಲೆಟ್) ಬೈಕ್ ಹೆವಿ ಡ್ಯೂಟಿ ಕ್ರೇನ್‌ಗೆ ಡಿಕ್ಕಿ ಹೊಡೆದ ಪರಿಣಾಮ ಓರ್ವ ವಿದ್ಯಾರ್ಥಿ ಮೃತಪಟ್ಟು, ಮತ್ತೋರ್ವ ಗಾಯಗೊಂಡಿರುವ ಘಟನೆ ಕಳೆದ ಮಧ್ಯರಾತ್ರಿ ಮೈಸೂರು ವಿಶ್ವವಿದ್ಯಾನಿಲಯದ ಬಯಲು ರಂಗಮಂದಿರದ ಬಳಿ ಸಂಭವಿಸಿದೆ. ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಹನುಮಂತ ಶೆಟ್ಟಿ ಎಂಬುವರ ಮಗ, ಜೆಸಿ ಕಾಲೇಜಿನ ದ್ವಿತೀಯ ವರ್ಷದ ಬಿಸಿಎ ವಿದ್ಯಾರ್ಥಿ ಎಂ.ಹೆಚ್.ಶಿವ(19) ದುರಂತದಲ್ಲಿ ಮೃತಪಟ್ಟಿದ್ದು, ಹಿಂಬದಿ ಸವಾರ ಕುವೆಂಪು ನಗರ ನಿವಾಸಿ, ಸೇಪಿಯಂಟ್ ಕಾಲೇಜಿನಲ್ಲಿ ದ್ವಿತೀಯ ಬಿಕಾಂ ವಿದ್ಯಾರ್ಥಿಯಾಗಿರುವ ಬೆಂಗಳೂರು ಮೂಲದ ದಿನೇಶ್(19) ಗಂಭೀರವಾಗಿ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಎಂ.ಹೆಚ್.ಶಿವ ಹಾಗೂ ದಿನೇಶ್ ಕಳೆದ ರಾತ್ರಿ 11 ಗಂಟೆಗೆ ಕಾಫಿ ಕುಡಿಯಲೆಂದು ಕಾಳಿದಾಸ ರಸ್ತೆಗೆ ಬುಲೆಟ್ ಬೈಕ್‌ನಲ್ಲಿ (ಕೆಎ.01, ಜೆಯು.8932)ನಲ್ಲಿ ಹೋಗಿದ್ದಾರೆ. ಅಲ್ಲಿಂದ ಮನೆಗೆ ವಾಪಸ್ಸಾಗುವ ವೇಳೆ ಬಯಲು ರಂಗಮಂದಿರದ ಬಳಿ ಮುಂದೆ ಹೋಗುತ್ತಿದ್ದ ಕಾರೊಂದನ್ನು ಓವರ್‌ಟೇಕ್ ಮಾಡಲು ಮುಂದಾದಾಗ ಎದುರಿನಿಂದ ಬರುತ್ತಿದ್ದ ಹೆವಿ ಡ್ಯೂಟಿ ಕ್ರೇನ್ (ಕೆಎ.01, ಎಂಹೆಚ್.2402)ಗೆ ಬೈಕ್ ಡಿಕ್ಕಿ ಹೊಡೆದಿದೆ. ಈ ವೇಳೆ ಬೈಕ್ ಮೇಲೆ ಕ್ರೇನ್ ಹರಿದಿದ್ದು, ಬೈಕ್ ಚಾಲನೆ ಮಾಡುತ್ತಿದ್ದ ಶಿವನ ತಲೆ ಹೊರತುಪಡಿಸಿ, ಉಳಿದಂತೆ ದೇಹವೆಲ್ಲಾ ಛಿದ್ರಗೊಂಡಿದೆ. ಹಿಂಬದಿ ಸವಾರ ದಿನೇಶ್ ರಸ್ತೆ ಬದಿಗೆ ಎಸೆಯಲ್ಪಟ್ಟಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದರೂ ಗಂಭೀರವಾಗಿ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಅತೀ ವೇಗವಾಗಿ ಬೈಕ್ ಚಾಲನೆ ಮಾಡುತ್ತಿದ್ದ ಶಿವ ಕ್ರೇನ್ ಬರುತ್ತಿರುವುದನ್ನು ಗುರುತಿಸದೇ ಇರುವುದು ಹಾಗೂ ಬೃಹತ್ ಗಾತ್ರದ ಕ್ರೇನ್‌ಗೆ ಸಣ್ಣ ಹೆಡ್‌ಲೈಟ್ ಇರುವುದು ಈ ಅಪಘಾತಕ್ಕೆ ಕಾರಣವಿರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ವಿಷಯ ತಿಳಿದು ಸ್ಥಳಕ್ಕೆ ಬಂದ ವಿವಿ ಪುರಂ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಲವ, ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದರು. ಅಲ್ಲದೆ, ಎರಡೂ ವಾಹನಗಳನ್ನು ವಶಕ್ಕೆ ಪಡೆದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು, ಇಂದು ಬೆಳಗ್ಗೆ ಮೈಸೂರು ವೈದ್ಯಕೀಯ ಕಾಲೇಜು ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ವಿದ್ಯಾರ್ಥಿ ಶಿವು ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ರಸ್ತೆ ಸ್ವಚ್ಛ: ಅಪಘಾತ ನಡೆದ ಸ್ಥಳದಲ್ಲಿ ಬುಲೆಟ್ ಬೈಕ್‌ನ ಭಾಗಗಳು ಹರಡಿದ್ದು, ಆಯಿಲ್ ರಸ್ತೆ ಮೇಲೆ ಚೆಲ್ಲಲ್ಪಟ್ಟಿದ್ದರಿಂದ ಬೈಕ್‌ಗಳು ಜಾರುವ ಸಂಭವವಿದ್ದ ಕಾರಣ ಗುರುವಾರ ಬೆಳಗ್ಗೆ ರಸ್ತೆಯಲ್ಲಿ ಕೆಲ ಕಾಲ ವಾಹನ ಸಂಚಾರ ನಿರ್ಬಂಧಿಸಿ, ಅಪಘಾತ ನಡೆದ ಸ್ಥಳದಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಛಿದ್ರವಾದ ಬೈಕ್‌ನ ಅವಶೇಷಗಳನ್ನೆಲ್ಲಾ ಗುಡಿಸಿ ಸಂಗ್ರಹಿಸಲಾಯಿತು. ಆಯಿಲ್‌ಗೆ ಮಣ್ಣು ಸುರಿದು ವಾಹನಗಳು ಜಾರದಂತೆ ಕ್ರಮ ಕೈಗೊಳ್ಳಲಾಯಿತು.

ದಿನೇಶ್ ಗೂಳಿಗೌಡ ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷ



ಮೈಸೂರು, ಆ.14–ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷರಾಗಿ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ಹಿಂದೆ ದಿನೇಶ್ ಗೂಳಿಗೌಡ ಅವರು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥರಾಗಿ ಹಾಗೂ ಕೆಪಿಸಿಸಿ ಮಾಧ್ಯಮ ಘಟಕದ ಉಪಾಧ್ಯಕ್ಷರಾಗಿ ಹತ್ತಾರು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದಾರೆ.

ತೆರಿಗೆ ಸೋರಿಕೆ ತಡೆ ವಿಧೇಯಕ ಅಂಗೀಕಾರ

ಬೆಂಗಳೂರು, ಆ. 14(ಕೆಎಂಶಿ)– ತೆರಿಗೆ ಸೋರಿಕೆ ತಡೆ ಹಾಗೂ ದುರುಪಯೋಗ ನಿಯಂತ್ರಣಕ್ಕೆ ಅವಕಾಶ ಕಲ್ಪಿಸುವ 2025ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ (ತಿದ್ದುಪಡಿ) ವಿಧೇಯಕಕ್ಕೆ ವಿಧಾನಸಭೆಯಲ್ಲಿ ಅಂಗೀಕಾರ ದೊರೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ದೇಶದಲ್ಲಿ ಏಕರೂಪ ಜಿಎಸ್‌ಟಿ ತೆರಿಗೆ ಇದೆ, ಜಿಎಸ್‌ಟಿ ಸೋರಿಕೆ, ದುರುಪಯೋಗ ತಡೆಗಟ್ಟಲು ಪ್ರಯತ್ನ ಮಾಡಲಾಗುತ್ತಿದೆ, ಜಿಎಸ್‌ಟಿ ಮರುಪಾವತಿ ಮಾಡಿಕೊಳ್ಳುವ ವ್ಯವಸ್ಥಿತ ಜಾಲವಿದೆ, ಇದಕ್ಕೆ ಕಡಿವಾಣ ಹಾಕಬೇಕಿದೆ ಎಂದರು.

ಸಭಾಧ್ಯಕ್ಷ ಯು.ಟಿ.ಖಾದರ್ ತಿದ್ದುಪಡಿ ಮಸೂದೆಯನ್ನು ಮತಕ್ಕೆ ಹಾಕಿದಾಗ ಸದನ ಧ್ವನಿಮತದ ಅಂಗೀಕಾರ ನೀಡಿತು.

ಆ.17ರಂದು ಚುಂಚನಕಟ್ಟೆಯಲ್ಲಿ ಅಂಬೇಡ್ಕರ್ ಭವನ ಉದ್ಘಾಟನೆ


ಮೈಸೂರು, ಆ.14(ಎಂಕೆ)– ಕೆ.ಆರ್ ನಗರ ತಾಲೂಕು ಚುಂಚನಕಟ್ಟೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಬಿ.ಆರ್ ಅಂಬೇಡ್ಕರ್ ಸಮುದಾಯ ಭವನವನ್ನು ಆ.17ರಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಉದ್ಘಾಟಿಸಲಿದ್ದಾರೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಅಭಿವೃದ್ಧಿ ಸಂಘದ ಅಧ್ಯಕ್ಷ ವೈ.ಗೋಪಾಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಘಾಟನಾ ದಿನಕ್ಕೂ ಮುಂಚಿತವಾಗಿ ಅಂದರೆ, ಆ.16ರಂದು ಬೆಳಿಗ್ಗೆ 11ಕ್ಕೆ ದೇವತಾ ಪೂಜಾ ಕಾರ್ಯಕ್ರಮಗಳು ನಡೆಯಲಿದ್ದು, ಮರುದಿನ ನೂತನ ಭವನ ಉದ್ಘಾಟನೆಯಾಗಲಿದೆ ಎಂದರು.

ಭವನದ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಶಾಸಕ ಡಿ.ರವಿಶಂಕರ್, ಎಂಎಲ್‌ಸಿ ಎ.ಹೆಚ್ ವಿಶ್ವನಾಥ್, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಎಂ.ಕೆ.ಸೋಮಶೇಖರ್, ವಿಶೇಷ ಆಹ್ವಾನಿತರಾಗಿ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮಿಗೌಡ, ಕುಪ್ಪೆ ಗ್ರಾಪಂ ಅಧ್ಯಕ್ಷೆ ಶಾರದಮ್ಮ, ಉಪಾಧ್ಯಕ್ಷೆ ಗೀತಾ, ತಹಶೀಲ್ದಾರ್ ರುಕೀಯ ಬೇಗಂ, ಉದ್ಯಮಿಗಳಾದ ಬಂಗಾರಪ್ಪ, ರಾಜೇಶ್ ಪಳನಿ, ಜಿ.ಹರ್ಷವರ್ಧನ್, ಫುಟ್‌ಬಾಲ್ ಆಟಗಾರ ಎಂ.ಎಸ್.ಮಧುಸೂದನ್, ರಾಜು, ಕಾಂಗ್ರೆಸ್ ಮುಖಂಡ ಆರ್.ಸಿ.ಮಹೇಶ್ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಎಂ.ನಾಗರಾಜು, ಸದಸ್ಯರಾದ ವೆಂಕಟೇಶ್, ಚಿಕ್ಕಯ್ಯಾ ಲಕ್ಕಯ್ಯ, ಪೃಥ್ವಿರಾಜ್, ಪ್ರಸಾದ್ ಇದ್ದರು.

ದೇಶ – ವಿದೇಶ

ಸೇನಾ ರಾಕೆಟ್ ಪಡೆ ರಚನೆ: ಪಾಕಿಸ್ತಾನ ಪ್ರಧಾನಿ ಘೋಷಣೆ



ಇಸ್ಲಾಮಾಬಾದ್: ಪಾಕಿಸ್ತಾನವು ಹೊಸದಾಗಿ ಸೇನಾ ರಾಕೆಟ್ ಪಡೆಯನ್ನು ರಚಿಸಲಿದೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಘೋಷಿಸಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನದ ಯುದ್ಧಾಸ್ತ್ರಗಳನ್ನು ಬಳಸುವ ನೈಪುಣ್ಯವನ್ನು ಈ ಪಡೆ ಹೊಂದಿರುತ್ತದೆ. ದೇಶದ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಈ ಪಡೆ ಒಂದು ಮೈಲುಗಲ್ಲಾಗಲಿದೆ ಎಂದು ಹೇಳಿದ್ದಾರೆ. ಪಾಕಿಸ್ತಾನದ 78ನೇ ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನವಾದ ಬುಧವಾರ ರಾತ್ರಿ ಅವರು ಈ ವಿಷಯ ಪ್ರಕಟಿಸಿದ್ದಾರೆ. ಈ ಪಡೆಯ ಕಾರ್ಯನಿರ್ವಹಣೆ ಮತ್ತು ಜವಾಬ್ದಾರಿಗಳ ಕುರಿತು ಅವರು ಹೆಚ್ಚಿನ ಮಾಹಿತಿಯನ್ನು ನೀಡಲಿಲ್ಲ. ಪಾಕಿಸ್ತಾನದ ಈ ಹೊಸ ಪಡೆಯ ರಚನೆಯು ಚೀನಾದಲ್ಲಿನ ಪೀಪಲ್ ಲಿಬರೇಷನ್ ಆರ್ಮಿಯ ರಾಕೆಟ್ ಪಡೆಯಿಂದ ಸ್ಫೂರ್ತಿ ಪಡೆದಿದೆ ಎನ್ನಲಾಗಿದೆ. ಚೀನಾದ ಈ ಪಡೆಯು ಭೂ ಆಧಾರಿತ ಖಂಡಾಂತರ ಕ್ಷಿಪಣಿಗಳು, ಹೈಪರ್‌ಸಾನಿಕ್, ಕ್ರೂಸ್ ಕ್ಷಿಪಣಿಗಳು ಸೇರಿದಂತೆ ಪರಮಾಣು ಮತ್ತು ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಶಸ್ತ್ರಾಗಾರದ ನಿಯಂತ್ರಣ ಹೊಂದಿದೆ. ಭಾರತ ಮತ್ತು ಪಾಕ್ ನಡುವೆ ಇತ್ತೀಚೆಗೆ ನಡೆದ 4 ದಿನದ ಸೇನಾ ಸಂಘರ್ಷವನ್ನೂ ಪ್ರಸ್ತಾಪಿಸಿದರು.

ಜಮ್ಮು–ಕಾಶ್ಮೀರದ ಕಿಶ್ತ್‌ವಾಡದಲ್ಲಿ ಮೇಘಸ್ಫೋಟ; 40 ಸಾವು


ಶ್ರೀನಗರ: ಜಮ್ಮು–ಕಾಶ್ಮೀರದ ಕಿಶ್ತವಾಡ ಜಿಲ್ಲೆಯ ಚಸೋತಿ ಗ್ರಾಮದಲ್ಲಿ ಗುರುವಾರ ಭಾರಿ ಮೇಘಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ ಇಬ್ಬರು ಸಿಐಎಸ್‌ಎಫ್ ಯೋಧರು ಸೇರಿದಂತೆ 40 ಮಂದಿ ಮೃತಪಟ್ಟಿದ್ದಾರೆ. 120ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಧಾರಾಕಾರ ಮಳೆ ಸುರಿದು ಗುರುವಾರ ಮಧ್ಯಾಹ್ನ ಸುಮಾರು 12 ಗಂಟೆಯಿಂದ 1 ಗಂಟೆ ಅವಧಿಯಲ್ಲಿ ಮೇಘಸ್ಫೋಟ ಸಂಭವಿಸಿದೆ. ಇದರಿಂದಾಗಿ ಮಚೈಲ್ ಮಾತಾ ಯಾತ್ರಾ ಮಾರ್ಗದಲ್ಲಿ ಹಠಾತ್ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಘಟನೆಯಲ್ಲಿ 200ಕ್ಕೂ ಅಧಿಕ ಮಂದಿ ನಾಪತ್ತೆಯಾಗಿದ್ದು, ಪ್ರವಾಹ ಸಂತ್ರಸ್ತರಿಗೆ ನೆರವು ತಲುಪಿಸುವುದಕ್ಕೂ ರಕ್ಷಣಾ ಸಿಬ್ಬಂದಿ ಪರದಾಡುವ ಸ್ಥಿತಿ ಎದುರಾಗಿದೆ ಎಂದೂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಹಲವು ಪ್ರದೇಶಗಳು ಸಂಪೂರ್ಣ ಕಲ್ಲು, ಮಣ್ಣು, ಕೆಸರಿನ ಅವಶೇಷಗಳಿಂದ ತುಂಬಿಹೋಗಿದ್ದು, ಅವುಗಳ ಅಡಿಯಲ್ಲಿ ಜನರು ಸಿಲುಕಿರುವ ಸಾಧ್ಯತೆಗಳಿವೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದ್ದು, ಅವಶೇಷಗಳ ಅಡಿಯಲ್ಲಿ ಸಿಲುಕಿರುವವರನ್ನು ರಕ್ಷಿಸಲು ಸಿಬ್ಬಂದಿ ಕಾರ್ಯಪ್ರವೃತ್ತರಾಗಿದ್ದಾರೆ ಎಂದು ರಾಜ್ಯ ವಿಪತ್ತು ಪರಿಹಾರ ಪಡೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉಕ್ರೇನ್ ಶಾಂತಿಗೆ ಅಡ್ಡಿಯಾದರೆ ಪುಟಿನ್ ಕೆಟ್ಟ ಪರಿಣಾಮ ಎದುರಿಸಬೇಕಾದೀತು

ವಾಷಿಂಗ್ಟನ್: ಉಕ್ರೇನ್‌ನಲ್ಲಿ ಶಾಂತಿ ಸ್ಥಾಪನೆಗೆ ಅಡ್ಡಿಪಡಿಸಿದರೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ಪುಟಿನ್ ಹಾಗೂ ಟ್ರಂಪ್ ಅವರು ಅಮೆರಿಕದ ಅಲಸ್ಕಾ ರಾಜ್ಯದಲ್ಲಿ ಶುಕ್ರವಾರ ಸಭೆ ಸೇರಿ, ರಷ್ಯಾ–ಉಕ್ರೇನ್ ಸಂಘರ್ಷ, ಶಾಂತಿ ಸ್ಥಾಪನೆ ಕುರಿತು ಮಾತುಕತೆ ನಡೆಸಲಿದ್ದಾರೆ ಎಂದು ವರದಿಯಾಗಿದೆ. ಅದಕ್ಕೂ ಮುನ್ನ (ಬುಧವಾರ) ಬರ್ಲಿನ್‌ಗೆ ಭೇಟಿ ನೀಡಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಜರ್ಮನ್ ಚಾನ್ಸಲರ್, ಯುರೋಪ್ ಹಾಗೂ ಅಮೆರಿಕದ ನಾಯಕರೊಂದಿಗೆ ಮಾತುಕತೆ ನಡೆಸಿದ್ದಾರೆ.



ಯುರೋಪಿಯನ್ ನಾಯಕರು ಮತ್ತು ಝೆಲೆನ್‌ಸ್ಕಿ ಅವರೊಂದಿಗಿನ ವರ್ಚುವಲ್ ಸಭೆ ಬಳಿಕ ಟ್ರಂಪ್ ಹೇಳಿಕೆ ನೀಡಿದ್ದಾರೆ. ಒಂದು ವೇಳೆ, ಸಂಘರ್ಷ ನಿಲ್ಲಿಸಲು ಪುಟಿನ್ ಒಪ್ಪದಿದ್ದರೆ ರಷ್ಯಾ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ, ‘ಹೌದು’ ಎಂದಿದ್ದಾರೆ. ಅವು ಯಾವ ರೀತಿಯ ಪರಿಣಾಮಗಳಾಗಿರುತ್ತವೆ ಅಥವಾ ಸುಂಕ ಹೇರಿಕೆಯೇ ಎಂದು ಕೇಳಿದ್ದಕ್ಕೆ, ನಾನು ಅದನ್ನು ಹೇಳಬೇಕಾಗಿಲ್ಲ. ಅವು ಗಂಭೀರ ಪರಿಣಾಮಗಳಾಗಿರುತ್ತವೆ ಎಂದಿದ್ದಾರೆ.

ನಟಿ ಶಿಲ್ಪಾಶೆಟ್ಟಿ, ಪತಿ ರಾಜ್‌ಕುಂದ್ರಾಗೆ ಮತ್ತೆ ಸಂಕಷ್ಟ: ವಂಚನೆ ಪ್ರಕರಣ ದಾಖಲು

ಮುಂಬೈ: ಬಾಲಿವುಡ್ ನಟಿ ಶಿಲ್ಪಾಶೆಟ್ಟಿ ಹಾಗೂ ಅವರ ಪತಿ ರಾಜ್‌ಕುಂದ್ರಾ ವಿರುದ್ಧ ವಂಚನೆ ಪ್ರಕರಣ ಗುರುವಾರ ದಾಖಲಾಗಿದೆ.




ಬೆಸ್ಟ್ ಡೀಲ್ ಟಿವಿ ಕಂಪನಿಗೆ ಸಂಬಂಧಿಸಿದಂತೆ 60.4 ಕೋಟಿ ಮೊತ್ತದ ಸಾಲ ಮತ್ತು ಹೂಡಿಕೆಯಲ್ಲಿ ಉದ್ಯಮಿ ದೀಪಕ್ ಕೊಠಾರಿ ಅವರಿಗೆ ವಂಚಿಸಲಾಗಿದೆ ಎಂಬ ಆರೋಪ ಸಂಬಂಧ ಜುಹು ಪೊಲೀಸ್ ಠಾಣೆಯ ಆರ್ಥಿಕ ವಂಚನೆ ವಿಭಾಗವು ಪ್ರಕರಣ ದಾಖಲಿಸಿಕೊಂಡಿದೆ.

ಆರೋಪವನ್ನು ಶಿಲ್ಪಾಶೆಟ್ಟಿ ಹಾಗೂ ರಾಜ್‌ಕುಂದ್ರಾ ನಿರಾಕರಿಸಿದ್ದಾರೆ. ಬಹಳ ಹಿಂದೆ ನಡೆದ ವ್ಯವಹಾರ ವಿದು. ಕಂಪನಿಯು ಆರ್ಥಿಕ ಸಂಕಷ್ಟ ಎದುರಿಸಿತ್ತು ಮತ್ತು ದೀರ್ಘಕಾಲದ ಕಾನೂನು ಸಂಘರ್ಷ ಎದುರಿಸುತ್ತಿತ್ತು ಎಂದು ಶಿಲ್ಪಾಶೆಟ್ಟಿ ಪರ ವಕೀಲ ಪ್ರಶಾಂತ್ ಪಾಟೀಲ್ ತಿಳಿಸಿದ್ದಾರೆ. ಈ ಪ್ರಕರಣದಲ್ಲಿ ನನ್ನ ಕಕ್ಷಿದಾರರು ಯಾವುದೇ ಕ್ರಿಮಿನಲ್ ಕೃತ್ಯ ನಡೆಸಿಲ್ಲ. ಪೊಲೀಸರು ಕೇಳಿರುವ ಎಲ್ಲಾ ದಾಖಲೆಗಳನ್ನು ಕಾಲಕಾಲಕ್ಕೆ ಸಲ್ಲಿಸಿದ್ದಾರೆ. ಹಣದ ವ್ಯವಹಾರದ ಮಾಹಿತಿಯನ್ನೂ ಹಂಚಿಕೊಂಡಿದ್ದಾರೆ. ಇದೊಂದು ಆಧಾರರಹಿತ ಆರೋಪವಾಗಿದ್ದು, ನನ್ನ ಕಕ್ಷಿದಾರರು ಸುಳ್ಳು ಆರೋಪ ಹೊರಿಸುತ್ತಿರುವವರ ವಿರುದ್ಧ ಪ್ರಕರಣ ದಾಖಲಿಸಲಿದ್ದಾರೆ ಎಂದು ಹೇಳಿದ್ದಾರೆ.

ಕುವೈತ್: ಕಲುಷಿತ ಮದ್ಯ ಸೇವಿಸಿ 13 ಸಾವು, 21 ಜನರಿಗೆ ಕುರುಡು; ಭಾರತೀಯರೇ ಹೆಚ್ಚು

ಕುವೈತ್: ಕಲುಷಿತ ಮದ್ಯದಿಂದ ವಿಷವಾದ ಮೆಥನಾಲ್ ಸೇವಿಸಿದ 63 ಜನರಲ್ಲಿ 13 ಮಂದಿ ಮೃತಪಟ್ಟು, 21 ಜನ ಶಾಶ್ವತವಾಗಿ ಕುರುಡರಾಗಿದ್ದಾರೆ ಎಂದು ಕುವೈತ್‌ನ ಆರೋಗ್ಯ ಸಚಿವಾಲಯವು ಹೇಳಿದೆ.



ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ಮಾಹಿತಿ ಹಂಚಿಕೊಂಡಿರುವ ಸಚಿವಾಲಯವು, ಇವರೆಲ್ಲರೂ ಏಷ್ಯಾ ಖಂಡಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ 50 ಜನರಿಗೆ ತಕ್ಷಣ ಡಯಾಲಿಸಿಸ್‌ನ ಅಗತ್ಯವಿದೆ. ಬದುಕುಳಿದಿರುವ 31 ಜನರನ್ನು ವೆಂಟಿಲೇಟರ್‌ನಲ್ಲಿ ಇಡಲಾಗಿದೆ ಎಂದಿದೆ.

ಮದ್ಯ ತಯಾರಿಕೆ ಅಥವಾ ಆಮದು ಮಾಡಿಕೊಳ್ಳುವುದಕ್ಕೆ ಕುವೈತ್‌ನಲ್ಲಿ ನಿಷೇಧ ಹೇರಲಾಗಿದೆ. ಹೀಗಿದ್ದರೂ, ಕೆಲವರು ಅಕ್ರಮವಾಗಿ ಮದ್ಯ ತಯಾರಿಸುತ್ತಾರೆ. ಯಾವುದೇ ಗುಣಮಟ್ಟ ಕಾಯ್ದುಕೊಳ್ಳದ ಇಂಥ ಮದ್ಯವನ್ನು ಗ್ರಾಹಕರು ಸೇವಿಸಿದ್ದರಿಂದ ಅನಾಹುತ ಸಂಭವಿಸಿದೆ ಎಂದಿದ್ದಾರೆ.

ಕಳೆದ 5 ದಿನಗಳಲ್ಲಿ ಇಂಥ ಕಳಪೆ ಗುಣಮಟ್ಟದ ಮದ್ಯ ಸೇವಿಸಿ 40 ಭಾರತೀಯರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಕೆಲವರ ಸ್ಥಿತಿ ಗಂಭೀರವಾಗಿದೆ. ಕೆಲವರು ಮೃತಪಟ್ಟಿದ್ದಾರೆ ಎಂದು ಭಾರತದ ರಾಯಭಾರ ಕಚೇರಿಗೆ ಕುವೈತ್ ಮಾಹಿತಿ ನೀಡಿದೆ.

ಹಬ್ಬದ ನೆಪದಲ್ಲಿ ಅಬ್ಬರದ ಡಿಜೆ ಧ್ವನಿವರ್ಧಕ ಬಳಸಿದರೆ

ಕಟ್ಟುನಿಟ್ಟಿನ ಕಾನೂನು ಕ್ರಮ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಚ್ಚರಿಕೆ

ಮಡಿಕೇರಿ,ಆ.14– ಹಬ್ಬದ ಹೆಸರಲ್ಲಿ ಡಿ.ಜೆ.ಧ್ವನಿವರ್ಧಕ ಬಳಸುವ ಮೂಲಕ ಜೋರು ಸದ್ದು ಮಾಡಿ ಶಬ್ದ ಮಾಲಿನ್ಯ ಉಂಟು ಮಾಡಿದ್ದಲ್ಲಿ ಕಟ್ಟು ನಿಟ್ಟಿನ ಕಾನೂನು ಕ್ರಮ ಜರುಗಿಸಲಾಗುವುದು. ಇದರಿಂದ ಯಾರಿಗೂ ವಿನಾಯಿತಿ ನೀಡುವ ಪ್ರಶ್ನೆಯೇ ಇಲ್ಲ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಚ್ಚರಿಕೆ ನೀಡಿದ್ದಾರೆ.

ನಗರದ ಗೌಡ ಸಮಾಜ ಸಭಾಂಗಣದಲ್ಲಿ ವಿವಿಧ ಗಣೇಶೋತ್ಸವ ಸಮಿತಿಗಳು, ಸೌಂಡ್ಸ್ ಸಿಸ್ಟಂ ಅಸೋಸಿಯೇಷನ್ ಪದಾಧಿಕಾರಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಜೊತೆಯಲ್ಲಿ ಡಿ.ಜೆ ಧ್ವನಿವರ್ಧಕದಲ್ಲಿ ಪ್ರೆಷರ್ ಮಿಡ್ ಬಳಕೆ ಹಾಗೂ ಡೆಸಿಬಲ್ ಮಾಪನ ಕುರಿತು ಜಿಲ್ಲಾ ಪೊಲೀಸ್ ಇಲಾಖೆ ಜನ ಜಾಗೃತಿ ಸಭೆ ನಡೆಸಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಎಸ್.ಪಿ.ರಾಮರಾಜನ್ ಹಬ್ಬಗಳ ಪಾವಿತ್ರ್ಯತೆ ಕಾಪಾಡುವುದು ಕೂಡ ಎಲ್ಲರ ಜವಾಬ್ದಾರಿಯಾಗಿದೆ. ಹಬ್ಬಾಚರಣೆಯ ಸಂದರ್ಭ ಭಕ್ತಿ ಭಾವನೆ ಇರಬೇಕು ಎಂದು ಸಲಹೆ ನೀಡಿದರು. ಅಬ್ಬರದ ಡಿ.ಜೆ, ಧ್ವನಿವರ್ಧಕ ಬಳಸಿದರೆ ಆರೋಗ್ಯದ ಸಮಸ್ಯೆಗಳು ಎದುರಾಗುತ್ತದೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು.



ಎಸ್‌ಪಿ ರಾಮರಾಜನ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಭವಿಷ್ಯದ ಮಕ್ಕಳ ಆರೋಗ್ಯ ಕಾಪಾಡುವ ಜವಾಬ್ದಾರಿ ಕೂಡ ನಮ್ಮ ನಿಮ್ಮೆಲರ ಮೇಲಿದೆ ಎಂದು ಹೇಳಿದರು. ನಿಗಧಿತ ಮಿತಿಗಿಂತ ಹೆಚ್ಚಿನ ಶಬ್ದ ಹೊರ ಸೂಸುವ ಧ್ವನಿವರ್ಧಕಗಳ ಬಳಕೆಗೆ ಸ್ವಯಂ ನಿಯಂತ್ರಣ ಹೇರಿಕೊಳ್ಳುವ ಅಗತ್ಯವಿದೆ. ಇದನ್ನು ಹೊರತುಪಡಿಸಿ ಡಿ.ಜೆ ಧ್ವನಿವರ್ಧಕ ಬಳಸಿ ಹದ್ದು ಮೀರಿದ ಶಬ್ದ ಮಾಲಿನ್ಯ ಉಂಟು ಮಾಡಿದ್ದಲ್ಲಿ ಸ್ಥಳದಲ್ಲೇ ಶಿಸ್ತು ಕ್ರಮ ಜರುಗಿಸುವುದಾಗಿ ಸ್ಪಷ್ಟಪಡಿಸಿದರು.

ಶಬ್ದದಿಂದ ಅಪಾರ ದುಷ್ಪರಿಣಾಮ: ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯರಾದ ಡಾ.ಶ್ರೀಕಾಂತ್ ಮಾತನಾಡಿ, ಡಿಜೆ ಧ್ವನಿವರ್ಧಕ ಹೊರ ಸೂಸುವ ಶಬ್ದದಿಂದ ವಯೋವೃದ್ಧರೂ, ಹೃದಯ ರೋಗ ಪೀಡಿತರು, ಗರ್ಭಿಣಿಯರು ಹಾಗೂ ನವಜಾತ ಶಿಶುಗಳು ಅತೀ ಹೆಚ್ಚು ತೊಂದರೆಗೆ ಒಳಗಾಗುತ್ತಾರೆ. ನವಜಾತ ಶಿಶುಗಳು ನಮ್ಮ ಮನೆಯ ವಾತಾವರಣದ ಶಬ್ದವನ್ನು ಗ್ರಹಿಸಿಕೊಂಡು ಮಾತು ಕಲಿಯುತ್ತವೆ. ಮಿತಿ ಮೀರಿದ ಶಬ್ದದಿಂದ ಇಂತಹ ನವ ಜಾತ ಶಿಶುಗಳು ಭವಿಷ್ಯದ ದಿನಗಳಲ್ಲಿ ಶಾಶ್ವತವಾಗಿ ಮೂಕವಾಗುವ ಮತ್ತು ಕಿವುಡು ಸಮಸ್ಯೆಯನ್ನು ಎದುರಿಸುತ್ತವೆ. ಮಾತ್ರವಲ್ಲದೆ ಡಿ.ಜೆ ಶಬ್ದದಿಂದ ಮೆದುಳಿನ ರಕ್ತ ಸ್ರಾವ, ಹೃದಯ ಸ್ಥಂಭನ, ಕಿವುಡು, ನರ ರೋಗದಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಕೂಡ ಎದುರಾಗುತ್ತವೆ ಎಂದು ಎಚ್ಚರಿಸಿದರು.

ಕಾನೂನು ಪಾಲಿಸೋಣ: ಅಡಿಷನಲ್ ಎಸ್‌ಪಿ ದಿನೇಶ್ ಕುಮಾರ್ ಮಾತನಾಡಿ ಡಿ.ಜೆ ಬಳಕೆಯ ಕುರಿತು ಪರ ವಿರೋಧ ಚರ್ಚೆಗಳಿವೆ. ಯುವ ಪೀಳಿಗೆಗೆ ಡಿ.ಜೆಯ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವ ಅಗತ್ಯವಿದೆ. ಶಬ್ದ ಮಾಲಿನ್ಯದ ಬಗ್ಗೆ ಸುಪ್ರಿಂ ಕೋರ್ಟ್ ಪರಿಸರ ರಕ್ಷಣೆ ಅಧಿನಿಯಮ, ಶಬ್ದ ಮಾಲಿನ್ಯ ನಿಯಂತ್ರಣ ಅಧಿನಿಯಮಗಳ ಕುರಿತು ಹಲವು ಆದೇಶಗಳನ್ನು ನೀಡಿದೆ. ಇದಕ್ಕಾಗಿಯೇ ಯಾವ ಪ್ರದೇಶದಲ್ಲಿ ಎಷ್ಟು ಪ್ರಮಾಣದ ಶಬ್ದ ಇರಬೇಕು ಎಂಬುದನ್ನು ಕೂಡ ಉಲ್ಲೇಖಿಸಲಾಗಿದೆ ಇದನ್ನು ಎಲ್ಲರೂ ಅರಿತುಕೊಳ್ಳಬೇಕು ಎಂದು ಮನವಿ ಮಾಡಿದರು. ಕಾನೂನುಗಳನ್ನು ಬಲವಂತವಾಗಿ ಕೂಡ ಜಾರಿಗೊಳಿಸಲು ಸಾಧ್ಯವಿದೆ. ಆದರೆ ಇದರ ಬದಲಾಗಿ ನಾವುಗಳೇ ಕಾನೂನಿನ ಜೊತೆಯಲ್ಲಿ ಕೈಜೋಡಿಸಿದರೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರಕಿದಂತಾಗುತ್ತದೆ ಎಂದು ಹೇಳಿದರು.

ಕರ್ನಲ್ ಕಂಡ್ರತಂಡ ಸಿ.ಸುಬ್ಬಯ್ಯ ನಿಧನ



ಮಡಿಕೇರಿ, ಆ.14– ಅಮ್ಮತ್ತಿ ಸಮೀಪದ ಬೈರಂಬಾಡ ನಿವಾಸಿ ಕಾಫಿ ಬೆಳೆಗಾರ ಕರ್ನಲ್ ಕಂಡ್ರತಂಡ ಸಿ.ಸುಬ್ಬಯ್ಯ(ಸುಬ್ರಮಣಿ) ನಿಧನರಾಗಿದ್ದಾರೆ. ಅವರಿಗೆ 76 ವರ್ಷ ವಯಸ್ಸಾಗಿತ್ತು. ಫೀ.ಮಾ.ಕಾರ್ಯಪ್ಪ ಜನರಲ್ ತಿಮ್ಮಯ್ಯ ಫೋರಂ ಅಧ್ಯಕ್ಷರಾಗಿದ್ದ ಕರ್ನಲ್ ಸುಬ್ರಮಣಿ ಅವರು ಜನರಲ್ ತಿಮ್ಮಯ್ಯ ಅವರು ಹುಟ್ಟಿದ ಮನೆ ನಗರದ ಸನ್ನಿ ಸೈಡ್ ನಿವಾಸವನ್ನು ಜನರಲ್ ತಿಮ್ಮಯ್ಯ ವಾರ್ ಮೆಮೋರಿಯಲ್ ಆಗಿ ಪರಿವರ್ತಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮದಲ್ಲಿ ಶುಕ್ರವಾರ ನಡೆಯಲಿದೆ.

ರಾಜಾ ಸೀಟಿನಲ್ಲಿ ಗಾಜಿನ ಸೇತುವೆ ಕಾನೂನಿಗೆ ವಿರುದ್ಧ

ಸೂಕ್ತ ಕ್ರಮಕ್ಕೆ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯ



ಎನ್.ಯು.ನಾಚಪ್ಪ

ಮಡಿಕೇರಿ,ಆ.14– ಪ್ರವಾಸಿತಾಣ ರಾಜಾಸೀಟು ಉದ್ಯಾನವನದಲ್ಲಿ ಗಾಜಿನ ಸೇತುವೆ ನಿರ್ಮಾಣ ಕಾನೂನಿಗೆ ವಿರುದ್ಧವಾಗಿದ್ದು, ಈ ಯೋಜನೆಯಲ್ಲಿ ಸಕ್ರೀಯರಾಗಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಮಡಿಕೇರಿ ಹಾಗೂ ಸುಂಟಿಕೊಪ್ಪದ ಇಬ್ಬರು ರಾಜಕಾರಣಿಗಳು ಜಿಲ್ಲಾಡಳಿತದ ದಾರಿ ತಪ್ಪಿಸಿ, ರಾಜ್ಯ ತೋಟಗಾರಿಕೆ ಇಲಾಖೆಯ ಹಿರಿಯ ಅಧಿಕಾರಿಯ ಮೇಲೆ ಪ್ರಭಾವ ಬೀರಿ ಪುರಾತತ್ವ ಇಲಾಖೆ ವ್ಯಾಪ್ತಿಯ ರಾಜಾ ಸೀಟ್‌ನಲ್ಲಿ ಗಾಜಿನ ಸೇತುವೆ ನಿರ್ಮಿಸಲು ಮತ್ತು 50 ಮೀಟರ್ ಪಕ್ಕದಲ್ಲಿ ಹೋಟೇಲ್ ನಿರ್ಮಾಣ ಮಾಡಲು ಮುಂದಾಗಿರುವುದು



ನಮ್ಮ ಜನಪ್ರತಿನಿಧಿಗಳ ಆಜ್ಞೆಯ ಮೇರೆಗೆ ನಡೆಯುತ್ತಿರುವ ಅಪಾಯಕಾರಿ ಹಾಗೂ ವಿನಾಶಕಾರಿ ಕೃತ್ಯವಾಗಿದೆ ಎಂದು ಆರೋಪಿಸಿದ್ದಾರೆ. ರಾಜಾಸೀಟ್ ಪುರಾತತ್ವ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಪುರಾತತ್ವ ನಿಯಮವನ್ನು ಮುರಿದು ಗಾಜಿನ ಸೇತುವೆ ನಿರ್ಮಾಣಕ್ಕಾಗಿ ಟೆಂಡರ್ ಅಧಿ ಸೂಚನೆಯನ್ನು ಸಹ ಈ ಫಲಾನುಭವಿಗಳಿಗೆ ಅನುಕೂಲವಾಗುವಂತೆ ರಹಸ್ಯವಾಗಿ ಹೊರಡಿಸಲಾಗಿದ್ದು, ಇದು ಹಲವು ಅನುಮಾನಗಳನ್ನು ಹುಟ್ಟು ಹಾಕಿದೆ ಎಂದು ಆರೋಪಿಸಿದ್ದಾರೆ.

ರಾಜಾಸೀಟ್ ಪಶ್ಚಿಮ ಘಟ್ಟ ಪರ್ವತಗಳ ಉದ್ದನೆಯ ಸರಪಳಿಯ ಭಾಗವಾಗಿದ್ದು, ಕಡಮಕಲ್–ಪುಷ್ಪಗಿರಿ ಪರಿಸರ–ಸೂಕ್ಷ್ಮ ವನ್ಯಜೀವಿ ಶ್ರೇಣಿಗೆ ಸಂಪರ್ಕ ಹೊಂದಿದೆ. ಕಾವೇರಿ ನದಿಯ ಉಪನದಿಗಳು ಹುಟ್ಟುವ ಅಸಂಖ್ಯಾತ ದೀರ್ಘಕಾಲಿಕ ನೀರಿನ ಬಿಂದುಗಳು ಇಲ್ಲಿವೆ. ಗಾಜಿನ ಸೇತುವೆ ಸ್ಥಾಪಿಸಲು ಇಡೀ ಪರ್ವತವನ್ನು ಕೊರೆಯಬೇಕಾಗುತ್ತದೆ ಇದು ಪಶ್ಚಿಮಘಟ್ಟದ ಕಣಿವೆಯ ಭೌಗೋಳಿಕ ಸಮತೋಲನಕ್ಕೆ ಹಾನಿ ಉಂಟು ಮಾಡುತ್ತದೆ. 2018ರಲ್ಲಿ ಇದೇ ಪರ್ವತ ಸರಪಣಿ ಪ್ರದೇಶದಲ್ಲಿ ಭೂಕುಸಿತ ದುರಂತ ಸಂಭವಿಸಿದೆ. 2024ರಲ್ಲಿ ಪಕ್ಕದ ವಯನಾಡಿನಲ್ಲಿ ಮತ್ತೊಂದು ಗಂಭೀರ ಭೂಕುಸಿತ ದುರಂತವಾಗಿದೆ. ಕೊಡಗಿನಲ್ಲಿ ಮತ್ತೆ ಅಂತಹ ದುರಂತ ಘಟನೆ ಮರುಕಳಿಸಬಾರದು.

ಪಶ್ಚಿಮ ಘಟ್ಟ ಮತ್ತು ಆನೆ ಕಾರಿಡಾರ್‌ಗಳಂತಹ ಸೂಕ್ಷ್ಮ ಪ್ರದೇಶಗಳಲ್ಲಿ ಭೂ ಪರಿವರ್ತನೆಯಾಗುವುದನ್ನು ಸಿಎನ್‌ಸಿ ತೀವ್ರವಾಗಿ ವಿರೋಧಿಸುತ್ತದೆ. ಪುರಾತತ್ವ ಸರ್ವೇಕ್ಷಣಾ ಇಲಾಖೆ ಮಧ್ಯ ಪ್ರವೇಶಿಸಿ ರಾಜಾ ಸೀಟ್‌ನಲ್ಲಿ ಗಾಜಿನ ಸೇತುವೆ ನಿರ್ಮಾಣವಾಗುವುದನ್ನು ತಡೆಯಬೇಕು. ಪರಿಸರ ಮತ್ತು ಪುರಾತತ್ವ ಶಾಸ್ತ್ರದ ದೃಷ್ಟಿಕೋನಗಳಿಂದ ಪ್ರಸ್ತಾವಿತ ಗಾಜಿನ ಸೇತುವೆ ಮತ್ತು ಹೋಟೆಲ್ ಯೋಜನೆಯನ್ನು ತಕ್ಷಣ ಕೈಬಿಡಬೇಕು. ಈ ಕರಾಳ ಒಪ್ಪಂದದಲ್ಲಿ ಮೊದಲ ದಿನದಿಂದಲೂ ಭಾಗಿಯಾಗಿರುವ ಎಲ್ಲರನ್ನು ನ್ಯಾಯದ ಕಟಕಟೆಗೆ ತಂದು ಶಿಕ್ಷೆಗೆ ಗುರಿಪಡಿಸಬೇಕು ಎಂದು ಎನ್.ಯು. ನಾಚಪ್ಪ ಒತ್ತಾಯಿಸಿದ್ದಾರೆ.

ಜೋಡುಪಾಲಿ ಬಳಿ ಮಣ್ಣು ಕುಸಿತ

ಮಡಿಕೇರಿ: ಜಿಲ್ಲೆಯಲ್ಲಿ ಲಘು ಪ್ರಮಾಣದ ಮಳೆಯಾಗುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ಜೋಡುಪಾಲ ಬಳಿ ರಸ್ತೆ ಬದಿ ಮಣ್ಣು ಕುಸಿದು ಬಿದ್ದಿದೆ. ಸ್ಥಳೀಯಾಡಳಿತ ಮಣ್ಣನ್ನು ತೆರವು ಮಾಡಿದ್ದು, ವಾಹನ ಸಂಚಾರಕ್ಕೆ ಯಾವುದೇ ತೊಡಕು ಉಂಟಾಗಿಲ್ಲ. ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಭೇಟಿ ನೀಡಿ ಪರಿಶೀಲಿಸಿದರು.

ಕಾವೇರಿ ನದಿ ಪಾತ್ರದಲ್ಲಿ ಅಸ್ಥಿ ವಿಸರ್ಜನೆಗೆ ಮಾನದಂಡ ಜಾರಿ

ಮಂಡ್ಯ, ಆ.14– ಶ್ರೀರಂಗಪಟ್ಟಣದ ಕಾವೇರಿ ನದಿ ತೀರದಲ್ಲಿ ಅಸ್ಥಿ ವಿಸರ್ಜನೆ ಮಾಡಿ ನದಿ ನೀರು ಮಲಿನಗೊಳಿಸುವುದನ್ನು ತಡೆಗಟ್ಟಲು ನಿಯಮಗಳನ್ನು ರೂಪಿಸಿ ಏಜೆನ್ಸಿಗೆ ಟೆಂಡರ್ ನೀಡಲಾಗಿದೆ. ಸಾರ್ವಜನಿಕರು ನಿಯಮ ಅನುಸರಿಸುವಂತೆ ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಗುರುವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಕಾವೇರಿ ನದಿ ಪಾತ್ರದಲ್ಲಿ ಅಸ್ಥಿ ವಿಸರ್ಜನೆ ಸೇರಿದಂತೆ ಸ್ನಾನ ಮಾಡಿದ ನಂತರ ಬಟ್ಟೆಗಳನ್ನು ನೀರಿಗೆ ಬಿಸಾಡುವುದು ಸಾಮಾನ್ಯವಾಗಿದ್ದು, ಕಾವೇರಿ ನದಿ ಪಾತ್ರದಲ್ಲಿ ಮಾಲಿನ್ಯ ತಡೆಗಟ್ಟಲು ಅಸ್ಥಿ ವಿಸರ್ಜನೆಗೆ ದರ ನಿಗದಿ ಪಡಿಸಿ, ನೋಡಿ ಕೊಳ್ಳಲು ಏಜೆನ್ಸಿ ನೇಮಕ ಮಾಡಲಾಗಿದೆ ಎಂದರು.

ಕಾವೇರಿ ನದಿ ಪಾತ್ರದ ಗೋಸಾಯಿ ಘಾಟ್, ಸಂಗಮ, ಪಶ್ಚಿಮ ವಾಹಿನಿ, ಸ್ನಾನ ಘಟ್ಟ ಸೇರಿದಂತೆ ಅಸ್ಥಿ ವಿಸರ್ಜನೆ ಮಾಡುವ ಸ್ಥಳಗಳಲ್ಲಿ ಏಜೆನ್ಸಿ ಅವರು ಸ್ನಾನ ಮಾಡಿದ ನಂತರ ಸಾರ್ವಜನಿಕರಿಗೆ ಬಟ್ಟೆ ಬದಲಾಯಿಸಲು ಕೊಠಡಿಗಳ ವ್ಯವಸ್ಥೆ ಮಾಡಬೇಕು. ಹಸಿ ಬಟ್ಟೆ, ಹೂವು, ಹಣ್ಣು ಇತರೆ ಪದಾರ್ಥಗಳನ್ನು ವಿಲೇವಾರಿ ಮಾಡಲು ಅಗತ್ಯ ಕಸದ ಬುಟ್ಟಿಗಳನ್ನು ಇಡಬೇಕು. ಇವುಗಳ ಬಗ್ಗೆ ನಿಗಾ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿದರು.

ಅಧಿಕಾರಿಗಳು ಅಸ್ಥಿ ವಿಸರ್ಜನೆಗೆ ನಿಗದಿ ಪಡಿಸಿರುವ ಸ್ಥಳ ಹೊರತು ಪಡಿಸಿ ಸಾರ್ವಜನಿಕರು ಕಾವೇರಿ ನದಿ ಪಾತ್ರದ ಬೇರೆ ಸ್ಥಳಗಳಲ್ಲಿ ಅಸ್ಥಿ ವಿಸರ್ಜನೆ ಮಾಡದಂತೆ ಪರಿಶೀಲನೆ ನಡೆಸಿ ಎಂದರು.

ಜಲಮೂಲ ಕಾಪಾಡುವುದು ಕೇವಲ ಸರ್ಕಾರದ ಕರ್ತವ್ಯವಲ್ಲ. ಸಾರ್ವಜನಿಕರು ಸಹ ಸಾಮಾಜಿಕ ಹೊಣೆಗಾರಿಕೆಯಿಂದ ಜಲ ಸಂಪನ್ಮೂಲಗಳನ್ನು ಸಂರಕ್ಷಣೆ ಮಾಡಬೇಕು. ಹರಿಯುವ ನದಿಗಳಿಗೆ ಕೆರೆ ಕಟ್ಟೆಗಳಿಗೆ ತ್ಯಾಜ್ಯ ಹಾಕುವುದನ್ನು ನಿಲ್ಲಿಸುವುದರ ಜೊತೆಗೆ ಅವುಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದರು.

ಅಧಿಕಾರಿಗಳು ಕಾವೇರಿ ನದಿ ಪಾತ್ರದಲ್ಲಿ ಅಸ್ಥಿ ವಿಸರ್ಜನೆ ಮಾಡುವ ಅರ್ಚಕರ ಪಟ್ಟಿ ಸಿದ್ಧಪಡಿಸಿ, ಪುರೋಹಿತರೊಂದಿಗೆ ಸಭೆ ನಡೆಸಿ ಅವರಿಗೆ ಯಾವುದೇ ತ್ಯಾಜ್ಯಗಳನ್ನು ನೀರಿಗೆ ಬಿಸಾಡದಂತೆ ತಿಳುವಳಿಕೆ ನೀಡಿ ಎಂದರು.

ಅಸ್ಥಿ ವಿಸರ್ಜನೆ ಮಾಡುವ ಸ್ಥಳಗಳಲ್ಲಿ ಶೌಚಾಲಯ ವ್ಯವಸ್ಥೆ ಹಸಿ ಬಟ್ಟೆ ತ್ಯಾಜ್ಯಗಳನ್ನು ಬಿಸಾಡಲು ಕಸದ ಬುಟ್ಟಿ ಇರಿಸಿ, ಸಾರ್ವಜನಿಕರಿಗೆ ತ್ಯಾಜ್ಯಗಳನ್ನು ನೀರಿಗೆ ಎಸೆಯಬಾರದು ಎಂಬುದನ್ನು ಧ್ವನಿ ವರ್ಧಕ ಬಳಸುವ ಮೂಲಕ ಜಾಗೃತಿ ಮೂಡಿಸಿ ಎಂದರು.

ಪರಿಸರ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಇಂದು ನಾವು ನಮ್ಮ ಜಲ ಸಂಪನ್ಮೂಲವನ್ನು ಸಂರಕ್ಷಣೆ ಮಾಡದೆ ಹೋದರೆ ನಮ್ಮ ಮುಂದಿನ ಪೀಳಿಗೆ ನೀರಿಲ್ಲದೆ ಪರದಾಡುತ್ತಿರುವ ಸ್ಥಿತಿ ನಿರ್ಮಾಣವಾಗುತ್ತದೆ ಎಂದರು.

ಸಭೆಯಲ್ಲಿ ನಗರಾಭಿವೃದ್ಧಿ ಕೋಶಾಧಿಕಾರಿ ಟಿ.ಎನ್.ನರಸಿಂಹ ಮೂರ್ತಿ, ನಗರಾಭಿವೃದ್ಧಿ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರತಾಪ್, ನಗರಸಭೆ ಪೌರಾಯುಕ್ತೆ ಪಂಪಶ್ರೀ ಸೇರಿದಂತೆ ಇನ್ನಿತರರಿದ್ದರು.

ಮಂಡ್ಯದ ಅಂತಾರಾಷ್ಟ್ರೀಯ ಕ್ರೀಡಾಪಟು

ವಿಜಯಕುಮಾರಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಅಭಿನಂದನೆ

ಬೆಂಗಳೂರು, ಆ.14– ಒಡಿಶಾದ ಭುವನೇಶ್ವರದಲ್ಲಿ ಇತ್ತೀಚೆಗೆ ನಡೆದ ವಿಶ್ವ ಅಥ್ಲೆಟಿಕ್ಸ್‌ನ ಕಾಂಟಿನೆಂಟಲ್ ಕೂಟದ ಮಹಿಳೆಯರ ವಿಭಾಗದ 400 ಮೀಟರ್ ಓಟದಲ್ಲಿ ಚಿನ್ನದ ಪದಕಗಳಿಸಿ ರಾಜ್ಯಕ್ಕೆ ಕೀರ್ತಿ ತಂದ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಗೌಡೇನಹಳ್ಳಿ ಗ್ರಾಮದ ಅಂತರಾಷ್ಟ್ರೀಯ ಕ್ರೀಡಾಪಟು ವಿಜಯಕುಮಾರಿ ಜಿ.ಕೆ. ಅವರನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಮಂಡ್ಯದ ಹೆಣ್ಣುಮಗಳು ಮುಂದಿನ ದಿನಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದ ಕೀರ್ತಿ ಪತಾಕೆ ಹಾರಿಸಲಿ. ಆಕೆ ತರಬೇತಿಗೆ ಬೇಕಾದ ಸಕಲ ವ್ಯವಸ್ಥೆ ಮಾಡಲಾಗುವುದು. ಪಾಲಿಕೆ ವತಿಯಿಂದ 10 ಲಕ್ಷ ರೂ. ಪ್ರೋತ್ಸಾಹಧನ ನೀಡಲಾಗುವುದು. ಈ ವರ್ಷ 5 ಲಕ್ಷ ರೂ. ಚೆಕ್ ಅನ್ನು ನೀಡಲಾಗಿದ್ದು, ಮುಂದಿನ ವರ್ಷ 5 ಲಕ್ಷ ರೂ. ನೀಡುವುದಾಗಿ ತಿಳಿಸಿದರು.

ಸನ್ಮಾನ ಸ್ವೀಕರಿಸಿದ ಬಳಿಕ ಮಾತನಾಡಿದ ವಿಜಯಕುಮಾರಿ, ನನ್ನ ಸಾಧನೆ ಗುರುತಿಸಿ ಸನ್ಮಾನಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕರಾದ ದಿನೇಶ್ ಗೂಳಿಗೌಡರವರಿಗೆ ಧನ್ಯವಾದಗಳು. ಇದರಿಂದ ಮತ್ತಷ್ಟು ಸಾಧನೆ ಮಾಡಲು ಸ್ಫೂರ್ತಿ ಸಿಕ್ಕಂತಾಗಿದೆ ಎಂದರು.



2014ರಲ್ಲಿ LUSOFONIA ಗೇಮ್ಸ್‌ನಲ್ಲಿ 4x400 ರಿಲೆಯಲ್ಲಿ ಚಿನ್ನದ ಪದಕ ಹಾಗೂ 400 ಮೀಟರ್‌ನಲ್ಲಿ ಬೆಳ್ಳಿ ಪದಕ, 2014ರಲ್ಲಿ ಏಷಿಯನ್ ಜ್ಯೂನಿಯರ್ ಅಥ್ಲೆಟಿಕ್ಸ್‌ನಲ್ಲಿ 4x400 ರಿಲೆಯಲ್ಲಿ ಚಿನ್ನದ ಪದಕ, 2019ರಲ್ಲಿ ಸೌತ್ ಏಷಿಯನ್ ಗೇಮ್ಸ್‌ನಲ್ಲಿ 400 ಮೀಟರ್ ನಲ್ಲಿ ಕಂಚಿನ ಪದಕ, 2025 ಆಗಸ್ಟ್ 10ರಂದು ಭುವನೇಶ್ವರದಲ್ಲಿ ನಡೆದ ವಿಶ್ವ ಅಥ್ಲೆಟಿಕ್ ಕಾಂಟಿನೆಂಟಲ್ ಕೂಟದ ಮಹಿಳೆಯರ ವಿಭಾಗದಲ್ಲಿ 400 ಮೀಟರ್ ಸ್ಪರ್ಧೆಯಲ್ಲಿ ಚಿನ್ನದ ಪದಕ, ಇದರ ಜೊತೆಗೆ ರಾಷ್ಟ್ರೀಯ, ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಚಿನ್ನ, ಬೆಳ್ಳಿ, ಕಂಚಿನ ಪದಕ ಗಳಿಸಿದ್ದಾರೆ. ವಿಜಯಕುಮಾರಿ ಅವರಿಗೆ ಈಗಾಗಲೇ ಏಕಲವ್ಯ ಪ್ರಶಸ್ತಿ, ಜೀಜಾ ಬಾಯಿ ಪ್ರಶಸ್ತಿ, ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿ, ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ಪ್ರಶಸ್ತಿ, ಮಂಡ್ಯ ಜಿಲ್ಲಾಡಳಿತದಿಂದ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಮಾಂಸ ಮಾರಾಟ ಮಳಿಗೆ ಕಟ್ಟಡಕ್ಕೆ ಗುದ್ದಲಿ ಪೂಜೆ




ಚಿನಕುರಳಿ ಗ್ರಾಪಂ ವತಿಯಿಂದ ಮಾಂಸ ಮಾರಾಟ ಮಳಿಗೆ ಕಟ್ಟಡಕ್ಕೆ ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮಿ ಅವರು ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಮನ್‌ಮುಲ್ ನಿರ್ದೇಶಕ ಹಾಗೂ ಗ್ರಾಪಂ ಸದಸ್ಯರಾದ ಸಿ.ಶಿವಕುಮಾರ್ ಸೇರಿದಂತೆ ಗ್ರಾಪಂನ ಎಲ್ಲಾ ಸದಸ್ಯರು, ವ್ಯವಸಾಯ ಸಹಕಾರ ಸಂಘದ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ ಹಾಗೂ ಗ್ರಾಮದ ಮುಖಂಡರು ಹಾಜರಿದ್ದರು.

ಮಣಿಗೆರೆ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಭಾರತೀನಗರ, ಆ.14– ಇಲ್ಲಿಗೆ ಸಮೀಪದ ಮಣಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ರಾಮಲಿಂಗೇಗೌಡ, ಉಪಾಧ್ಯಕ್ಷರಾಗಿ ಗಿರೀಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷ ರಾಮಲಿಂಗೇಗೌಡ, ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಸರ್ಕಾರದಿಂದ ರೈತರಿಗೆ ದೊರೆಯುವ ಸೌಲಭ್ಯಗಳನ್ನು ದೊರಕಿಸಿಕೊಡಲು ಮುಂದಾಗುತ್ತೇನೆ. ಈ ಎಲ್ಲಾ ಕಾರ್ಯಗಳಿಗೆ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ಸಹಕಾರ ನೀಡಬೇಕು ಎಂದರು.



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಮುಖಂಡರು ಸನ್ಮಾನಿಸಿದರು.

ಗ್ರಾಮದ ಮುಖಂಡ ಮಣಿಗೆರೆ ಪ್ರಕಾಶ್ ಮಾತನಾಡಿ, ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಹಕರಿಸಿದ ಶಾಸಕ ಕೆ.ಎಂ.ಉದಯ್ ಸೇರಿದಂತೆ ಸ್ಥಳೀಯ ಮುಖಂಡರಿಗೆ ಹಾಗೂ ಷೇರುದಾರರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು. ಈ ವೇಳೆ ಕೆ.ಪಿ.ದೊಡ್ಡಿ ಸಿದ್ದರಾಜು ಮಾತನಾಡಿ, ಸೊಸೈಟಿ ಷೇರುದಾರರು ನಿಧನಗೊಂಡಲ್ಲಿ ಮರಣೋತ್ತರ ನಿಧಿ ನೀಡಲು ಮುಂದಾಗಬೇಕೆಂದು ಅಧ್ಯಕ್ಷರಿಗೆ ಮನವಿ ಸಲ್ಲಿಸಿದರು.

ನಿರ್ದೇಶಕರಾದ ಪೂಜಾರಿ ಮಹೇಶ್, ಕೆಂಪಮ್ಮ, ಎಂ.ಪಂಚಯ್ಯ, ಕೆ.ಹೊಂಬಯ್ಯ, ಬಸವೇಗೌಡ, ರಾಜೇಶ್, ವೆಂಕಟೇಶ್, ಮುಖಂಡರಾದ ರಮೇಶ್, ಶ್ರೀನಿವಾಸ್, ಕೆಂಪರಾಜು, ರವಿ, ಅಂಬರೀಶ್, ಮಹದೇವು, ಕೆ.ರವಿ, ಸೇರಿದಂತೆ ಹಲವರಿದ್ದರು.

ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆಗೆ ಆಗ್ರಹಿಸಿ

ಕಬ್ಬು ಬೆಳೆಗಾರರಿಂದ ರಸ್ತೆ ತಡೆ



ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಜಿಲ್ಲಾಘಟಕದಿಂದ ರಸ್ತೆ ತಡೆ ನಡೆಸಲಾಯಿತು.

ಚಾಮರಾಜನಗರ, ಆ.14– ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನೀಡುವ ಎಂ.ಎಸ್.ಸ್ವಾಮಿನಾಥನ್ ವರದಿ ಜಾರಿ ಸೇರಿದಂತೆ ವಿವಿಧ ಹಕ್ಕೊತ್ತಾಯಗಳ ಈಡೇರಿಕೆಗೆ ಆಗ್ರಹಿಸಿ ಸಂತೇಮರಹಳ್ಳಿ ರಸ್ತೆಯ ದೊಡ್ಡರಾಯಪೇಟೆ ಗೇಟ್ ಬಳಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಜಿಲ್ಲಾಘಟಕದಿಂದ ರಸ್ತೆ ತಡೆದು ಪ್ರತಿಭಟನೆ ನಡೆಯಿತು.

ಗೇಟ್ ಬಳಿ ಜಮಾವಣೆಗೊಂಡ ಕಬ್ಬು ಬೆಳೆಗಾರರು ಕೇಂದ್ರ ಹಾಗೂ ರಾಜ್ಯ ಸರ್ಕಾರದ ರೈತ ವಿರೋಧಿ ಧೋರಣೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿ ಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದು 78 ವರ್ಷ ಕಳೆದರೂ, ರೈತರಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತು ಸಿಗುತ್ತಿಲ್ಲ. ದೇಶದ ಜನತೆ ಪ್ರತಿವರ್ಷ ವಿಜೃಂಭಣೆಯಿಂದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತಾರೆ. ಆದರೆ ರೈತರ ಪಾಲಿಗೆ ನಿಜವಾದ ಸ್ವಾತಂತ್ರ್ಯ ಸಿಗಬೇಕಾದರೆ ಅವರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಿದಾಗ ಮಾತ್ರ ಎಂದರು.

ಪ್ರತಿ ಟನ್ ಕಬ್ಬಿಗೆ ಪ್ರಸಕ್ತ ಸಾಲಿನಲ್ಲಿ 4500 ರೂ. ನಿಗಧಿ ಮಾಡಬೇಕು, ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಸಕ್ಕರೆ ಕಾರ್ಖಾನೆಗಳು ಭರಿಸಬೇಕು, ಇಬ್ಬರ ನಡುವೆ ದ್ವಿಪಕ್ಷೀಯ ಒಪ್ಪಂದ ಪತ್ರವನ್ನು ಜಾರಿ ಮಾಡಬೇಕು, ಸಕ್ಕರೆ ಕಾರ್ಖಾನೆಗಳಲ್ಲಿ ಇಳುವರಿಯ ಮೋಸ ತಪ್ಪಿಸಲು ರೈತರು ಹಾಗೂ ತಜ್ಞರ ಸಮಿತಿ ರಚಿಸಬೇಕು, ತೂಕದಲ್ಲಿ ಮೋಸ ತಪ್ಪಿಸಲು ಸಕ್ಕರೆ ಕಾರ್ಖಾನೆಗಳ ಮುಂದೆ ತೂಕದ ಯಂತ್ರ ಅಳವಡಿಸಬೇಕು, ಕಳೆದ ಸಾಲಿನ 950 ಕೋಟಿ ರೂ.ಕಬ್ಬಿನ ಉಪ ಉತ್ಪನ್ನಗಳ ಬಾಕಿಯನ್ನು ಸರ್ಕಾರ ತಕ್ಷಣ ಕಾರ್ಖಾನೆಗಳಿಂದ ಕೊಡಿಸಬೇಕು ಎಂದು ಆಗ್ರಹಿಸಿದರು.

ರಸಗೊಬ್ಬರ ಕೃತಕ ಅಭಾವ ಸೃಷ್ಟಿಸುವವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು, ನಿಗಧಿತ ದರಕ್ಕಿಂತ ಹೆಚ್ಚಿಗೆ ಮಾರಾಟ ಮಾಡುವವರ ಮೇಲೆ ಜಿಲ್ಲಾಡಳಿತ ನಿಗಾ ವಹಿಸಬೇಕು. ರಾಜ್ಯ ಸರ್ಕಾರ ಸ್ಮಾರ್ಟ್ ಮೀಟರ್ ಹಾಕುವ ಮೂಲಕ ವಿದ್ಯುತ್ ನಿಗಮಗಳನ್ನು ಖಾಸಗೀಕರಣ ಮಾಡುವ ಹುನ್ನಾರ ನಡೆಸುತ್ತಿದೆ. ಯಾವುದೇ ಕಾರಣಕ್ಕೂ ರೈತರು ಖಾಸಗೀಕರಣಕ್ಕೆ ಅವಕಾಶ ಮಾಡಿಕೊಡಬಾರದು, ಅಕ್ರಮ ಸಕ್ರಮ ಯೋಜನೆಯನ್ನು ತಕ್ಷಣ ಜಾರಿಗೆ ತರಬೇಕು, ವಿದ್ಯುತ್ ಪರಿವರ್ತಕಗಳು ಸುಟ್ಟರೆ 24 ಗಂಟೆಯಲ್ಲಿ ಬದಲಾಯಿಸಲು ಕ್ರಮ ಕೈಗೊಳ್ಳಬೇಕು

ಬ್ಯಾಂಕ್‌ಗಳಲ್ಲಿ ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ಕೇಳಬಾರದು, ಡಿಪಿಆರ್ ಸಿದ್ದಪಡಿಸಿ ಜಿಲ್ಲೆಯ ಎಲ್ಲಾ ಕೆರೆಕಟ್ಟೆಗಳಿಗೆ ನದಿ ಮೂಲದಿಂದ ನೀರು ತುಂಬಿಸಲು ಕ್ರಮ ಕೈಗೊಳ್ಳಬೇಕು. ವಿಧಾನಸಭೆಯಲ್ಲಿ ಸರ್ವಾನುಮತದಿಂದ ಎಂ,ಎಸ್. ಸ್ವಾಮಿನಾಥನ್ ವರದಿ ಜಾರಿಗೆ ಕೇಂದ್ರಕ್ಕೆ ರಾಜ್ಯಸರ್ಕಾರ ಒತ್ತಾಯ ಹೇರಬೇಕು, ಜಿಲ್ಲಾ ಉಸ್ತುವಾರಿ ಸಚಿವರು ಕೂಡಲೇ ರೈತರ ಸಭೆ ಆಯೋಜಿಸಿ ಅವರ ಹಕ್ಕೊತ್ತಾಯಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ, ಸರ್ಕಾರದ ಗಮನಕ್ಕೆ ತಂದು ಈಡೇರಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಜಿಲ್ಲಾ ಕಾರ್ಯದರ್ಶಿ ಮಲೆಯೂರು ಮಹೇಂದ್ರ, ತಾಲೂಕು ಅಧ್ಯಕ್ಷ ಸತೀಶ್ ಸಂಘಟನಾ ಕಾರ್ಯದರ್ಶಿ ಪ್ರಕಾಶ್ ಗಾಂಧಿ. ಶಾನಾಡ್ರಳ್ಳಿ ಬಸವರಾಜು, ಅರಳೀಕಟ್ಟೆ ಪ್ರಭುಸ್ವಾಮಿ, ನರಸಮಂಗಲ ನಾಗಮಲ್ಲಪ್ಪ, ಗುರುವಿನಪುರ ಮೋಹನ್, ಚಂದ್ರು ಮುಕ್ಕಡಹಳ್ಳಿ ರಾಜು, ಪುಟ್ಟಮಲ್ಲೇಗೌಡ, ಶ್ರೀಕಂಠ ಭಾಗವಹಿಸಿದ್ದರು.

ಹುಂಡಿ ಹೊತ್ತೊಯ್ದ ಖದೀಮರು

ಚಾಮರಾಜನಗರ : ಶ್ರೀಮಂಟೇಸ್ವಾಮಿ ದೇವಸ್ಥಾನದ ಹುಂಡಿಯನ್ನು ಖದೀಮರು ಹೊತ್ತೊಯ್ದಿರುವ ಘಟನೆ ನಗರದ ಸಂತೇಮರಹಳ್ಳಿ ರಸ್ತೆಯಲ್ಲಿರುವ ಉಪ್ಪಾರ ಬಡಾವಣೆಯಲ್ಲಿ ನಡೆದಿದೆ. ದೇವಾಲಯದ ಬಾಗಿಲು ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ಕಾಣಿಕೆ ಹುಂಡಿಯನ್ನು ಕದ್ದು, ಚಿಲ್ಲರೆ ಹಣವನ್ನು ಅಲ್ಲೇ ಬಿಟ್ಟು ನೋಟುಗಳನ್ನು ಕದ್ದುಕೊಂಡು ಪರಾರಿಯಾಗಿದ್ದಾರೆ. ಇನ್ನೂ ಮಂಟೇಸ್ವಾಮಿ ದೇವಸ್ಥಾನದಲ್ಲಿ ಕಳ್ಳತನವಾಗಿದೆ ಎಂಬ ವಿಷಯ ತಿಳಿಯುತ್ತಿದ್ದಂತೆ ನೂರಾರು ಸಂಖ್ಯೆಯಲ್ಲಿ ಬಡಾವಣೆಯ ನಿವಾಸಿಗಳು ಜಮಾಯಿಸಿದ್ದರು.

ಒಳಮೀಸಲಾತಿ ಸಮೀಕ್ಷೆ ವರದಿ ವಿರೋಧಿಸಿ ಬೃಹತ್ ಪ್ರತಿಭಟನೆ

ಬಲಗೈ ಸಮುದಾಯದ ಆದಿದ್ರಾವಿಡ, ಆದಿಕರ್ನಾಟಕ, ಆದಿ ಆಂಧ್ರ ಸಮುದಾಯದವರಿಗೆ ಅನ್ಯಾಯ, ಸಿಎಂಗೆ ಮನವಿ ಸಲ್ಲಿಕೆ

ಚಾಮರಾಜನಗರ, ಆ.14– ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ಏಕಸದಸ್ಯ ವಿಚಾರಣಾ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ತಿರಸ್ಕರಿಸಬೇಕು ಎಂದು ಒತ್ತಾಯಿಸಿ ನಗರದಲ್ಲಿ ಜಿಲ್ಲಾ ಬಲಗೈ ಸಮುದಾಯಕ್ಕೆ ಸೇರಿದ ಛಲವಾದಿ, ಹೊಲೆಯ ಒಳ ಮೀಸಲಾತಿ ಜಾಗೃತಿ ಸಮಿತಿ ಬೃಹತ್ ಪ್ರತಿಭಟನೆ ನಡೆಸಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನದ ಮುಂಭಾಗಕ್ಕೆ ತೆರಳಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮೈಸೂರಿನ ಗಾಂಧಿನಗರದ ಉರಿಲಿಂಗಿಪೆದ್ದಿ ಪೀಠಾಧ್ಯಕ್ಷರಾದ ಮಠದ ಶ್ರೀಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಒಳಮೀಸಲಾತಿ ಬಲಗೈ ಸಮುದಾಯಕ್ಕೆ ಅನ್ಯಾಯ ಮಾಡಿದ್ದು ಆದಿದ್ರಾವಿಡ, ಆದಿ ಕರ್ನಾಟಕ, ಆದಿಆಂಧ್ರ ಎಂದು ವಿಂಗಡಿಸಿ ಶೇ.1ರಷ್ಟು ಮೀಸಲಾತಿ ನೀಡಿರುವುದು ಖಂಡನೀಯವಾಗಿದೆ. ಅಲ್ಲದೇ ಛಲವಾದಿಗಳನ್ನೇ ಪ್ರತ್ಯೇಕವಾಗಿ ಮಾಡಿರುವ ವರದಿಯು ಅವೈಜ್ಞಾನಿಕವಾಗಿದೆ ಎಂದರು.



ಒಳ ಮೀಸಲಾತಿ ಸಮೀಕ್ಷಾ ವರದಿ ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಬಲಗೈ ಸಂಬಂಧಿತ ಜಾತಿಗಳನ್ನು ಒಂದು ಗುಂಪು ಮಾಡಿ ಸೇರಿಸುವಂತೆ ನ್ಯಾ.ನಾಗಮೋಹನದಾಸ್ ಅವರಿಗೆ ಅರ್ಜಿ ಸಲ್ಲಿಸಿದ್ದು, ಇದನ್ನು ಅವರು ಪರಿಗಣನೆಗೆ ತೆಗೆದುಕೊಂಡಿಲ್ಲ. ಡಾ.ಬಿ.ಆರ್. ಅಂಬೇಡ್ಕರ್ ಅವರು ದೇಶದ 140 ಕೋಟಿ ಜನರಿಗೆ ಸಾಮಾಜಿಕ ನ್ಯಾಯ ಕಲ್ಪಿಸಿದ್ದಾರೆ. ಅಂಬೇಡ್ಕರ್ ಅವರ ವಾರಸುದಾರರಾದ ಬಲಗೈ ಸಮುದಾಯಕ್ಕೆ ಅನ್ಯಾಯ ಮಾಡುತ್ತಿರುವುದು ಖಂಡನೀಯವಾಗಿದೆ. ಸರ್ಕಾರ ಈ ವರದಿಯನ್ನು ಯಾವುದೇ ಕಾರಣಕ್ಕೂ ಜಾರಿಗೊಳಿಸಬಾರದು ಎಂದು ಆಗ್ರಹಿಸಿದರು.

ನಂತರ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಬಲಗೈ ಸಮುದಾಯ ಎಂದಿಗೂ ಒಳ ಮೀಸಲಾತಿ ಕೇಳಿಲ್ಲ. ಒಳ ಮೀಸಲಾತಿ ಅನುಭವಿಸುತ್ತಾ ಬಂದಿರುವ ವರ್ಗಗಳು ಇಂದು ಅವರವರ ಸಮುದಾಯದ ಸಮಾವೇಶಗಳು ನಡೆಸುವ ಸಂದರ್ಭದಲ್ಲಿ ಸರಿಯಾಗಿ ಅಂಕಿ ಅಂಶ ಪಡೆಯದೆ ಸುಳ್ಳು ಅಂಕಿ–ಅಂಶಗಳನ್ನು ನೀಡಿ ಮೀಸಲಾತಿ ಪಡೆಯುವ ಹುನ್ನಾರ ಮಾಡಿದ್ದಾರೆ ಎಂದು ಆರೋಪಿಸಿದರು.

ನ್ಯಾ.ನಾಗಮೋಹನ್‌ದಾಸ್ ಅವರಿಗೆ ಸರ್ಕಾರ ಅವಕಾಶ ಮಾಡಿಕೊಟ್ಟ ಮೇಲೆ ಸಮೀಕ್ಷೆ ವರದಿ ಮಂಡಿಸಿದ್ದಾರೆ. ಅವರು ನೀಡಿರುವ ವರದಿ ಅಂತಿಮವಲ್ಲ. ಸರ್ಕಾರ ವರದಿಯನ್ನು ಪುರಸ್ಕರಿಸಿಲ್ಲ ಈ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು. ಸಮುದಾಯ ಸಚಿವರು, ಶಾಸಕರು, ಸಮುದಾಯ ಪರವಾಗಿದ್ದೇವೆ. ಸಮುದಾಯಕ್ಕೆ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ ಎಂದರು.

ಬಳಿಕ ಮಾಜಿ ಸಚಿವ ಎನ್. ಮಹೇಶ್ ಮಾತನಾಡಿ, ನ್ಯಾ.ನಾಗಮೋಹನ್‌ದಾಸ್ ಅವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಶಿಷ್ಟ ಜಾತಿ ಒಳಮೀಸಲಾತಿ ಸಮೀಕ್ಷೆ ವರದಿಯನ್ನು ಸರ್ಕಾರ ಪರಿಶೀಲಿಸಬೇಕು ಎಂದರು.

ನಂತರ ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು ಮಾತನಾಡಿ, ಆ. 16ರಂದು ನಡೆಯುವ ಸಚಿವ ಸಂಪುಟದಲ್ಲಿ ನಾಗಮೋಹನ್ ದಾಸ್ ಒಳಮೀಸಲಾತಿ ಸಮೀಕ್ಷಾ ವರದಿಯನ್ನು ಸರ್ಕಾರ ಪುರಸ್ಕಾರ ಮಾಡಿದರೆ ಸಮುದಾಯದ ಸಚಿವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಆ.17ರಿಂದ ಬೀದರ್‌ನಿಂದ ಚಾಮರಾಜನಗರದಿಂದ ಪಾದಯಾತ್ರೆ ಕೈಗೊಂಡು ವಿಧಾನಸೌಧ ಮುತ್ತಿಗೆ ಹಾಕಲಾಗುವುದು. ಆ.20ರಂದು ಕರ್ನಾಟಕ ಬಂದ್‌ಗೆ ಕರೆ ನೀಡಲಾಗುವುದು ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಎಸ್. ಬಾಲರಾಜು, ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ರಾಜು, ವಾಣಿ ಶಿವರಾಂ, ಮುಖಂಡರಾದ ಅಯ್ಯನಪುರ ಶಿವಕುಮಾರ್, ಪುಟ್ಟಸ್ವಾಮಿ, ಕಂದಹಳ್ಳಿ ನಾರಾಯಣ್, ಮೋಹನ್‌ನಗು, ನಾಗಯ್ಯ, ರಂಗಸ್ವಾಮಿ, ನಾಗರಾಜು, ನೂರಾರು ಮಂದಿ ಪಾಲ್ಗೊಂಡಿದ್ದರು.



'ನ್ಯಾಯಬೆಲೆ ಅಂಗಡಿ' ಮಾಲೀಕಳಾದ ತುಪ್ಪದ ಬೆಡಗಿ



ನಟಿ ರಾಗಿಣಿ ಅಭಿನಯದಲ್ಲಿ ಸರ್ಕಾರಿ 'ನ್ಯಾಯಬೆಲೆ ಅಂಗಡಿ' ಚಿತ್ರವೊಂದು ಇತ್ತೀಚೆಗೆ ಸೆಟ್ಟೇರಿತ್ತು. ತುಪ್ಪದ ಬೆಡಗಿ ಎಂದೇ ಹೆಸರಾದ ನಟಿ ರಾಗಿಣಿ ದ್ವಿವೇದಿ ಅವರಿಲ್ಲಿ ಗ್ರಾಮೀಣ ಭಾಗದ ಸೊಸೈಟಿಯ ಮಾಲೀಕಳಾಗಿ ನಟಿಸುತ್ತಿದ್ದಾರೆ. ಈಗಾಗಲೇ ಚಿತ್ರದ ಬಹುತೇಕ ಚಿತ್ರೀಕರಣ ಮುಗಿದಿದೆ, ಇತ್ತೀಚೆಗೆ ಮಾಧ್ಯಮದ ಮುಂದೆ ಬಂದಿದ್ದ ಚಿತ್ರತಂಡ ಮೇಕಿಂಗ್ ವಿಡಿಯೋ ಮೂಲಕ ಶೂಟಿಂಗ್ ಅನುಭವಗಳನ್ನು ಹಂಚಿಕೊಂಡಿತು.

ಚಿತ್ರದ ಹೆಸರೇ ಹೇಳುವಂತೆ, ನ್ಯಾಯಬೆಲೆ ಅಂಗಡಿ ಮತ್ತು ಸಾರ್ವಜನಿಕ ಪಡಿತರ ವ್ಯವಸ್ಥೆಯ ಸುತ್ತ, ಪಡಿತರ ವಿತರಣೆಯಲ್ಲಿ ನಡೆಯುವ ಆಗು-ಹೋಗುಗಳ ಸುತ್ತ ಚಿತ್ರದ ಕಥೆ ಸಾಗುತ್ತದೆ. ಇದುವರೆಗೆ ಗ್ಲಾಮರಸ್ ಪಾತ್ರಗಳನ್ನೇ ಮಾಡುತ್ತಿದ್ದ, ರಾಗಿಣಿ ದ್ವಿವೇದಿ, ಇದೇ ಮೊದಲ ಬಾರಿಗೆ ಗ್ರಾಮೀಣ ಮಹಿಳೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ನಟ ಕಂ ರಾಜಕಾರಣಿ ಕುಮಾರ್ ಬಂಗಾರಪ್ಪ, ದೊಡ್ಡಣ್ಣ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ.

ನಾಯಕಿ ರಾಗಿಣಿ ಮಾತನಾಡುತ್ತ ಇದೊಂದು ಅಪ್ಪಟ ಗ್ರಾಮೀಣ ಸೊಗಡಿನ ಸಿನಿಮಾ. ಮೊದಲ ಬಾರಿಗೆ ನಾನು ಹಳ್ಳಿಯ ಸೊಗಡಿನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ತನ್ನ ಊರಿನ ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ನಡೆಯುವ ಭ್ರಷ್ಟ ವ್ಯವಸ್ಥೆಯ ವಿರುದ್ಧ ಹೇಗೆ ಆಕೆ ಹೋರಾಡಿ ಜಯಗಳಿಸುತ್ತಾಳೆ ಎಂದು ನನ್ನ ಪಾತ್ರದ ಮೂಲಕ ನಿರ್ದೇಶಕರು ಹೇಳಿದ್ದಾರೆ, ಮಂಡ್ಯ ಜಿಲ್ಲೆಯ ಹಳ್ಳಿಪರಿಸರದಲ್ಲಿ ಇಡೀ ಸಿನಿಮಾ ಮೂಡಿಬರುತ್ತಿದೆ, ಮಧ್ಯಮ ವರ್ಗದ ಜನರಿಗೆ ಖಂಡಿತವಾಗಿ ಈ ಚಿತ್ರ ಇಷ್ಟವಾಗಲಿದೆ ಎಂದರು.


ನಟ ರಾಜಕಾರಣಿ ಕುಮಾರ ಬಂಗಾರಪ್ಪ ಮಾತನಾಡಿ, ಹಳ್ಳಿಯ ಜನರಿಗೆ ಹತ್ತಿರವಾಗುವಂಥ ಕಥೆ ಚಿತ್ರದಲ್ಲಿದೆ. ಪಡಿತರ ವ್ಯವಸ್ಥೆಯ ಲೋಪ ದೋಷಗಳನ್ನು ಬಹುತೇಕ ಜನಸಾಮಾನ್ಯರು ಅನುಭವಿಸಿರುತ್ತಾರೆ. ಆದ್ದರಿಂದ ಎಲ್ಲರಿಗೂ ಈ ಸಿನಿಮಾ ಮನ ಮುಟ್ಟುತ್ತದೆ. ತುಂಬಾ ವರ್ಷಗಳ ನಂತರ ನಾನು ಹಳ್ಳಿಯ ಜನಸಾಮಾನ್ಯ ವ್ಯಕ್ತಿಯ ಪಾತ್ರ ಮಾಡಿದ್ದೇನೆ. ಆಹಾರ ಭದ್ರತೆಯ ಮೇಲೆ ಮಾಡಿರುವ ಈ ಸಿನಿಮಾದಲ್ಲಿ ಒಂದು ಸಂದೇಶವಿದೆ. ಚಿತ್ರೀಕರಣ ಮರೆಯಲಾರದ ಅನುಭವಗಳನ್ನು ಕೊಟ್ಟಿದೆ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಈ ಹಿಂದೆ ತಾಯವ್ವ ಚಿತ್ರ ನಿರ್ದೇಶಿಸಿದ್ದ ಸಾತ್ವಿಕ ಪವನ್ ಕುಮಾರ್, ಈ ಚಿತ್ರದ ನಿರ್ದೇಶಕರು. ಶ್ರೀಮತಿ ತೇಜುಮೂರ್ತಿ ಮತ್ತು ಎಸ್.ಪದ್ಮಾವತಿ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಬಿ.ರಾಮಮೂರ್ತಿ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಅನಂತ ಆರ್ಯನ್ ಸಂಗೀತ ಸಂಯೋಜಿಸಿದ್ದಾರೆ. ಮಂಡ್ಯ ಜಿಲ್ಲೆಯ ದೊಡ್ಡರಸಿನಕೆರೆ ಸುತ್ತಮುತ್ತ ಚಿತ್ರದ ಬಹುತೇಕ ಚಿತ್ರೀಕರಣ ನಡೆದಿದೆ. ಹಿರಿಯ ರಾಜಕಾರಣಿ ಶಿವರಾಮೇಗೌಡ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಸರ್ಕಾರಿ ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷ ಕೃಷ್ಣಪ್ಪ, ಹಾಲು ಉತ್ಪಾದಕರ ಸಂಘದ ನಿರ್ದೇಶಕ ಸತೀಶ್, ನಿರ್ಮಾಪಕ ಭಾ.ಮ. ಹರೀಶ್, ಚೆಲುವಮೂರ್ತಿ ವೇದಿಕೆಯಲ್ಲಿದ್ದರು.



ಕಾಂತಾರದಲ್ಲಿ ರುಕ್ಮಿಣಿ ವಸಂತ್ 'ಕನಕವತಿ'



ರಿಷಬ್ ಶೆಟ್ಟಿ ನಟನೆ ಹಾಗೂ ನಿರ್ದೇಶನದ 'ಕಾಂತಾರ ಚಾಪ್ಟರ್ 1' ಈ ವರ್ಷದ ಬಹುನಿರೀಕ್ಷಿತ ಚಿತ್ರಗಳಲ್ಲೊಂದು. ಇದರಲ್ಲಿ ಕಾಂತಾರ ಚಿತ್ರದ ಪೂರ್ವಕಥೆಯನ್ನು ಹೇಳಲಾಗುತ್ತಿದೆ. ನಾಯಕ ಶಿವ ಹಿಂದೆ ಏನಾಗಿದ್ದ ಎನ್ನುವುದು ಇಲ್ಲಿ ರಿವೀಲ್ ಆಗುತ್ತದೆ. ಇದುವರೆಗೆ ಚಿತ್ರದ ನಾಯಕಿಯ ಪಾತ್ರವನ್ನು ಚಿತ್ರತಂಡ ಎಲ್ಲೂ ರಿವೀಲ್ ಮಾಡಿದ್ದಿಲ್ಲ. ಈಗ ನಾಯಕಿ ರುಕ್ಮಿಣಿ ವಸಂತ್ ಎನ್ನುವುದು ಬಹಿರಂಗವಾಗಿದೆ. 'ಸಪ್ತಸಾಗರದಾಚೆ ಎಲ್ಲೋ' ಖ್ಯಾತಿಯ ರುಕ್ಮಿಣಿ ವಸಂತ್ ಈ ಚಿತ್ರದಲ್ಲಿ 'ಕನಕವತಿ' ಎಂಬ ರಾಣಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ಅವರ ಫಸ್ಟ್‌ಲುಕ್ ಬಿಡುಗಡೆಯಾಗಿದ್ದು, ಈ ಗೆಟಪ್ ಚಿತ್ರದ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಚಿತ್ರದಲ್ಲಿನ ಅದ್ಭುತ ದೃಶ್ಯವೈಭವಕ್ಕೆ ಅರವಿಂದ್ ಎಸ್. ಕಶ್ಯಪ್ ಛಾಯಾಗ್ರಹಣ ಮತ್ತು ಬಿ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜನೆ ಜೀವ ತುಂಬಲಿದೆ. ವಿಜಯ್ ಕಿರಗಂದೂರು ಅವರ ಹೊಂಬಾಳೆ ಫಿಲಂಸ್, ಸದಾ ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಮತ್ತು ಭಾವನಾತ್ಮಕ ಕಥೆಗಳನ್ನು ಹೇಳುವ ತನ್ನ ಬದ್ಧತೆಯನ್ನು ಈ ಚಿತ್ರದ ಮೂಲಕ ಮತ್ತೊಮ್ಮೆ ಸಾಬೀತುಪಡಿಸಿದೆ.

ಮೂರು ವರ್ಷದ ನಿರಂತರ ಶ್ರಮದ ಫಲವಾಗಿ ಕಾಂತಾರ 1 ಮೂಡಿ ಬಂದಿದ್ದು, ನಿರ್ದೇಶಕ ರಿಶಬ್ ಶೆಟ್ಟಿ ಅವರೇ ಚಿತ್ರದ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಆ ವಿಡಿಯೋದಲ್ಲಿ ಶೂಟಿಂಗ್ ಲೊಕೇಶನ್‌ಗಳು, ಸೆಟ್‌ಗಳು, ಪ್ರತಿದಿನ ಕೆಲಸ ಮಾಡುತ್ತಿದ್ದ ನೂರಾರು ಕಾರ್ಮಿಕರ ಚಿತ್ರಣವನ್ನು 2 ನಿಮಿಷ 6 ಸೆಕೆಂಡ್ ಅವಧಿಯಲ್ಲಿ ತೋರಿಸಲಾಗಿತ್ತು. 'ಕಾಂತಾರ ಚಾಪ್ಟರ್ 1' ಅಕ್ಟೋಬರ್ 2, 2025ರಂದು ಕನ್ನಡ ಸೇರಿದಂತೆ ತೆಲುಗು, ಹಿಂದಿ, ತಮಿಳು, ಮಲಯಾಳಂ, ಬಂಗಾಳಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ವಿಶ್ವಾದ್ಯಂತ ಏಕಕಾಲಕ್ಕೆ ಬಿಡುಗಡೆಯಾಗಲಿದೆ.

ಆ.31ಕ್ಕೆ ಮೈಸೂರಲ್ಲಿ ಸಂದೇಶ್ ನಾಗರಾಜ್ '80' ವರ್ಷದ ಜನ್ಮ ಸಂದೇಶ



ಚಲನಚಿತ್ರ ನಿರ್ಮಾಪಕ, ಮಾಜಿ ಎಂಎಲ್‌ಸಿ. ಸಂದೇಶ್ ನಾಗರಾಜ್ ಚಲನಚಿತ್ರ ಹಾಗೂ ರಾಜಕೀಯ ಎರಡೂ ಕ್ಷೇತ್ರಗಳಲ್ಲಿ ಗುರುತಿಸಿಕೊಂಡವರು. ಮಣ್ಣಿನ ದೋಣಿಯಿಂದ ಆರಂಭಿಸಿ 36ಕ್ಕೂ ಹೆಚ್ಚು ಚಿತ್ರಗಳನ್ನು ಕನ್ನಡ ಚಿತ್ರರಂಗಕ್ಕೆ ಕೊಡುಗೆಯಾಗಿ ನೀಡಿದ್ದಾರೆ, ಅಂಬರೀಶ್, ಶಿವಣ್ಣ, ದರ್ಶನ್ ಸೇರಿದಂತೆ ಬಹುತೇಕ ಸ್ಟಾರ್ ನಟರು ಇವರ ಬ್ಯಾನರ್‌ನಲ್ಲಿ ಕೆಲಸ ಮಾಡಿದ್ದಾರೆ. ಇದೀಗ ಸಂದೇಶ್ ನಾಗರಾಜ್ 80ನೇ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಹೌದು, ಆ.16ಕ್ಕೆ ಅವರು 79 ವಸಂತಗಳನ್ನು ಪೂರೈಸಿ, 80ನೇ ವಸಂತಕ್ಕೆ ಕಾಲಿಡಲಿದ್ದಾರೆ. ಅವರ 80ನೇ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಲು ಅವರ ಕುಟುಂಬವರ್ಗ ಮುಂದಾಗಿದೆ. ಅದಕ್ಕಾಗಿ ಆ.31ರಂದು ಮೈಸೂರಿನ ವಸ್ತು ಪ್ರದರ್ಶನ ಮೈದಾನದಲ್ಲಿ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಅವರ ಮಕ್ಕಳಾದ ಎನ್. ಸಂದೇಶ್, ಬೃಂದಾ, ಮಂಜೇಶ್ ಮಾಹಿತಿ ನೀಡಿದರು.

ನಮ್ಮ ತಂದೆಯವರ ಹುಟ್ಟುಹಬ್ಬದ ಪ್ರಯುಕ್ತ ಆ. 31ರಂದು ಮೈಸೂರಿನಲ್ಲಿ ದೊಡ್ಡ ಮಟ್ಟದ ಸಮಾರಂಭ ಆಯೋಜಿಸಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಟರಾದ ಶಿವರಾಜಕುಮಾರ್, ಸುದೀಪ್ ಸೇರಿದಂತೆ ಚಿತ್ರರಂಗದ ಹಲವಾರು ಕಲಾವಿದರು, ತಂತ್ರಜ್ಞರು ಹಾಗೂ ರಾಜಕೀಯ ಮುಖಂಡರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಅಂದು 11.30ಕ್ಕೆ ಅರ್ಜುನ್ ಜನ್ಯ ಅವರಿಂದ ಮನರಂಜನಾ ಕಾರ್ಯಕ್ರಮ ಅಲ್ಲದೆ ನಮ್ಮ ತಂದೆಯವರು ನಡೆದು ಬಂದ ಹಾದಿಯ ಬಗ್ಗೆ ಮಾಡಿರುವ ಡಾಕ್ಯುಮೆಂಟರಿಯ ಪ್ರದರ್ಶನವಿರುತ್ತದೆ. ಅಲ್ಲದೆ ಸುಮಾರು 50 ಸಾವಿರ ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ, ಈಗ ನಾನು ಸಂದೇಶ್ ಕಂಬೈನ್ಸ್ ಮೂಲಕ ಒಂದಿಷ್ಟು ಸಿನಿಮಾಗಳನ್ನು ನಿರ್ಮಿಸುತ್ತಿದ್ದೇನೆ, ಚಿತ್ರರಂಗಕ್ಕೆ ನಮ್ಮ ತಂದೆಯವರ ಕೊಡುಗೆ ತುಂಬಾ ಇದೆ. ಹಾಗೆಯೇ ಅವರು ರಾಜಕೀಯ, ಉದ್ಯಮದಲ್ಲೂ ಯಶಸ್ಸಿನ ಮೆಟ್ಟಿಲು ಏರಿದ್ದಾರೆ. ಮಕ್ಕಳಾದ ನಾವು ಅವರಿಂದ ತುಂಬಾ ಕಲಿತಿದ್ದೇವೆ. ಮುಖ್ಯವಾಗಿ ತಂದೆಯವರು 'ಯಾರಿಗೂ ಬಡ್ಡಿಗೆ ಹಣ ಕೊಡಬೇಡ, ಅವಶ್ಯಕತೆ ಇರೋರಿಗೆ, ಯಾವುದೇ ನಿರೀಕ್ಷೆ ಇಟ್ಟುಕೊಳ್ಳದೆ ಸಹಾಯ ಮಾಡು ಎಂದು ಯಾವಾಗಲೂ ಹೇಳುತ್ತಿರುತ್ತಾರೆ' ಎಂದು ಸಂದೇಶ್ ಹೇಳಿದರು.



ಸಂದೇಶರ ಮಕ್ಕಳಾದ ಬೃಂದಾ, ಎನ್.ಸಂದೇಶ್ ಪತ್ರಿಕಾಗೋಷ್ಠಿ

'ಸೂರಿಯಣ್ಣ'ನ ರೌಡಿಸಂ ಸಂದೇಶ



ಸಲಗ ಚಿತ್ರದಲ್ಲಿ ಹೀರೋನಷ್ಟೇ ಫೇಮಸ್ ಆಗಿದ್ದು ಸೂರಿಯಣ್ಣ ಎಂಬ ವಿಲನ್ ಪಾತ್ರ. ಆ ಪಾತ್ರ ಮಾಡಿದ್ದ ದಿನೇಶ್ ಇದೀಗ ಸೂರಿಯಣ್ಣ ಎಂದೆ ಖ್ಯಾತರಾಗಿದ್ದಾರೆ. ಪ್ರಸ್ತುತ ದಿನೇಶ್ ಅದೇ ಹೆಸರಿಲ್ಲಿ ಹೊಸ ಚಿತ್ರವೊಂದನ್ನು ನಿರ್ಮಿಸಿದ್ದಾರೆ. ಅಲ್ಲದೆ ನಾಯಕನಾಗಿ ನಟಿಸಿ ನಿರ್ದೇಶನದ ಜವಾಬ್ದಾರಿಯನ್ನು ಸಹ ನಿಭಾಯಿಸಿದ್ದಾರೆ. ಯಾರೂ ಸಹ ರೌಡಿಸಂಗೆ ಬರಬೇಡಿ ಎಂಬ ಸಂದೇಶವನ್ನು ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ನಡೆಯಿತು, ಈ ಹಿಂದೆ ಮಾರಿಗುಡ್ಡದ ಗಡ್ಡಧಾರಿಗಳು ಚಿತ್ರ ನಿರ್ಮಿಸಿದ್ದ ದಿನೇಶ್ ಅವರ ಬ್ಯಾನರ್‌ನ ಎರಡನೇ ಚಿತ್ರವಿದು. ನಿವೃತ್ತ ಪೊಲೀಸ್ ಅಧಿಕಾರಿ ಎಸ್.ಕೆ. ಉಮೇಶ್, ಲಹರಿ ವೇಲು, ಎಚ್.ಎಂ. ಕೃಷ್ಣಮೂರ್ತಿ(ಜೇಡ್ರಳ್ಳಿ ಕೃಷ್ಣಪ್ಪ), ಪಿ. ಮೂರ್ತಿ ಹಾಗೂ ಇತರೆ ಗಣ್ಯರು ಟೀಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಾಯಕ ದಿನೇಶ್, ನಾನು ಈ ಸಿನಿಮಾ ಕಂಪ್ಲೀಟ್ ಮಾಡಲು ಇಲ್ಲಿರುವ ಸಾಕಷ್ಟು ಜನರ ಸಹಕಾರ ಕಾರಣ. ನನ್ನ ಸಹೋದರ ವಿಜಯ್ ಸಹ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ, ದಶಕಗಳ ಹಿಂದೆ ತೆರೆಕಂಡ ರೌಡಿಸಂ ಕಥೆ ಆಧರಿಸಿದ ಶಿವಣ್ಣ ಮಾಡಿದ್ದ ಚಿತ್ರ 'ಓಂ' ದಾಖಲೆಯನ್ನೇ ಬರೆದಿತ್ತು. ಅದೇ ಥರ ಸೂರಿಯಣ್ಣ ಕೂಡ ರೌಡಿಸಂ ಸುತ್ತ ನಡೆಯುವ ಕಥಾಹಂದರ ಇರೋ ಚಿತ್ರ. ಯಾರೂ ಸಹ ಈ ರೌಡಿಸಂಗೆ ಬರಬೇಡಿ, ಎಲ್ಲರಿಗೂ ಕುಟುಂಬ ಇರುತ್ತದೆ. ಎಲ್ಲದಕ್ಕಿಂತ ನಮಗೆ ಕುಟುಂಬವೇ ಮುಖ್ಯ ಎಂಬ ಸಂದೇಶವನ್ನು ನಮ್ಮ ಚಿತ್ರದ ಮೂಲಕ ಯುವಜನರಿಗೆ ಹೇಳಿದ್ದೇವೆ. ಲೀಡ್‌ರೋಲ್‌ನಲ್ಲಿ ನಾನೇ ನಟಿಸಿದ್ದು, ನಾಯಕಿಯಾಗಿ ಸಂಭ್ರಮಶ್ರೀ ಉತ್ತಮವಾಗಿ ಅಭಿನಯಿಸಿದ್ದಾರೆ. ಈಗಾಗಲೇ ಶೂಟಿಂಗ್ ಮುಗಿದಿದ್ದು, ಇನ್ನೆರಡು ತಿಂಗಳಲ್ಲಿ ಚಿತ್ರವನ್ನು ರಿಲೀಸ್ ಮಾಡುವ ಯೋಜನೆಯಿದೆ ಎಂದರು.

ಖಳನಟ ಕಾಕ್ರೋಜ್ ಸುಧೀ ಮಾತನಾಡಿ ಹೆರಿಗೆ ನೋವಿನ ಬಗ್ಗೆ ಒಬ್ಬ ತಾಯಿ ಮಾತ್ರ ಹೇಳಲು ಸಾಧ್ಯ, ಹಾಗೇ ರೌಡಿಸಂ ಮಾಡಿದವರು ಅನುಭವಿಸುವ ನೋವುಗಳನ್ನು ಅವರೇ ಹೇಳಬೇಕು. ಹಾಗೆ ಹೇಳೋ ಜತೆಗೆ ಯಾರೂ ಈ ತಪ್ಪು ಮಾಡಬೇಡಿ ಎಂದು ಜನರಿಗೆ ಹೇಳೋ ಪ್ರಯತ್ನವನ್ನು ಸೂರಿ ಅವರು ಮಾಡಿದ್ದಾರೆ ಎಂದರು. ನಾಯಕಿ ಸಂಭ್ರಮಶ್ರೀ, ಯಶಸ್ವಿನಿಗೌಡ, ಕಾಮರಾಜ್, ಪ್ರಸಾದ್, ಸಂಗೀತ ನಿರ್ದೇಶಕ ಕೆ.ಎಂ. ಇಂದ್ರ ಎಲ್ಲರೂ ಚಿತ್ರದ ಕುರಿತು ಮಾತನಾಡಿದರು.

ರವಿಕಾಳೆ, ಹರೀಶ್‌ರಾಯ್, ಪ್ರಕಾಶ್ ತುಮಿನಾಡ, ಉಮೇಶ್, ಚಿತ್ರಾಲ್ ರಂಗಸ್ವಾಮಿ, ಬೆನಕ ನಂಜಪ್ಪ, ಬೇಬಿ ಮರಿಶಾ, ಪ್ರವೀಣ್‌ರಾಜ್ ಉಳಿದ ಪಾತ್ರಗಳಲ್ಲಿದ್ದಾರೆ. ಐದು ಹಾಡುಗಳಿಗೆ ಕೆ.ಎಂ.ಇಂದ್ರ ಸಂಗೀತ ಸಂಯೋಜನೆ ಮಾಡಿದ್ದು, ಶ್ರೀಧರ್ ಕಶ್ಯಪ್ ಹಿನ್ನೆಲೆ ಸಂಗೀತ ಒದಗಿಸಿದ್ದಾರೆ.




ಸೂರಿಯಣ್ಣ ಚಿತ್ರದಲ್ಲಿ ನಾಯಕಿ ಸಂಭ್ರಮಶ್ರೀ, ನಾಯಕ ದಿನೇಶ್

ಸಿನಿಪದಬಂಧ-589



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಸಾಯಿಕುಮಾರ್ ಅಭಿನಯದಲ್ಲಿ ಬಂದ ಸ್ವತಂತ್ರ ಭಾರತದ ಪ್ರಮುಖ ದಿವಸ 6
3. ರವೀಂದ್ರನಾಥ ಠಾಗೋರ್ ನೆನಪಿಸಿಕೊಂಡರೆ ಕೆ.ವಿ.ರಾಜು ಚಿತ್ರ ಪ್ರತ್ಯಕ್ಷ ! 4
5. ಪ್ರೀತ್ಸೋದ್ ತಪ್ಪಾ ಚಿತ್ರದ ಹಾಡೊಂದರ ಸಾಲು ಹೀಗಿದೆ 7
6. ನಮ್ಮ ದೇಶದ ಹೆಣ್ಣು ತೂಕವಿದ್ದಾಳೆ 3
7. ಶಿವಂ ಸುಂದರಂ ಜೊತೆ ಬಂದವನು 2
11. ತ್ರಿವರ್ಣ ಧ್ವಜದಲ್ಲಿ ಇದೊಂದು ಬಣ್ಣ 2
12. _ _ ಭಾರತ 2
13. ಭಾರತ _ _ ವಿಧಾತಾ 2
14. ರಾಷ್ಟ್ರಗೀತೆಯ ಆರಂಭ ಚಿತ್ರವೂ ಹೌದು ! 6
15. "ಜೈ ಭಾರತ ಜನನಿಯ _ _ _ _ ಜಯ ಹೇ ಕರ್ನಾಟಕ ಮಾತೇ.... ", 4
16. ವಿಭಾ ರೈ ಜನ್ಮ ನೀಡಿದವಳು 3

ಮೇಲಿನಿಂದ ಕೆಳಕ್ಕೆ

1. ಪ್ರಸ್ತುತ ನಮ್ಮ ದೇಶಕ್ಕೆ ಶಂಕರ್‌ನಾಗ್ ಅಭಿನಯವಿದೆ 6
2. ಇಲ್ಲೇ ಎಡದಿಂದ ಬಲಕ್ಕೆ 1 ರಲ್ಲಿನ ಚಿತ್ರದ ಸಂಭಾಷಣೆ ಈತನದು 3
3. ಜನನಿ ಜನ್ಮ ಭೂಮಿ ಚಿತ್ರದ ಸಂಗೀತ ನಿರ್ದೇಶಕರು 6
4. ರವಿಚಂದ್ರನ್ ಸದ್ದಿಲ್ಲದೇ ನಡೆಸಿದ ಆಂದೋಲನ 4
7. ದೇವರಾಜ್ ಅಭಿನಯದಲ್ಲಿ ಭಾರತದ ರಾಷ್ಟ್ರೀಯ ಧ್ಯೇಯ ವಾಕ್ಯವಿದೆ 7
8. "ಜಯ _ _ _ _ _ _ ಯ ತನುಜಾತೆ ಜಯ ಹೇ ಕರ್ನಾಟಕ ಮಾತೆ.... ", 6
9. ಟೈಗರ್ ಪ್ರಭಾಕರ್ ಅಭಿನಯದ ನಮ್ಮ ದೇಶ ಸುಂದರವಾಗಿದೆ 5
10. ನಮ್ಮ ತ್ರಿವರ್ಣ ಬಾವುಟಕ್ಕೆ ಹೀಗೇನ್ನಿ 5

ಸಿನಿ ಪದಬಂಧ 588ರ ಉತ್ತರ

ಮ	ನೆ	ಗೆ	ಬಂ	ದ	ಮ	ಹಾ	ಲ	ಕ್ಷ್ಮಿ		ಹೊ
ಹಾ			ಧ				ಕ್ಷ್ಮಿ		ದಾ	ಸ
ಚ	ಕ್ರ		ನ		ಆ		ಣ			ಬಾ
ತು				ಎ	ರ	ಡು	ರೇ	ಖೆ	ಗ	ಳು
ರ	ಘು	ವೀ	ರ್		ತಿ		ಖೆ		ಲಾ	
				ಹ		ರಂ		ಬೇ	ಟೆ	
ಆ	ರ್ಮಿ		ಶ	ನಿ	ಪ್ರ	ಭಾ	ವ		ಅ	
ನಂ				ಮೂ					ಳಿ	
ದ	ಶ		ಏ	ನ್	ಸ್ವಾ	ಮಿ	ಅ	ಳಿ	ಯಂ	ದ್ರೆ
ಕಂ			ನೊಂ		ಮೀ		ಮ್ಮ		ದ್ರು	
ದ	ರಾ	ಬೇಂ	ದ್ರೆ		ಜಿ					

ವಿಜೇತರು: ರಾಜು, ನಂ. 646, 3ನೇ ಮೇನ್, 2ನೇ ಕ್ರಾಸ್, ಮಹದೇಶ್ವರ ಬಡಾವಣೆ, ವಿಜಯನಗರ 2ನೇ ಹಂತ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015



ಗುಣಮಟ್ಟ, ದೀರ್ಘ ಬಾಳಿಕೆಯ ಎಲ್ಲಾ ವಿಧದ ಟಾರ್ಪಾಲಿನ್ಸ್ ಬ್ಯಾಗ್‌ಗಳಿಗೆ ಸಂಪರ್ಕಿಸಿ

ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ಚಿತ್ರೀಕರಣ ಮುಗಿಸಿದ 'ಮತ್ತೆ ಮಳೆ ಹೊಯ್ಯುತ್ತಿದೆ'



ಇತ್ತೀಚೆಗೆ ಬರ್ತಿರೋ ಸಿನಿಮಾಗಳು ತನ್ನ ಟೈಟಲ್‌ನಿಂದಲೇ ಪ್ರೇಕ್ಷಕರನ್ನು ಆಕರ್ಷಿಸುತ್ತಿವೆ. ಶೀರ್ಷಿಕೆಯೇ ಸಿನಿಮಾ ನೋಡಬೇಕೆನ್ನುವ ಆಸೆ ಹುಟ್ಟಿಸುತ್ತವೆ. ಅಂಥಾ ಮತ್ತೊಂದು ಸಿನಿಮಾ 'ಮತ್ತೆ ಮಳೆ ಹೊಯ್ಯುತ್ತಿದೆ'. ಪರಂಗುಬ್ಬಿ ಅವರ ನಿರ್ದೇಶನ ಈ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. 3 ದಶಕಗಳಿಂದ ಸಹಾಯಕ ಕಲಾನಿರ್ದೇಶಕರಾಗಿರುವ ಗಂಗಾಧರ್ ಅವರು ಶ್ರೀಗವಿರಂಗನಾಥ ಸ್ವಾಮಿ ಪಿಕ್ಚರ್ಸ್ ಅಡಿ ಪತ್ನಿ ಸುಮಾ ಅವರ ಹೆಸರಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಸಾಹಿತಿ ಸದಾಶಿವ ಅವರ 12 ಪುಟಗಳ ಈ ಕಥೆಯನ್ನಿಟ್ಟುಕೊಂಡು ನರೇಂದ್ರಬಾಬು ಅವರು ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದಿದ್ದಾರೆ. ಸಂಗೀತ ಅತಿಶಯ ಜೈನ್ ಅವರದ್ದಾಗಿದೆ. ಫಿಲಂ ಚೇಂಬರ್ ಅಧ್ಯಕ್ಷ ನರಸಿಂಹಲು, ಉಮೇಶ್ ಬಣಕಾರ್ ಮತ್ತು ಎನ್ನಾರ್.ಕೆ.ವಿಶ್ವನಾಥ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಿರ್ಮಾಪಕರ ಪುತ್ರ ಜಿ.ಲಿಖಿತ್ ಹಾಗೂ ಜಯವರ್ಧನ್ ಈ ಚಿತ್ರದ ನಾಯಕರಾಗಿದ್ದು, ಸುಲಕ್ಷ ಖೈರಾ ಹಾಗೂ ಭೂಮಿಕಗೌಡ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು, ಕೆ.ಸದಾಶಿವ ಅವರ ಸಣ್ಣ ಕತೆಗಳಲ್ಲಿ ಒಂದಾದ 'ಮತ್ತೆ ಮಳೆ ಹೊಯ್ಯುತಿದೆ' ಕೃತಿಯನ್ನಿಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ, ಅಮೇರಿಕಾದಲ್ಲಿ ನೆಲೆಸಿದ್ದ ಅವರ ಮಗಳನ್ನು ಸಂಪರ್ಕಿಸಿ ಅನುಮತಿ ಪಡೆದುಕೊಂಡೆವು. ಅವರಿಗೆ ನೀಡಬಹುದಾದ ಸಂಭಾವನೆ ಮೊತ್ತವನ್ನು ಸಾಹಿತ್ಯ ಪರಿಷತ್‌ನಲ್ಲಿ ದತ್ತಿಯಾಗಿ ನೀಡಿ, ಪ್ರತಿವರ್ಷ ಸದಾಶಿವ ಹೆಸರಿನಲ್ಲಿ ಯುವಬರಹಗಾರರಿಗೆ ಪ್ರಶಸ್ತಿ ನೀಡುವ ಯೋಜನೆಯನ್ನು, ನಿರ್ಮಾಪಕರಿಗೆ ಹೇಳಿದಾಗ ಅವರೂ ಒಪ್ಪಿಕೊಂಡರು. 80ರ ದಶಕ ಹಾಗೂ 2000ನೇ ಇಸವಿಯಲ್ಲಿ ನಡೆಯುವ ಎರಡು ಕಾಲಘಟ್ಟದ ಕಥೆಯನ್ನು ಈ ಚಿತ್ರ ಹೇಳುತ್ತದೆ. ಮೊದಲನೇ ಜೋಡಿಯ ಪ್ರೇಮಕತೆ ವಿಫಲವಾಗುತ್ತದೆ. ಎರಡನೇ ಜೋಡಿಯ ಲವ್‌ಸ್ಟೋರಿ ಯಶಸ್ಸು ಕಾಣುತ್ತದೆ. ಇವೆರಡರ ನಡುವಿನ ಸನ್ನಿವೇಶಗಳು ಮನವನ್ನು ಕದಡುತ್ತದೆ. ಸಿನಿಮಾದಲ್ಲಿ ಮಳೆ ಮಹತ್ವದ ಪಾತ್ರ ನಿರ್ವಹಿಸಿದೆ. ಶೃಂಗೇರಿ, ಹೊರನಾಡು, ಕೊಪ್ಪ, ಹರಿಹರಪುರ, ಆಗುಂಬೆ ಸುತ್ತ ಮುತ್ತಲ ಸುಂದರ ತಾಣಗಳಲ್ಲಿ ಚಿತ್ರೀಕರಣ ಮುಗಿಸಿದ್ದೇವೆ. ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದ್ದು, ಅಕ್ಟೋಬರ್‌ನಲ್ಲಿ ರಿಲೀಸ್ ಮಾಡುವ ಯೋಜನೆಯಿದೆ ಎಂದು ಮಾಹಿತಿ ನೀಡಿದರು.

ಅತಿಯಾಗಿ ಮಳೆಯನ್ನು ತೋರಿಸಿದ ಬಹುತೇಕ ಚಿತ್ರಗಳು ಯಶಸ್ವಿಯಾಗಿರುವ ಬಗ್ಗೆ ದಾಖಲೆಯಿದೆ. ಮೂಲತ: ಬರಹಗಾರರಾದ ನಿರ್ದೇಶಕರಲ್ಲೇ ಸಾಕಷ್ಟು ಕಥೆಗಳಿವೆ. ಆದರೂ ಇನ್ನೊಬ್ಬರ ಕಥೆ ತೆಗೆದುಕೊಂಡು ಚಿತ್ರ ಮಾಡಿದ್ದಾರೆ. ಅವರು ಲೇಖಕರಿಗೆ ಏನು ಗೌರವ ಕೊಡಬೇಕೋ ಅದನ್ನು ಸಲ್ಲಿಸಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಎಂದು ಎನ್ನಾರ್.ಕೆ.ವಿಶ್ವನಾಥ್ ಹೇಳಿದರು.

ಸಂಪುಟದಿಂದ ಸಹಕಾರ ಸಚಿವ ಕೆ.ಎನ್.ರಾಜಣ್ಣ ವಜಾ ಖಂಡಿಸಿ

ನಾಯಕರ ಸಂಘದಿಂದ ಬೃಹತ್ ಪ್ರತಿಭಟನೆ


ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು, ಆ.14– ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ಕೈ ಬಿಟ್ಟಿರುವ ಕ್ರಮ ಖಂಡಿಸಿ ತಾಲೂಕು ನಾಯಕರ ಸಂಘದಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಜಮಾಯಿಸಿದ ತಾಲೂಕು ನಾಯಕರ ಸಂಘದ ಪದಾಧಿಕಾರಿಗಳು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾತನಾಡಿ, ರಾಜ್ಯ ಸರ್ಕಾರ ನಾಯಕ ಸಮುದಾಯದ ರಾಜಕಾರಣಿಗಳನ್ನು ರಾಜಕೀಯವಾಗಿ ಹತ್ತಿಕ್ಕುವ ಹುನ್ನಾರ ನಡೆಸುತ್ತಿದೆ. ವಾಲ್ಮೀಕಿ ನಿಗಮದ ಹಗರಣದ ಮೂಲಕ ನಮ್ಮ ಸಮುದಾಯದ ನಾಗೇಂದ್ರ ಅವರನ್ನು ಜೈಲಿಗಟ್ಟಿದ್ದಲ್ಲದೆ, ಅದೇ ವಾಲ್ಮೀಕಿ ನಿಗಮದ ಹಣ ಬಳಸಿಕೊಂಡು ಶ್ರೀರಾಮುಲು ಅವರನ್ನು ಸೋಲಿಸಲಾಯಿತು. ಈಗ ಕೆ.ಎನ್.ರಾಜಣ್ಣ ಅವರು ಯಾವ ತಪ್ಪು ಮಾಡದಿದ್ದರೂ ಅವರ ತಪ್ಪು ಏನೆಂದು ತಿಳಿಸದೆ ಏಕಾಏಕಿ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿರುವುದು ದುರದೃಷ್ಟಕರ. ಸತ್ಯ ಮಾತನಾಡುವುದೇ ತಪ್ಪು ಎಂದಾದರೆ ಹೇಗೆ? ಕೆ.ಎನ್.ರಾಜಣ್ಣರವರು ಎಸ್ಸಿ, ಎಸ್ಟಿ ಕ್ಷೇತ್ರಗಳಲ್ಲಿ ಆಯ್ಕೆಯಾಗದೆ ಸಾಮಾನ್ಯ ಕ್ಷೇತ್ರದಲ್ಲಿ ತಮ್ಮ ಸಾಮರ್ಥ್ಯದಿಂದ ಆಯ್ಕೆಯಾಗಿ ಬಂದವರು. ಅಂತಹ ಹಿರಿಯ ರಾಜಕಾರಣಿಯನ್ನು ಹೀಗೆ ಸಚಿವ ಸಂಪುಟದಿಂದ ಏಕಾಏಕಿ ಕೈಬಿಟ್ಟು ಅವಮಾನಿಸಿರುವ ಕ್ರಮ ಸರಿಯಲ್ಲ. ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು. ಇಲ್ಲವಾದಲ್ಲಿ ರಾಜ್ಯ ಸರ್ಕಾರಕ್ಕೆ ತಕ್ಕಪಾಠ ಕಲಿಸಲಾಗುವುದು ಎಂದು ಎಚ್ಚರಿಸಿದರು.

ತಾಲೂಕು ನಾಯಕರ ಸಂಘದ ಅಧ್ಯಕ್ಷ ಕೆ.ನಾಗರಾಜು ಮಾತನಾಡಿ, ಕೆ.ಎನ್.ರಾಜಣ್ಣ ಅವರನ್ನು ಏಕಾಏಕಿ ಸಚಿವ ಸಂಪುಟದಿಂದ ವಜಾಗೊಳಿಸಿ ನಾಯಕ ಸಮುದಾಯಕ್ಕೆ ಅನ್ಯಾಯವೆಸಗಿರುವ ರಾಜ್ಯ ಸರ್ಕಾರದ ಕ್ರಮ ಖಂಡನೀಯ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಎಚ್ಚೆತ್ತು ಅವರನ್ನು ಸಚಿವ ಸಂಪುಟಕ್ಕೆ ಮತ್ತೆ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಳಲೆ ಗ್ರಾಪಂ ಅಧ್ಯಕ್ಷ ಮಹೇಶ್, ತಾಲೂಕು ನಾಯಕರ ಸಂಘದ ಗೌರವಾಧ್ಯಕ್ಷ ಶಿವನಂಜನಾಯಕ, ನಾಯಕ ಸಮುದಾಯದ ಪ್ರಧಾನ ಕಾರ್ಯದರ್ಶಿ ಶ್ರೀಕಂಠಸ್ವಾಮಿ, ಖಜಾಂಚಿ ಸುಧೀಂದ್ರ ಕುಮಾರ್, ತಾಪಂ ಮಾಜಿ ಸದಸ್ಯ ಹುಲ್ಲಹಳ್ಳಿ ಶಿವಣ್ಣ, ಮುಖಂಡರಾದ ಹಳ್ಳದಕೇರಿ ನಾಗರಾಜು, ಗೋನಹಳ್ಳಿ ಕುಮಾರ್, ಲಕ್ಷ್ಮಣ, ಬಸವರಾಜು, ರಂಗಸ್ವಾಮಿ ಸೇರಿದಂತೆ ಹಲವರಿದ್ದರು.

ನಗರಸಭಾ ಸದಸ್ಯನಿಂದ ಜೂನಿಯರ್ ಇಂಜಿನಿಯರ್ ಮೇಲೆ ಹಲ್ಲೆ, ಜಾತಿ ನಿಂದನೆ ಖಂಡಿಸಿ

ಪೌರಸೇವಾ ನೌಕರರ ಸಂಘದಿಂದ ಪ್ರತಿಭಟನೆ


ಪೌರಸೇವಾ ನೌಕರರ ಸಂಘದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಜಸಲಾಯಿತು.

ಹುಣಸೂರು, ಆ.14– ನಗರಸಭೆ ಸದಸ್ಯರೊಬ್ಬರು ಕಿರಿಯ ಅಭಿಯಂತರರ ಮೇಲೆ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿ ದೌರ್ಜನ್ಯವೆಸಗಿರುವುದನ್ನು ಖಂಡಿಸಿ ಪೌರಸೇವಾ ನೌಕರರ ಸಂಘದಿಂದ ಗುರುವಾರ ನಗರಸಭೆ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಲಾಯಿತು.

ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಪಿ.ರಾಚಯ್ಯ ಮಾತನಾಡಿ, ಬುಧವಾರ ಸಂಜೆ ತಾಂತ್ರಿಕ ವಿಭಾಗದ ಕಿರಿಯ ಅಭಿಯಂತರ ಟಿ.ಎಸ್. ಲೋಕೇಶ್ ಅವರು ನಗರಸಭೆಯಲ್ಲಿ ಕೆಲಸ ಮಾಡುವಾಗ 12ನೇ ವಾರ್ಡ್ ಸದಸ್ಯ ವಿವೇಕಾನಂದ ಅವರು ನನ್ನ ಕೆಲಸವಾಗಿದೆಯಾ ಎಂದು ವಿಚಾರಿಸಿ ಏರುಧ್ವನಿ, ಏಕವಚನದಲ್ಲಿ ನಿಂದಿಸಿ ಕಂಪ್ಯೂಟರ್ ಕೀ ಬೋರ್ಡ್ ಕಿತ್ತೆಸೆದು ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿದ್ದಾರೆ. ಇದರಿಂದ ಮನನೊಂದ ಲೋಕೇಶ್ ಅವರು ನಮ್ಮ ಸಂಘದಲ್ಲಿ ತಮ್ಮ ನೋವನ್ನು ಹೇಳಿಕೊಂಡಿದ್ದರಿಂದ ನಮ್ಮ ಸಂಘದ ತೀರ್ಮಾನದಂತೆ ಪ್ರತಿಭಟನೆ ನಡೆಸುತ್ತಿದ್ದೇವೆ. ಹೀಗಾಗಿ ಸದಸ್ಯ ವಿವೇಕಾನಂದ ಅವರು ಸ್ಥಳಕ್ಕಾಗಮಿಸಿ ಕ್ಷಮೆ ಕೇಳಬೇಕು. ಅಲ್ಲದೇ ಪೌರಸೇವಾ ನೌಕರರಿಗೆ ರಕ್ಷಣೆ ಒದಗಿಸಬೇಕು. ಅಲ್ಲಿವರೆಗೆ ನಾವು ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ತಿಳಿಸಿದರು.

ಸಂಘದ ಉಪಾಧ್ಯಕ್ಷ ಹೆಚ್.ಎನ್.ಚಂದ್ರ, ಸಂಘಟನಾ ಕಾರ್ಯದರ್ಶಿ ಆರ್.ಸಿದ್ದಯ್ಯ ಮಾತನಾಡಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಪೌರಾಯುಕ್ತೆ ಮಾನಸ, ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ ಹಾಗೂ ಸದಸ್ಯರು ಪ್ರತಿಭಟನಾಕಾರರ ಮನವೊಲಿಸಲು ಪ್ರಯತ್ನಿಸಿದರಾದರೂ ಯಾವುದೇ ಪ್ರಯೋಜನವಾಗಲಿಲ್ಲ. ಬದಲಿಗೆ ಪ್ರತಿಭಟನಾಕಾರರು ಸದಸ್ಯ ವಿವೇಕಾನಂದ ಅವರು ಸ್ಥಳಕ್ಕಾಗಮಿಸಿ ಕ್ಷಮೆಯಾಚಿಸಬೇಕು. ಇಲ್ಲದಿದ್ದರೇ ಕಾನೂನು ಹೋರಾಟ ನಡೆಸಲಾಗುವುದು ಎಂದರು.

ಈ ವೇಳೆ ನಾಳೆ (ಶುಕ್ರವಾರ) ಸ್ವಾತಂತ್ರ್ಯ ದಿನಾಚರಣೆ ಇರುವುದರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಬಿಡುವು ನೀಡಿ ನಮ್ಮ ಸೇವಾ ಕಾರ್ಯಗಳಲ್ಲಿ ಭಾಗವಹಿಸುತ್ತೇವೆ. ಶನಿವಾರ ನಮ್ಮ ಪ್ರತಿಭಟನೆ ಎಂದಿನಂತೆ ಮುಂದುವರೆಯಲಿದೆ ಎಂದರು.

ಪ್ರತಿಭಟನೆಯಲ್ಲಿ ಪೌರಸೇವಾ ನೌಕರರ ಸೇವಾ ಸಂಘದ ಕಾರ್ಯದರ್ಶಿ ನಾಗರಾಜು, ಸಹ ಕಾರ್ಯದರ್ಶಿ ಶಿವಕುಮಾರ್.ಕೆ.ಸಿ, ನಿರ್ದೇಶಕರಾದ ಕಿರಿಯ ಅಭಿಯಂತರರಾದ ಟಿ.ಎಸ್.ಲೋಕೇಶ್, ಹೆಚ್.ಎಂ.ಶರ್ಮಿಳಾ, ಪರಿಸರ ಇಂಜಿನಿಯರ್ ಕೆ.ಸೌಮ್ಯ, ಕೃಷ್ಣೇಗೌಡ, ಹೆಚ್.ಎನ್.ಮಹೇಶ್, ಪಿ.ಆನಂದ, ಮಂಜುಳಾ, ಶಿವಸ್ವಾಮಿ, ಗಣೇಶ್, ಬಣ್ಣಾರಿಸ್ವಾಮಿ, ಜ್ಯೋತಿ, ಸಿಬ್ಬಂದಿಗಳಾದ ಲೀಲಾವತಿ, ಸುರೇಂದ್ರ, ನಾಗಮ್ಮ, ಶಶಿಕುಮಾರ್, ಮಹೇಶ್, ಸುಧೀರ್, ನವೀನ್, ನಗರಸಭಾ ಸದಸ್ಯರಾದ ಸರವಣ, ಕೃಷ್ಣರಾಜಗುಪ್ತ, ಸ್ವಾಮಿಗೌಡ, ಜಾಕೀರ್ ಹುಸೇನ್, ಮಂಜು, ರಿಜ್ವಾನ್ ಸೇರಿದಂತೆ ಕುಡಿಯುವ ನೀರು ಸರಬರಾಜು, ಸ್ವಚ್ಛತೆ, ಪರಿಸರ, ಬೀದಿದೀಪ, ಆರೋಗ್ಯ, ಕಂದಾಯ, ತಾಂತ್ರಿಕ, ಆಡಳಿತ ಎಲ್ಲಾ ವಿಭಾಗಗಳ ನೌಕರರು, ಸಿಬ್ಬಂದಿ ಭಾಗವಹಿಸಿದ್ದರು.

ಶಿಕ್ಷಣದಿಂದ ಮಾತ್ರ ಸಾಧನೆ ಮಾಡಲು ಸಾಧ್ಯ

ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತ ಆಲಗೂಡು ಡಾ.ಚಂದ್ರಶೇಖರ್‌ಗೆ ಸನ್ಮಾನ


ಕಾರ್ಯಕ್ರಮದಲ್ಲಿ ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತ ಡಾ.ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಆ.14– ಯಾವುದೇ ವ್ಯಕ್ತಿ ಶಿಕ್ಷಣದಿಂದ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಎನ್‌ಕೆಎಫ್ ಪಬ್ಲಿಕ್ ಸ್ಕೂಲ್ ಮುಖ್ಯಸ್ಥ ಎನ್.ಕೆ.ಫರೀದ್ ತಿಳಿಸಿದರು.

ಪಟ್ಟಣದ ಪುರಸಭೆ ವ್ಯಾಪ್ತಿಯ ಆಲಗೂಡು ಗ್ರಾಮ ಸಮೀಪದ ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತ ಆಲಗೂಡು ಡಾ.ಚಂದ್ರಶೇಖರ್ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಪ್ರಸ್ತುತ ಶಿಕ್ಷಣ ಹೆಚ್ಚು ಮಹತ್ವ ಪಡೆದುಕೊಂಡಿದ್ದು, ಮಕ್ಕಳು ಪರಿಪೂರ್ಣ ಶಿಕ್ಷಣ ಪಡೆದಲ್ಲಿ ಯಾವುದೇ ಸಾಧನೆ ಮಾಡಲು ಸಾಧ್ಯ. ಹಾಗಾಗಿ ಮೊದಲು ಮಕ್ಕಳು ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು ಎಂದರು.

ಪ್ರಸ್ತುತ ಮಕ್ಕಳಿಗೆ ಸಂಸ್ಕಾರ ಅತ್ಯವಶ್ಯಕ. ಸಂಸ್ಕಾರವಿಲ್ಲದಿದ್ದರೆ ಎಷ್ಟೇ ಉನ್ನತ ಹುದ್ದೆ ಪಡೆದರೂ ವ್ಯರ್ಥ. ಹೀಗಾಗಿ ಮಕ್ಕಳು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಂಸ್ಕಾರಕ್ಕೆ ಆದ್ಯತೆ ನೀಡಬೇಕು. ಪೋಷಕರು ಉದ್ಯೋಗಕ್ಕಾಗಿ ಮಕ್ಕಳಿಗೆ ಶಿಕ್ಷಣ ಕೊಡಿಸದೇ ಜ್ಞಾನಾರ್ಜನೆಗಾಗಿ ಶಿಕ್ಷಣ ಕೊಡಿಸಬೇಕು. ಉನ್ನತ ಹುದ್ದೆ ಪಡೆಯಲು ಶಿಕ್ಷಣ ಪಡೆದರೇ ಅದರಿಂದ ಯಾವುದೇ ಪ್ರಯೋಜನವಿಲ್ಲ. ಬದಲಿಗೆ ಜ್ಞಾನ, ಸಮಾಜದ ಬದಲಾವಣೆಗೆ ಶಿಕ್ಷಣ ಅವಶ್ಯಕ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ.ಚಂದ್ರಶೇಖರ್, ತುಳಿತಕ್ಕೆ ಒಳಗಾದ ಸಮಾಜಕ್ಕೆ ನ್ಯಾಯ ಕೊಡಿಸಬೇಕೆಂಬ ಉದ್ದೇಶದಿಂದ ಸರ್ಕಾರಿ ಕೆಲಸ ಬಿಟ್ಟು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡೆ. ಸಮಾಜ ಸೇವೆ, ಜನತೆಗೆ ನ್ಯಾಯ ಒದಗಿಸಿಕೊಡುವ ಹಾದಿ ಸುಗಮವಲ್ಲ. ಬದಲಿಗೆ ಚಾಣಾಕ್ಷತನದಿಂದ ಬಡವರು, ದೀನ ದಲಿತರು, ತುಳಿತಕ್ಕೊಳಗಾದವರಿಗೆ ನ್ಯಾಯ ದೊರಕಿಸಿಕೊಡಬೇಕು. ಕೆಲವೊಮ್ಮೆ ನ್ಯಾಯ ಕೊಡಿಸುವ ಭರದಲ್ಲಿ ನಾವೇ ತೊಂದರೆಗೆ ಸಿಲುಕಿ ಕಷ್ಟ ಅನುಭವಿಸಬೇಕಾಗಿ ಬರಬಹುದು. ಇದನ್ನೆಲ್ಲಾ ಮೆಟ್ಟಿ ನಿಂತು ಸಮಾಜ ಸೇವೆಯಲ್ಲಿ ತೊಡಗಿ ಅದರಲ್ಲೇ ಸಂತೃಪ್ತಿ ಕಾಣುವ ಗುಣ ನನ್ನದಾಗಿದೆ. ಈಗಾಗಲೇ ನನ್ನ ಸೇವೆ ಗುರುತಿಸಿ ಜಿಲ್ಲೆ, ರಾಜ್ಯ, ಹೊರ ರಾಜ್ಯಗಳಲ್ಲಿ ಪ್ರಶಸ್ತಿ ದೊರಕಿವೆ. ದೂರದ ಶ್ರೀಲಂಕಾ, ದುಬೈ ಸೇರಿದಂತೆ ಹೊರ ದೇಶಗಳಲ್ಲೂ ಪ್ರಶಸ್ತಿ ದೊರಕಿದ್ದರೂ ಆರ್ಥಿಕ ಪರಿಸ್ಥಿತಿಯಿಂದ ಅದನ್ನು ಸ್ವೀಕರಿಸಲು ಸಾಧ್ಯವಾಗಿಲ್ಲ. ಇದಕ್ಕೆಲ್ಲಾ ಅಂಬೇಡ್ಕರ್ ನನಗೆ ಸ್ಫೂರ್ತಿಯಾಗಿದ್ದಾರೆ. ಎಂದರು. ಈ ವೇಳೆ ಶಾಲೆ ಕಾರ್ಯದರ್ಶಿ ಜಹರ ಸುಲ್ತಾನ, ಪುರಸಭಾ ಸದಸ್ಯ ಸಬಿಲ್ ಖಾನ್, ಮುಖ್ಯ ಶಿಕ್ಷಕಿ ಹೇಮಾ, ಮುಖಂಡರಾದ ಸೈಯದ್, ಫಾರೂಕ್, ಶಿಕ್ಷಕಿಯರಾದ ಗೀತಾ, ನೂರ್ ಹಾಜಿರಾ, ರೇಖಾ, ಶಿಲ್ಪಶ್ರೀ, ರೇಖಾ, ರಶ್ಮಿ, ಶಿಲ್ಪಾ, ಅನಿತಾ, ಶೈಲಾ ಹಾಜರಿದ್ದರು.

ಶಾಸಕ ಅನಿಲ್‌ಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯ


ಸಂದೇಶ್ ನಾಗರಾಜ್


ಅನಿಲ್

ಹೆಚ್.ಡಿ.ಕೋಟೆ, ಆ.14– ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡುವಂತೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಹೈಕಮಾಂಡ್‌ಗೆ ಮಾಜಿ ಎಂಎಲ್ಸಿ ಸಂದೇಶ್ ನಾಗರಾಜ್ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಸಕ ಅನಿಲ್ ಅವರು ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ 2 ಬಾರಿ ಗೆಲುವು ಸಾಧಿಸಿದ್ದು, 7 ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಅಲ್ಲದೇ ಕ್ಷೇತ್ರದ ಬಗ್ಗೆ ಸದನದಲ್ಲಿ ಅತೀ ಹೆಚ್ಚು ವಿಷಯಗಳನ್ನು ಪ್ರಸ್ತಾಪಿಸಿ ಹೊಸ ಯೋಜನೆ, ಅನುದಾನ ತಂದಿದ್ದಾರೆ. ನಾಯಕ ಸಮಾಜದ ಇಬ್ಬರು ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದರಿಂದ ನಾಯಕ ಸಮುದಾಯದವರಿಗೆ ಸಚಿವ ಸ್ಥಾನ ನೀಡಬೇಕೆಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿರುವುದರಿಂದ ಮೈಸೂರು–ಚಾಮರಾಜನಗರ ಭಾಗದ ನಾಯಕ ಸಮುದಾಯದ ಪ್ರಭಾವಿ ನಾಯಕ ದಿ.ಚಿಕ್ಕಮಾದು ಅವರ ಪುತ್ರ ಶಾಸಕ ಅನಿಲ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಸಚಿವ ಸ್ಥಾನ ನೀಡಿ ಕ್ಷೇತ್ರದ ಅಭಿವೃದ್ಧಿ, ನಾಯಕ ಸಮುದಾಯಕ್ಕೆ ಆದ್ಯತೆ ನೀಡಬೇಕು ಎಂದರು.

ತಿ.ನರಸೀಪುರದಲ್ಲಿ ಹರ್ ಘರ್ ತಿರಂಗ ಯಾತ್ರೆ


ತಿ.ನರಸೀಪುರದಲ್ಲಿ ಹರ್ ಘರ್ ತಿರಂಗ ಯಾತ್ರೆ ನಡೆಸಲಾಯಿತು.

ತಿ.ನರಸೀಪುರ, ಆ.14– ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪಟ್ಟಣದಲ್ಲಿ ಬಿಜೆಪಿ ಮಂಡಲದಿಂದ ಹರ್ ಘರ್ ತಿರಂಗ ಯಾತ್ರೆ ನಡೆಸಲಾಯಿತು.

ಪಟ್ಟಣದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಿಂದ ಪ್ರಾರಂಭಗೊಂಡ ಯಾತ್ರೆ ಬಸ್ ಸ್ಟ್ಯಾಂಡ್ ಮಾರ್ಗವಾಗಿ ವಿದ್ಯೋದಯ ಕಾಲೇಜು ವೃತ್ತ ತಲುಪಿ ಕೊನೆಗೊಂಡಿತು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ನುಗ್ಗಹಳ್ಳಿಕೊಪ್ಪಲು ಎನ್.ಎಂ.ರಾಮಚಂದ್ರ ಮಾತನಾಡಿ, ಮೋದಿ ಅವರು ಪ್ರಧಾನಿ ಆದ ಮೇಲೆ ಸಾರ್ವಜನಿಕರಲ್ಲಿ ದೇಶಭಕ್ತಿ ಜಾಗೃತಗೊಳಿಸುವ ಉದ್ದೇಶದಿಂದ ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ ಹಾರಿಸುವ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಅದರಂತೆ ಪ್ರತಿ ಮನೆಯಲ್ಲೂ ಸಾರ್ವಜನಿಕರು ಧ್ವಜ ಹಾರಿಸುವ ಮೂಲಕ ದೇಶಪ್ರೇಮ ಬೆಳೆಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಮಂಡಲ ಅಧ್ಯಕ್ಷ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನಸ್ವಾಮಿ, ಪುರಸಭಾ ಸದಸ್ಯ ಎಸ್.ಕಿಕಿರಣ್, ಲೋಕೇಶ್, ನಂಜುಂಡಸ್ವಾಮಿ, ಕಾಳೇಗೌಡ, ಮಾದೇವಶೆಟ್ಟಿ, ರಾಜಶೇಖರ, ಸುಂದರ್‌ರಾಜು, ಶಿವರುದ್ರ, ಗಂಗಾಧರ್ ಇತರರಿದ್ದರು.

ಮೂರನೇ ಪುಟದಿಂದ

ಮತ್ತೆ ಜೈಲು 'ದರ್ಶನ'

ಆದೇಶಿಸಿದೆ. ದರ್ಶನ್ ಮತ್ತು ಇತರರಿಗೆ ಹೈಕೋರ್ಟ್ ನೀಡಿದ್ದ ಜಾಮೀನು ಆದೇಶ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜೆ.ಬಿ.ಪಾರ್ದಿವಾಲಾ ಮತ್ತು ನ್ಯಾಯಮೂರ್ತಿ ಆರ್.ಮಹದೇವನ್ ಅವರನ್ನು ಒಳಗೊಂಡ ನ್ಯಾಯಪೀಠ, ಹೈಕೋರ್ಟ್‌ನ ಆದೇಶ ರದ್ದುಪಡಿಸಿ, ಆರೋಪಿಗಳಿಗೆ ನೀಡಲಾದ ಜಾಮೀನು ರದ್ದುಗೊಳಿಸಿರುವುದಾಗಿ ತಿಳಿಸಿತು. ಆರೋಪಿಗಳಿಗೆ ನೀಡಲಾದ ಹೈಕೋರ್ಟ್‌ನ ಜಾಮೀನು ಆದೇಶ ದೋಷಗಳಿಂದ ಕೂಡಿದೆ. ನ್ಯಾಯಾಲಯ ಆದೇಶ ಅಧಿಕಾರದ ಯಾಂತ್ರಿಕ ಪ್ರಯೋಗ ಬಿಂಬಿಸುತ್ತದೆ. ಜಾಮೀನು ಮಂಜೂರು ಪ್ರಕರಣದ ವಿಚಾರಣೆ ಮತ್ತು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ನ್ಯಾಯಮೂರ್ತಿ ಪಾರ್ದಿವಾಲಾ ತಮ್ಮ ಆದೇಶದಲ್ಲಿ, ಆರೋಪಿ ಎಷ್ಟೇ ದೊಡ್ಡವನಾದರೂ, ಕಾನೂನಿಗಿಂತ ಮೇಲಲ್ಲ. ನ್ಯಾಯ ವಿತರಣಾ ವ್ಯವಸ್ಥೆ ಕಾನೂನಾತ್ಮಕ ಆಡಳಿತ ಎತ್ತಿಹಿಡಿಯುವಂತಹ ಬಲ ವಾದ ಸಂದೇಶ ಒಳಗೊಂಡಿದೆ. ಯಾವುದೇ ವ್ಯಕ್ತಿ ಕಾನೂನಿಗಿಂತ ದೊಡ್ಡವನಲ್ಲ ಅಥವಾ ಸಣ್ಣವನಲ್ಲ, ಎಲ್ಲಾ ಸಮಯದಲ್ಲೂ ಕಾನೂನಾತ್ಮಕ ಆಡಳಿತ ಕಾಪಾಡಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದಿದ್ದಾರೆ.

ಆರೋಪಿಗಳಿಗೆ ಜೈಲಿನಲ್ಲಿ ಪಂಚತಾರಾ ಉಪಚಾರ ನೀಡಲಾಗುತ್ತಿದೆ ಎಂದಾದರೆ, ಅಂತಹ ಸಂದರ್ಭದಲ್ಲಿ ಮೊದಲ ಕ್ರಮವಾಗಿ ಕಾರಾಗೃಹ ಸೂಪರಿಂಟೆಂಡೆಂಟ್ ಆದಿಯಾಗಿ ಎಲ್ಲ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು. ಆರೋಪಿಗಳಿಗೆ ವಿಶೇಷ ಸೌಲಭ್ಯಗಳನ್ನು ನೀಡುವುದೂ ತಪ್ಪು ಎಂದು ನ್ಯಾಯಾಲಯ ಎಚ್ಚರಿಸಿದೆ.

ಸುಪ್ರೀಂಕೋರ್ಟ್ ಜಾಮೀನು ರದ್ದುಪಡಿಸಿದ ಹಿನ್ನೆಲೆಯಲ್ಲಿ ಎಲ್ಲಾ ಆರೋಪಿಗಳು ನ್ಯಾಯಾಲಯದ ಮುಂದೆ ಹಾಜರಾಗಿ ಮುಂದಿನ ಆದೇಶದವರೆಗೆ ಕಾರಾಗೃಹ ವಾಸದಲ್ಲಿ ಇರಬೇಕಾಗುತ್ತದೆ. ನಟಿ ಪವಿತ್ರಾ ಗೌಡ ಅವರಿಗೆ ಅಶ್ಲೀಲ ಸಂದೇಶ ಕಳುಹಿಸಿದ ಹಿನ್ನೆಲೆಯಲ್ಲಿ ನಟ ದರ್ಶನ್ ಸೂಚನೆ ಮೇರೆಗೆ ಆತನ ಸಹಚರರು ಚಿತ್ರದುರ್ಗ ಮೂಲದ 33 ವರ್ಷದ ರೇಣುಕಾಸ್ವಾಮಿಯನ್ನು ಅಪಹರಿಸಿ ತಂದು, ಬೆಂಗಳೂರಿನ ಶೆಡ್ ಒಂದರಲ್ಲಿ ಕೂಡಿ ಹಾಕಿ ಹಲ್ಲೆ ನಡೆಸಿ ಹತ್ಯೆ ಮಾಡಿದ್ದು, ಖುದ್ದು ದರ್ಶನ್ ಸಹ ಹಲ್ಲೆ ನಡೆಸಿದ್ದರು ಎಂದು ಅರೋಪಿಸಲಾಗಿತ್ತು.

ಪವಿತ್ರಾ ಗೌಡ, ದರ್ಶನ್ ಮತ್ತು ಇತರ ಐವರ ವಿರುದ್ಧ ರೇಣುಕಾ ಸ್ವಾಮಿ ಕೊಲೆ ಆರೋಪ ಹೊರಿಸಲಾಗಿತ್ತಲ್ಲದೆ, ಮೃತ ವ್ಯಕ್ತಿಯ ರಕ್ತಸಿಕ್ತ ಶರೀರ 2024ರ ಜೂನ್ 9ರಂದು ಬೆಂಗಳೂರು ಬಡಾವಣೆಯೊಂದರ ದೊಡ್ಡ ಚರಂಡಿ ಪಕ್ಕ ಪತ್ತೆಯಾಗಿತ್ತು. 2024ರ ಜೂನ್ 11ರಂದು ದರ್ಶನ್ ಬಂಧನವಾಗಿತ್ತು. ವೈದ್ಯಕೀಯ ಆಧಾರದ ಮೇಲೆ ಕಳೆದ ವರ್ಷ ಅಕ್ಟೋಬರ್ 30ರಂದು ಹೈಕೋರ್ಟ್ 6 ವಾರಗಳ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ನಂತರ, 2024ರ ಡಿಸೆಂಬರ್ 13ರಂದು ದರ್ಶನ್, ಪವಿತ್ರಾ ಗೌಡ ಮತ್ತು ಇತರ ಐವರು ಆರೋಪಿಗಳಿಗೆ ನಿಯಮಿತ ಜಾಮೀನು ದೊರೆತಿತ್ತು.

ಜಾಮೀನು ಮಂಜೂರು ಮಾಡಿದ ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರ ನ್ಯಾಯಪೀಠ, ದರ್ಶನ್ ಮತ್ತು ಇತರ ಆರೋಪಿಗಳ ಬಂಧನಕ್ಕೆ ಆಧಾರ ಒದಗಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂಬ ಕಾರಣ ನೀಡಿತ್ತು. ಆರೋಪಿಗಳಿಗೆ ಬಂಧನದ ಕಾರಣಗಳನ್ನು ಪ್ರಾಸಿಕ್ಯೂಷನ್ ತಡವಾಗಿ ಒದಗಿಸಿದೆ. ಪ್ರತಿಯೊಬ್ಬ ಆರೋಪಿಗೆ ನಿರ್ದಿಷ್ಟ ವಿವರ ನೀಡುವ ಬದಲು ಎಲ್ಲರಿಗೂ ಒಂದೇ ರೀತಿಯ ಬಂಧನದ ಕಾರಣಗಳನ್ನು ನೀಡಲಾಗಿದೆ ಎಂದು ಹೈಕೋರ್ಟ್ ತಿಳಿಸಿತ್ತು.

ಹೈಕೋರ್ಟ್‌ನ ಜಾಮೀನು ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಜನವರಿ 6ರಂದು ಅರ್ಜಿ ಸಲ್ಲಿಸಿತ್ತು. ರಾಜ್ಯ ಸರ್ಕಾರದ ಪರ ಹಿರಿಯ ನ್ಯಾಯವಾದಿ ಸಿದ್ಧಾರ್ಥ್ ಲೂತ್ರ ಲಿಖಿತ ವಾದ ಸಲ್ಲಿಸಿ, ಮೃತ ರೇಣುಕಾಸ್ವಾಮಿಗೆ ಆಗಿರುವ ಗಾಯಗಳು ಕೊಲೆ ಉದ್ದೇಶವನ್ನು ಸ್ಪಷ್ಟವಾಗಿ ಹೇಳುತ್ತವೆ. ಪ್ರತ್ಯಕ್ಷದರ್ಶಿಗಳ ಹೇಳಿಕೆಗಳೂ ಸ್ಥಿರವಾಗಿದ್ದು, ವಿಧಿ–ವಿಜ್ಞಾನ ಮತ್ತು ಎಲೆಕ್ಟ್ರಾನಿಕ್ ಸಾಕ್ಷ್ಯಗಳಿಂದ ದೃಢೀಕರಿಸಲ್ಪಟ್ಟಿವೆ. ಹೇಳಿಕೆಗಳಲ್ಲಿನ ವಿಳಂಬವನ್ನು ಪುರಾವೆಗಳೊಂದಿಗೆ ಸಮರ್ಥಿಸಲಾಗಿದೆ. ವಿಧಿವಿಜ್ಞಾನ, ಸಿಡಿಆರ್ ಮತ್ತು ಎಲೆಕ್ಟ್ರಾನಿಕ್ ದಾಖಲೆಗಳು ಆರೋಪಿಗಳು ಕೊಲೆಯೊಂದಿಗೆ ನಂಟು ಹೊಂದಿರುವುದನ್ನು ತಿಳಿಸುತ್ತವೆ. ಆರೋಪಿಗಳಿಗೆ ಜಾಮೀನು ಮಂಜೂರು ಮಾಡುವ ಹಂತದಲ್ಲಿ ಹೈಕೋರ್ಟ್ ತಪ್ಪಾಗಿ "ಮಿನಿ–ವಿಚಾರಣೆ" ನಡೆಸಿದೆ ಎಂಬ ವಾದ ಮಂಡಿಸಿದ್ದರು.

ಕುದುರೆ ಖರೀದಿಗೆ ತಮಿಳ್ನಾಡಿಗೆ ತೆರಳಿದ್ದ ದರ್ಶನ್ ಮರಳಿ ಬರುತ್ತಿದ್ದಂತೆ ವಶಕ್ಕೆ

ಬೆಂಗಳೂರು,ಆ.14(ಕೆಎಂಶಿ)–ಸುಪ್ರೀಂಕೋರ್ಟ್‌ನಲ್ಲಿ ಜಾಮೀನು ರದ್ದಾಗುತ್ತಿದ್ದಂತೆ ನಟ ದರ್ಶನ್, ನಟಿ ಪವಿತ್ರಾ ಗೌಡ ಸೇರಿದಂತೆ ಎಲ್ಲಾ ಏಳು ಆರೋಪಿಗಳನ್ನು ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ನ್ಯಾಯಾಲಯದ ಆದೇಶ ಹೊರ ಬರುತ್ತಿದ್ದಂತೆ ಬೆಂಗಳೂರು ಪೊಲೀಸರು ಜಾಮೀನಿನ ಮೇಲಿದ್ದ ರೇಣುಕಾಸ್ವಾಮಿ ಕೊಲೆ ಆರೋಪಿಗಳ ತಾಣ ಪತ್ತೆ ಹಚ್ಚಿ ವಶಕ್ಕೆ ಪಡೆದು ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ತಮಿಳುನಾಡಿನ ಸತ್ಯಮಂಗಲದ ಅಂದೂರು ಬಳಿ ಜಾತ್ರೆಯಲ್ಲಿ ದರ್ಶನ್, ತಮ್ಮ ಸ್ಟಡ್‌ಫಾರಂಗೆ ಕುದುರೆ ಖರೀದಿಯಲ್ಲಿದ್ದಾಗ, ಜಾಮೀನು ರದ್ದಾದ ಮಾಹಿತಿ ದೊರೆತಿದೆ. ಕುದುರೆ ಖರೀದಿ ಕೈಬಿಟ್ಟು ನೇರವಾಗಿ ಪತ್ನಿ ವಿಜಯಲಕ್ಷ್ಮಿ ಇದ್ದ ಹೊಸಕೆರೆ ಅಪಾರ್ಟ್‌ಮೆಂಟ್‌ಗೆ ಧಾವಿಸಿದ್ದರು. ಈ ಮಾಹಿತಿ ಅರಿತ ಕಾಮಾಕ್ಷಿಪಾಳ್ಯ ಹಾಗೂ ಗೋವಿಂದರಾಜನಗರ ಪೊಲೀಸ್ ಠಾಣಾಧಿಕಾರಿಗಳು ಫ್ಲ್ಯಾಟ್‌ಗೆ ತೆರಳಿ ದರ್ಶನ್ ಅವರನ್ನು ವಶಕ್ಕೆ ಪಡೆದರು. ಇದಕ್ಕೂ ಮುನ್ನ ಪವಿತ್ರಾ ಗೌಡ ಅವರನ್ನು ಅವರ ನಿವಾಸದಿಂದ ಬಂಧಿಸಲಾಗಿತ್ತು, ಉಳಿದ ಐವರು ಆರೋಪಿಗಳನ್ನು ವಿವಿಧ ಪೋಲಿಸ್ ಠಾಣೆ ಅಧಿಕಾರಿಗಳು ಪತ್ತೆ ಹಚ್ಚಿ, ಬಂಧಿಸಿದರು.

3ನೇ ಬಾರಿಗೆ ಪರಪ್ಪನ ಅಗ್ರಹಾರ ಜೈಲು ಪಾಲು

ಜಡ್ಜ್ ಕೇಳಿ, ಪರಿಶೀಲಿಸಿದರು. ಈ ಪ್ರಕ್ರಿಯೆ ಮುಗಿದ ಬಳಿಕ ಎಲ್ಲಾ ಆರೋಪಿಗಳನ್ನು ಪರಪ್ಪನ ಅಗ್ರಹಾರ ಜೈಲಿಗೆ ಕಳಿಸಿದರು. ಆರೋಪಿಗಳಾದ ಜಗದೀಶ್ ಮತ್ತು ಅನುಕುಮಾರ್‌ನನ್ನು ಚಿತ್ರದುರ್ಗದಲ್ಲಿ ಬಂಧಿಸಲಾಗಿದ್ದು, ಅವರನ್ನು ಬೆಂಗಳೂರಿಗೆ ಕರೆತಂದ ಬಳಿಕ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

2011ರಲ್ಲಿ ದರ್ಶನ್ ಜೈಲುಪಾಲು: ಈ ಹಿಂದೆ ಸಹ ದರ್ಶನ್ 2 ಬಾರಿ ಪರಪ್ಪನ ಅಗ್ರಹಾರ ಜೈಲು ಸೇರಿದ್ದರು. ಮೊದಲನೆ ಬಾರಿ 2011ರಲ್ಲಿ ತಮ್ಮ ಪತ್ನಿ ವಿಜಯಲಕ್ಷ್ಮಿಯವರ ಮೇಲೆ ಹಲ್ಲೆ ಮಾಡಿ ದರ್ಶನ್ ಸ್ವಲ್ಪ ದಿನಗಳ ಕಾಲ ಜೈಲು ಪಾಲಾಗಿದ್ದರು. ಇನ್ನೂ 2ನೇ ಬಾರಿ ರೇಣುಕಾಸ್ವಾಮಿ ಹತ್ಯೆ ಕೇಸ್‌ನಲ್ಲಿ ಮೊದಲು ಬಂಧನವಾದ ಬಳಿಕ ಪರಪ್ಪನ ಅಗ್ರಹಾರದಲ್ಲಿರಿಸಲಾಗಿತ್ತು. ಈ ಜೈಲಿನಲ್ಲಿ ರಾಜಾತಿಥ್ಯದ ಆರೋಪ ಕೇಳಿ ಬಂದ ಬೆನ್ನಲ್ಲೇ ಬಳ್ಳಾರಿ ಜೈಲಿಗೆ ರವಾನಿಸಲಾಗಿತ್ತು. ಬಳಿಕ ಹೈಕೋರ್ಟ್‌ನಿಂದ ಜಾಮೀನು ಪಡೆದು ಹೊರಗೆ ಬಂದಿದ್ದರು. ಇದೀಗ ಜಾಮೀನು ರದ್ದಾದ ಬೆನ್ನಲ್ಲೇ 3ನೇ ಬಾರಿಗೆ ದರ್ಶನ್ ಪರಪ್ಪನ ಅಗ್ರಹಾರ ಸೇರಿದ್ದಾರೆ.

ದರ್ಶನ್ ಜಾಮೀನು ರದ್ದು ಲ್ಯಾಂಡ್‌ಮಾರ್ಕ್ ತೀರ್ಪು ಸುಪ್ರೀಂಕೋರ್ಟ್ ಘೋಷಣೆ



ನವದೆಹಲಿ, ಆ.14– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಆರೋಪಿ ನಟ ದರ್ಶನ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದೆ. ಕರ್ನಾಟಕ ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನನ್ನು ಸುಪ್ರೀಂಕೋರ್ಟ್ ರದ್ದುಪಡಿಸಿದೆ.

ನ್ಯಾ. ಜೆ.ಬಿ. ಪರ್ದಿವಾಲಾ ಮತ್ತು ನ್ಯಾ. ಆರ್. ಮಹಾದೇವನ್ ಅವರಿದ್ದ ದ್ವಿಸದಸ್ಯ ಪೀಠ ಈ ಆದೇಶ ನೀಡಿದ್ದು, ಯಾರೂ ಕಾನೂನಿಗಿಂತ ಮೇಲಲ್ಲ ಎಂಬ ಬಲವಾದ ಸಂದೇಶವನ್ನು ನೀಡುತ್ತದೆ ಎಂಬ ಅರ್ಥದಲ್ಲಿ ಈ ತೀರ್ಪು 'ಲ್ಯಾಂಡ್‌ಮಾರ್ಕ್' ಎಂದು ನ್ಯಾಯಮೂರ್ತಿ ಪರ್ದಿವಾಲಾ ವ್ಯಾಖ್ಯಾನಿಸಿದ್ದಾರೆ. ಈ ತೀರ್ಪು ಯಾಕೆ ದೇಶದ ಕಾನೂನು ಪಾಲನೆಯಲ್ಲಿ ಮಹತ್ವದ್ದು ಎಂಬುದಕ್ಕೆ ಅವರು ಕಾರಣವನ್ನು ನೀಡಿದ್ದಾರೆ. ನನ್ನ ಉನ್ನತ ಅಭಿಪ್ರಾಯ, ನನ್ನ ಗೌರವಾನ್ವಿತ ನ್ಯಾಯ ಮೂರ್ತಿ ಆರ್.ಮಹಾದೇವನ್, ಬಹಳ ಪಾಂಡಿತ್ಯಪೂರ್ಣ ತೀರ್ಪನ್ನು ನೀಡಿದ್ದಾರೆ. ನನ್ನ ಸಹೋದರ ಬರೆದ ತೀರ್ಪು ಅನಿರ್ವಚನೀಯವಾಗಿದೆ ಎಂದು ನಾನು ಒಂದೇ ವಾಕ್ಯದಲ್ಲಿ ಹೇಳಬಲ್ಲೆ ಆರೋಪಿಯು ಯಾರೇ ಆಗಿರಲಿ, ಆರೋಪಿಯು ಎಷ್ಟೇ ದೊಡ್ಡವನಾಗಿದ್ದರೂ ಅಥವಾ ಚಿಕ್ಕವನಾಗಿದ್ದರೂ, ಅವನು/ಅವಳು ಕಾನೂನಿಗಿಂತ ಮೇಲಲ್ಲ ಎಂಬ ಬಲವಾದ ಸಂದೇಶವನ್ನು ಈ ತೀರ್ಪು ನೀಡುತ್ತದೆ. ಯಾವುದೇ ಮಟ್ಟದಲ್ಲಿ ನ್ಯಾಯ ವಿತರಣಾ ವ್ಯವಸ್ಥೆಯು, ಯಾವುದೇ ಬೆಲೆ ತೆತ್ತಾದರೂ, ಕಾನೂನಿನ ನಿಯಮವನ್ನು ಕಾಪಾಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು ಎಂಬ ಬಲವಾದ ಸಂದೇಶವನ್ನು ಈ ತೀರ್ಪು ಒಳಗೊಂಡಿದೆ. ಯಾರೂ ಕಾನೂನಿಗಿಂತ ಮೇಲಿಲ್ಲ, ಯಾರೂ ಕಾನೂನಿಗಿಂತ ಕೆಳಗಿಲ್ಲ. ಅದನ್ನು ಪಾಲಿಸುವಂತೆ ಕೇಳಿದಾಗ ನಾವು ಅನುಮತಿಯನ್ನೂ ಕೇಳುವುದಿಲ್ಲ. ಕಾನೂನಿಗೆ ವಿಧೇಯತೆಯನ್ನು ಹಕ್ಕಾಗಿ ಕೋರಲಾಗುತ್ತದೆಯೇ ಹೊರತು ಉಪಕಾರವಾಗಿ ಕೇಳಲಾಗುವುದಿಲ್ಲ. ಎಲ್ಲಾ ಸಮಯದಲ್ಲೂ ಕಾನೂನನ್ನು ಕಾಪಾಡಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ನ್ಯಾಯಮೂರ್ತಿ ಪರ್ದಿವಾಲಾ ಅಭಿಪ್ರಾಯಪಟ್ಟಿದ್ದಾರೆ.

ಜೈಲಿನಲ್ಲಿ ವಿಐಪಿ ಟ್ರೀಟ್‌ಮೆಂಟ್‌ಗೆ ತೀವ್ರ ಟೀಕೆ: ಜೈಲಿನಲ್ಲಿ ಆರೋಪಿಗಳಿಗೆ 5 ಸ್ಟಾರ್ ಅತಿಥ್ಯ ನೀಡಿರುವ ಬಗ್ಗೆ ನ್ಯಾಯಪೀಠ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಜೈಲು ಸೂಪರಿಂಟೆಂಡೆಂಟ್‌ರನ್ನು ಸಸ್ಪೆಂಡ್ ಮಾಡಬೇಕಿತ್ತು ಎಂದು ಅಭಿಪ್ರಾಯಪಟ್ಟಿದೆ. ಯಾರಿಗಾದರೂ ವಿಐಪಿ ಅತಿಥ್ಯ ನೀಡುತ್ತಿರುವ ಫೋಟೋ ಅಥವಾ ವೀಡಿಯೋ ಕಂಡುಬಂದರೆ, ಮೊದಲು ನಿಮ್ಮನ್ನು ಸಮನ್ಸ್ ಮಾಡಲಾಗುತ್ತದೆ ಎಂದು ನ್ಯಾ. ಪರ್ದಿವಾಲಾ ಎಚ್ಚರಿಸಿದ್ದಾರೆ. ಈ ತೀರ್ಪಿನ ಪ್ರತಿಯನ್ನು ಎಲ್ಲಾ ಹೈಕೋರ್ಟ್‌ಗಳು ಹಾಗೂ ರಾಜ್ಯ ಸರ್ಕಾರಗಳಿಗೆ ನೀಡುವಂತೆ ರಿಜಿಸ್ಟ್ರಾರ್‌ಗೆ ನಿರ್ದೇಶಿಸಿದೆ.

ಜಾಮೀನು ರದ್ದತಿಗೆ ಪರಿಗಣಿತ ಅಂಶಗಳು...

●ಸಿಸಿಟಿವಿ, ಕಾಲ್ ರೆಕಾರ್ಡ್, ಕೃತ್ಯಕ್ಕೆ ಬಳಸಿದ ವಸ್ತುಗಳು ಸೇರಿ ಪ್ರಮುಖ ಸಾಕ್ಷ್ಯಾಧಾರಗಳ ನಾಶಕ್ಕೆ ಪ್ರಯತ್ನಪಟ್ಟಿದ್ದಾರೆ. ●ಪವಿತ್ರಾಗೌಡ, ದರ್ಶನ ನಿರಂತರ ಸಂಪರ್ಕದಲ್ಲಿದ್ದರು. ಕೊಲೆ ನಡೆದಾಗ ಘಟನಾ ಸ್ಥಳದಲ್ಲಿ ಹಾಜರಿದ್ದರು ●ದರ್ಶನ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದು ವಾದಿಸಿದ್ದರು, ಆದರೆ ಕೊಲೆಗೂ ಮುನ್ನ ಇತರೆ ಆರೋಪಿಗಳ ಜೊತೆಗೆ ಸಂಪರ್ಕದಲ್ಲಿರುವುದು ಸಾಬೀ ತಾಗಿದೆ. ಹೀಗಾಗಿ ಕೊಲೆಗೆ ಇವರ ಪ್ರೇರಣೆ ಇದ್ದಂತಿದೆ ●ಸೆಲಬ್ರಿಟಿ ಆದ ಮಾತ್ರಕ್ಕೆ ಕಾನೂನಿಗಿಂತ ದೊಡ್ಡವರಲ್ಲ ●ಸಮಾಜದಲ್ಲಿರುವ ಉನ್ನತ ವ್ಯಕ್ತಿ ಅಥಾವ ಖ್ಯಾತ ವ್ಯಕ್ತಿ ಮತ್ತು ಪ್ರಭಾವಶಾಲಿ ವ್ಯಕ್ತಿಯಾದರೂ ಅವರು ಕಾನೂನು ವ್ಯಾಪ್ತಿಯಿಂದ ಹೊರಗಿಲ್ಲ ●ಬಂಧನದಲ್ಲಿ ಇದ್ದಾಗಲೂ ಜೈಲಿನ ವ್ಯವಸ್ಥೆ ಮೀರಿ ರಾಜ್ಯಾತಿಥ್ಯ ಪಡೆದ ವ್ಯಕ್ತಿ ಸಾಕ್ಷ್ಯಗಳನ್ನು ನಾಶ ಮಾಡುವ, ಇಲ್ಲವೇ ಅವರ ಮೇಲೆ ಬೆದರಿಕೆ ಹಾಕುವ ಸಾಧ್ಯತೆಗಳಿವೆ. ●ನಟ ದರ್ಶನ ಸಾಮಾನ್ಯ ವ್ಯಕ್ತಿಯಲ್ಲ, ಅಪಾರ ಜನಪ್ರಿಯತೆ ಮತ್ತು ಬೆಂಬಲಿಗರನ್ನು ಹೊಂದಿರುವ ಅವರು ಆರ್ಥಿಕ, ರಾಜಕೀಯವಾಗಿ ಸದೃಢವಾಗಿದ್ದಾರೆ ●ದರ್ಶನ್ ಜೈಲಿನಲ್ಲಿ ನಿಯಮಗಳನ್ನು ಗಾಳಿಗೆ ತೂರಿದ್ದು ಗಮನಕ್ಕೆ ಬಂದರೂ ಹೈಕೋರ್ಟ್ ಜಾಮೀನು ನೀಡಿದೆ. ಈ ವಿಚಾರದಲ್ಲಿ ಹೈಕೋರ್ಟ್ ತನ್ನ ವಿವೇಚನೆ ಬಳಸಿಲ್ಲ ಎನ್ನುವುದಕ್ಕೆ ಪೂರಕವಾಗಿದೆ ●ನ್ಯಾಯಾಂಗ ವ್ಯವಸ್ಥೆಯುಳ್ಳ ಪ್ರಜಾಪ್ರಭುತ್ವದಲ್ಲಿ ಹಣವಂತ, ಶಕ್ತಿವಂತ ಅಥಾವ ಖ್ಯಾತ ವ್ಯಕ್ತಿಯೂ ಸಾಮಾನ್ಯ ವ್ಯಕ್ತಿಯೇ ಆಗಿರುತ್ತಾನೆ ●ನಟ ದರ್ಶನ ಜಾಮೀನು ಪಡೆಯಲು ಅನಾರೋಗ್ಯ ಕಾರಣಗಳನ್ನು ನೀಡಿದ್ದರು. ಇದೇ ಆಧಾರದ ಮೇಲೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದಂತಿದೆ. ●28/11/24ರಲ್ಲಿ ವೈದ್ಯರು ನೀಡಿದ ವರದಿ ಪ್ರಕಾರ ದರ್ಶನ್‌ಗೆ ಸಕ್ಕರೆ ಖಾಯಿಲೆ, ಹೃದಯ ಸಂಬಂಧಿ ಸಣ್ಣ ಸಮಸ್ಯೆ ಮಂಬರುವ ದಿನಗಳಲ್ಲಿ ಬೆನ್ನು ನೋವಿಗೆ ಶಸ್ತ್ರ ಚಿಕಿತ್ಸೆ ಅಗತ್ಯ ಇದೆ. ಆದರೆ ಅದು ತುರ್ತಾಗಿ ಅಲ್ಲ ಎಂದು ಉಲ್ಲೇಖಿಸಿದೆ ●ಜಾಮೀನು ಪಡೆದ ಬಳಿಕ ಸೂಕ್ತ ವೈದ್ಯಕೀಯ ಸೌಲಭ್ಯ ಪಡೆದಿಲ್ಲ ●ದರ್ಶನ ಪರ ವಕೀಲರು ಜಾಮೀನು ದುರುಪಯೋಗ ಪಡಿಸಿಕೊಂಡಿಲ್ಲ ಎಂದು ಹೇಳಿದ್ದರು. ಪ್ರಕರಣ ತನಿಖೆಯ ಹಾದಿ ತಪ್ಪಿಸುವ ಪ್ರಯತ್ನ ಮಾಡಿದ್ದಾರೆ ●ಪ್ರಕರಣ ಬೆಳಕಿಗೆ ಬಾರದಂತೆ ದರ್ಶನ್ ಎ10 –ಎ14 ಗೆ ಶರಣಾಗುವಂತೆ ಹೇಳಿದ್ದ, ಇದನ್ನು ಮಾಡಲು ಹಣ ಪಾವತಿಸಿದ್ದರು ● ಪವಿತ್ರಾಗೌಡ ಮನೆಯ ಸಿಸಿಟಿವಿ ದೃಶ್ಯಗಳನ್ನು ಡಿಲಿಟ್ ಮಾಡಲಾಗಿದೆ ●ನಟ ದರ್ಶನ್ ಜಾಮೀನು ಪಡೆದ ಬಳಿಕ ಸಾಕ್ಷ್ಯಗಳ ಜೊತೆಗೆ ಬಹಿರಂಗವಾಗಿ ವೇದಿಕೆ ಹಂಚಿಕೊಂಡಿದ್ದಾರೆ ●ಪ್ರಕರಣದಲ್ಲಿ ದರ್ಶನ್ ನೇರವಾಗಿ ಭಾಗಿಯಾಗಿಲ್ಲ ಎಂದು ಹೇಳಿದರೂ ಸಿಸಿಟಿವಿ ದೃಶ್ಯಗಳ ನಾಶ, ಇನ್ನಿತರ ಆರೋಪಿಗಳನ್ನು ಶರಣಾಗುವಂತೆ ಹೇಳುವ ಮೂಲಕ ತನಿಖಾ ಹಾದಿ ತಪ್ಪಿಸಲು ತಮ್ಮ ಪ್ರಭಾವ ಬಳಸಿದ್ದಾರೆ ●ಈ ಕೊಲೆ ಹಠಾತ್ ಪ್ರಚೋದನೆ ಇಲ್ಲವೇ ಭಾವನೆಗಳು ಸ್ಫೋಟಗೊಂಡು ಮಾಡಿರುವ ಪ್ರಕರಣ ಅಲ್ಲ. ಪುರಾವೆಗಳನ್ನು ನೋಡಿದಾಗ ಇದು ಪೂರ್ವಯೋಜಿತ, ಸಂಘಟಿತ ಅಪರಾಧವನ್ನು ಸೂಚಿಸುತ್ತದೆ

ದರ್ಶನ್ ಬಂಧನದ ವೇಳೆ ಬೆಂಗಳೂರು ಪೊಲೀಸ್ ಆಯುಕ್ತರಾಗಿದ್ದ ದಯಾನಂದ್ ಈಗ ಬಂಧೀಖಾನೆ ಎಡಿಜಿಪಿ!



ಬೆಂಗಳೂರು, ಆ.14– ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್‌ನನ್ನು ಜೂನ್.11 ರಂದು ಬಂಧಿಸಿದ ವೇಳೆ ದಯಾನಂದ್, ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದರು. ಹೈಕೋರ್ಟ್‌ನಲ್ಲಿ ದರ್ಶನ್ ಮತ್ತಿತರರಿಗೆ ಜಾಮೀನು ದೊರೆತಾಗ ಬೆಂಗಳೂರು ನಗರ ಪೊಲೀಸರ ಪರವಾಗಿ ದರ್ಶನ್, ಪವಿತ್ರಾ ಗೌಡ ಸೇರಿದಂತೆ ಏಳು ಮಂದಿಯ ಜಾಮೀನು ರದ್ದುಪಡಿಸುವಂತೆ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ ವಿಚಾರದಲ್ಲಿ ದಯಾನಂದ್ ಅವರು ಪ್ರಮುಖ ಪಾತ್ರ ವಹಿಸಿದ್ದರು. ಇಂದು ಸುಪ್ರೀಂ ಕೋರ್ಟ್ ದರ್ಶನ್ ಸೇರಿದಂತೆ ಏಳು ಮಂದಿಯ ಜಾಮೀನು ರದ್ದುಪಡಿಸಿದ್ದು, ಚಿತ್ರದುರ್ಗದಿಂದ ಬರಬೇಕಾದ ಇಬ್ಬರನ್ನು ಹೊರತುಪಡಿಸಿ ದರ್ಶನ್ ಸೇರಿ ಐವರು ಈಗ ಪರಪ್ಪನ ಅಗ್ರಹಾರ ಜೈಲು ಪಾಲಾಗಿದ್ದಾರೆ. ಕಾಕತಾಳೀಯವೆಂಬಂತೆ ಅಂದು ದರ್ಶನ್ ಗ್ಯಾಂಗ್‌ನ್ನು ಬಂಧಿಸಿದ್ದ ದಯಾನಂದ್ ಈಗ ಕಾರಾಗೃಹಗಳ ಎಡಿಜಿಪಿ ಆಗಿರುವುದು ವಿಶೇಷ. ಇದರಿಂದಾಗಿ ಜೈಲಿನಲ್ಲಿ ದರ್ಶನ್‌ಗೆ ಯಾವುದೇ ವಿಶೇಷ ಸವಲತ್ತುಗಳು ದೊರೆಯದೇ ಸಾಮಾನ್ಯ ವಿಚಾರಣಾಧೀನ ಖೈದಿಯಾಗಿ ಇರಬೇಕಾದ ಪರಿಸ್ಥಿತಿ ಎದುರಾಗಿದೆ. ಕಾರಣ ದಯಾನಂದ್, ಕಾನೂನಿನ ಕಟ್ಟಾಳು. ಯಾವುದೇ ಕಾರಣಕ್ಕೂ ಕಾನೂನುಬಾಹಿರ ಕೃತ್ಯಕ್ಕೆ ಆಸ್ಪದ ನೀಡಲು ಸಿದ್ಧರಿಲ್ಲ.

ಆರೋಗ್ಯ ಇಲಾಖೆಯ 55 ಸಾವಿರ ಸಿಬ್ಬಂದಿ ವರ್ಗಾವರ್ಗಿ



ಬೆಂಗಳೂರು, ಆ.14(ಕೆಎಂಶಿ)–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮೊದಲ ಬಾರಿಗೆ ಪಾರದರ್ಶಕ ಕೌನ್ಸಿಲಿಂಗ್ ನಡೆಸಿ 55,000 ಸಿಬ್ಬಂದಿ ವರ್ಗಾವಣೆ ಮಾಡಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ವಿಧಾನಸಭೆಗೆ ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಕೆ.ಎಸ್.ಆನಂದ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಮೊದಲ ಬಾರಿಗೆ ಯಾವುದೇ ಶಿಫಾರಸ್ಸಿಲ್ಲದೇ ಮೆರಿಟ್ ಆಧಾರದ ಮೇಲೆ ವರ್ಗಾವಣೆ ಮಾಡಲಾಗಿದೆ. ಇದರಿಂದ ಕೆಲವು ಸಮಸ್ಯೆಗಳಾಗಿವೆ. ವರ್ಗಾವಣೆಯಾದ ಸ್ಥಾನಕ್ಕೆ ವೈದ್ಯರು ಬಂದಿಲ್ಲ, ಬಹಳಷ್ಟು ವರ್ಷಗಳಿಂದ ಬೆಂಗಳೂರಿನಲ್ಲಿ ಬೇರು ಬಿಟ್ಟಿದ್ದ ವೈದ್ಯರನ್ನು ವರ್ಗಾವಣೆ ಮಾಡಲಾಗಿದೆ ಎಂದರು.

ಹೆಬ್ಬಾಳು ಬೆಳ್ಳಿ ಆಭರಣ ಘಟಕದ ದರೋಡೆ ಪ್ರಕರಣದಲ್ಲಿ
ಮಾಲೀಕನ ಕಾರು ಚಾಲಕನೇ ಮಾಸ್ಟರ್ ಮೈಂಡ್!

● 50 ಲಕ್ಷ ಸಾಲ ತೀರಿಸಲು ಗುಜರಾತ್‌ನ ಕುಖ್ಯಾತ ದರೋಡೆಕೋರರ ಸಜ್ಜುಗೊಳಿಸಿದ್ದ ● ಯಾವುದೇ ಹತಾರಗಳ ತರಬೇಡಿ; ಎಲ್ಲವೂ ಫ್ಯಾಕ್ಟ್ರಿಯಲ್ಲೇ ಇದೆ ಎಂದು ಹೇಳಿದ್ದ ● ಬೆಳ್ಳಿ ಪದಾರ್ಥ ಸಾಗಿಸುವಾಗ ಜೀಪ್‌ನೊಂದಿಗೆ ಕಳವಿಗೂ ಸಲಹೆ ನೀಡಿದ್ದ; ಆದರೆ ಫ್ಯಾಕ್ಟ್ರಿಯಲ್ಲೇ ಕದಿಯುವ ಖತರ್ನಾಕ್ ಐಡಿಯಾ ಫೈನಲ್ ಆಗಿತ್ತು





ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಬೆಳ್ಳಿ ಪದಾರ್ಥಗಳ ತಯಾರಿಕಾ ಘಟಕದಲ್ಲಿ ನಡೆದ ದರೋಡೆಯ ಆರೋಪಿಗಳನ್ನು ಬಂಧಿಸಿ, ಅವರಿಂದ ವಶಪಡಿಸಿಕೊಂಡ ಕೋಟ್ಯಾಂತರ ರೂ. ಮೌಲ್ಯದ ಬೆಳ್ಳಿ ವಸ್ತುಗಳನ್ನು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ವೀಕ್ಷಿಸುತ್ತಿರುವುದು.

ಮೈಸೂರು, ಆ.14(ಎಂಟಿವೈ)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಬೆಳ್ಳಿ ಆಭರಣ ತಯಾರಿಕಾ ಫ್ಯಾಕ್ಟ್ರಿಯಲ್ಲಿ ದರೋಡೆ ಮಾಡಿ, 16 ಕೆಜಿ ಬೆಳ್ಳಿ ಪದಾರ್ಥ ದೋಚಿದ್ದ ಪ್ರಕರಣವನ್ನು ಭೇದಿಸಿರುವ ಹೆಬ್ಬಾಳ್ ಠಾಣೆಯ ಪೊಲೀಸರು, ಆರು ಮಂದಿ ಅಂತರರಾಜ್ಯ ಕುಖ್ಯಾತ ಡಕಾಯಿತರನ್ನು ಬಂಧಿಸಿದ್ದಾರೆ.

ಬಂಧಿತರನ್ನು ಗುಜರಾತ್ ರಾಜ್ಯದ ಬನಸ್ಕಾಂತ ಜಿಲ್ಲೆಯ ದಿಶಾ ಗ್ರಾಮದ ಕಿಶೋರ್ ಕೆ.ಜೈನ್(33), ಮಧ್ಯಪ್ರದೇಶದ ಬರೆ ಗ್ರಾಮದ ರವಿ ಅಲಿಯಾಸ್ ಅರವಿಂದ ಸಿಂಗ್ ಠಾಕೂರ್(23), ರಾಜಸ್ಥಾನದ ಡೋಂಗ್ರಿ ಗ್ರಾಮದ ದಿಲೀಪ್‌ಕುಮಾರ್ ಪುರೋಹಿತ್(25), ಗುಜರಾತ್‌ನ ರಾಜೋಡಾ ಗ್ರಾಮದ ಅರವಿಂದ್ ರಾಜಪುತ್(20), ರಾಜಸ್ಥಾನದ ಡೋಂಗ್ರಿ ಗ್ರಾಮದ ಹರೇಶ್ ಪುರೋಹಿತ್(23) ಹಾಗೂ ಪ್ರಕರಣದ ಮಾಸ್ಟರ್ ಮೈಂಡ್, ಆಭರಣ ತಯಾರಿಕಾ ಘಟಕದಲ್ಲಿ ಚಾಲಕನಾಗಿದ್ದ ಗುಜರಾತ್ ರಾಜ್ಯದ ದಿಶಾ ಗ್ರಾಮದ ಹಾಲಿ ಪಡುವಾರಹಳ್ಳಿ ಗಣಪತಿ ದೇವಾಲಯದ ಬಳಿ ವಾಸವಿದ್ದ ಪರೇಶ್ ಕುಮಾರ್ ಮಾಲಿ(29) ಎಂದು ಗುರುತಿಸಲಾಗಿದೆ. ಪ್ರಕರಣದ ಮೂರನೇ ಆರೋಪಿ ಆದಿ ತೋಮರ್ ಎಂಬಾತ ತಲೆಮರೆಸಿಕೊಂಡಿದ್ದಾನೆ.

ಬೆಳ್ಳಿ ಆಭರಣ ತಯಾರಿಕಾ ಘಟಕದಲ್ಲಿ ನಡೆದ ದರೋಡೆ ಪ್ರಕರಣದಲ್ಲಿ ಒಟ್ಟು 7 ಮಂದಿ ಪಾಲ್ಗೊಂಡಿದ್ದು, ಅವರಲ್ಲಿ ಇಬ್ಬರನ್ನು ಗುಜರಾತ್‌ನಲ್ಲಿ, ಮೂವರನ್ನು ಬೆಂಗಳೂರಲ್ಲಿ ಹಾಗೂ ಮೈಸೂರಲ್ಲಿ ಓರ್ವನನ್ನು ಬಂಧಿಸಿ, ಅವರಿಂದ 18,80 ಲಕ್ಷ ರೂ. ಮೌಲ್ಯದ 16 ಕೆ.ಜಿ.ಬೆಳ್ಳಿ ಪದಾರ್ಥ, ಕೃತ್ಯಕ್ಕೆ ಬಳಸಿದ್ದ ಒಂದು ಥಾರ್ ಜೀಪ್, ಒಂದು ಕ್ರೇಟಾ ಕಾರು, 1 ಪಿಸ್ತೂಲು, 9 ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ನಟೋರಿಯಸ್ ಗ್ಯಾಂಗ್: ಮೈಸೂರಿನ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಗುರುವಾರ ಮಧ್ಯಾಹ್ನ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹೆಬ್ಬಾಳ ಕೈಗಾರಿಕಾ ಪ್ರದೇಶದ ಬೆಳ್ಳಿ ಆಭರಣ ತಯಾರಿಕಾ ಘಟಕದಲ್ಲಿ ಜು.28ರಂದು ಮೂವರು ಕಾಂಪೌಂಡ್ ಹಾರಿ, ಭದ್ರತಾ ಸಿಬ್ಬಂದಿಗೆ ಪಿಸ್ತೂಲ್ ತೋರಿಸಿ ಬೆದರಿಸಿ, ಅವರ ಬಾಯಿಗೆ ಪ್ಲಾಸ್ಟರ್ ಸುತ್ತಿ, ಕೈ–ಕಾಲು ಕಟ್ಟಿ ಒಂದೇ ಕಡೆ ಇರುವಂತೆ ನೋಡಿಕೊಂಡು, ಚಾವಣಿ ಶೀಟ್ ಮುರಿದು ಒಳ ನುಗ್ಗಿ ದೋಚಿದ್ದರು. ಸಿಸಿ ಕ್ಯಾಮರಾದಲ್ಲಿ ಕೇವಲ ಮೂವರು ಮಾತ್ರ ಗೋಚರಿಸಿದ್ದರಿಂದ ಮೊದಲು ರಾಬರಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಎಂದು ತಿಳಿಸಿದರು.

4 ಕೋಟಿ ರೂ. ಮೌಲ್ಯದ ಬೆಳ್ಳಿಯಿತ್ತು: ಆಭರಣ ತಯಾರಿಕಾ ಕೇಂದ್ರದಲ್ಲಿ ಸುಮಾರು 4 ಕೋಟಿ ಮೌಲ್ಯದ 352 ಕೆಜಿ ಬೆಳ್ಳಿಯ ಆಭರಣವಿದ್ದವು. ಡಕಾಯಿತರು ಲಾಕರನ್ನು ಮುರಿಯಲು ತೀವ್ರ ಪ್ರಯತ್ನ ಮಾಡಿದ್ದರೂ, ಅದರಲ್ಲಿದ್ದ ಬೆಳ್ಳಿ ಪದಾರ್ಥ ದೋಚಲು ಸಾಧ್ಯವಾಗಿಲ್ಲ. ಲಾಕರ್ ಹೊರಗೆ ಇದ್ದ ಕೆಲವು ಬೆಳ್ಳಿ ಪದಾರ್ಥ, ವೌಲ್ಡ್, ಬೆಳ್ಳಿ ಆಭರಣ ತಯಾರಿಸಲು ದ್ರವರೂಪದ ಕೆಮಿಕಲ್‌ನಲ್ಲಿ ಇಡಲಾಗಿದ್ದ ಬೆಳ್ಳಿಯ ಹಾಳೆ ಸೇರಿದಂತೆ ಒಟ್ಟು 16 ಕೆಜಿ ಬೆಳ್ಳಿ ಪದಾರ್ಥಗಳನ್ನು ದೋಚಿ ಪರಾರಿಯಾಗಿದ್ದರು ಎಂದು ವಿವರಿಸಿದರು.

ಸುಳಿವು ನೀಡಿದ ಬೆರಳಚ್ಚು: ಘಟನಾ ಸ್ಥಳದಲ್ಲಿ ಸಂಗ್ರಹಿಸಿದ ಮಾಹಿತಿ, ಸಿಸಿ ಕ್ಯಾಮರಾ ದೃಶ್ಯ ಹಾಗೂ ಬೆರಳಚ್ಚಿನ ಸಹಕಾರದಿಂದ ತನಿಖೆ ಆರಂಭಿಸಲಾಗಿತ್ತು. ಅದಕ್ಕಾಗಿ ವಿಶೇಷ ತಂಡವೊಂದನ್ನು ರಚಿಸಲಾಗಿತ್ತು ಈ ವೇಳೆ ಫಿಂಗರ್ ಪ್ರಿಂಟ್ ಬ್ಯೂರೊದಲ್ಲಿ ದೊರೆತ ಮಾಹಿತಿ ಮೇರೆಗೆ ಮೈಸೂರಲ್ಲಿ ದರೋಡೆ ಮಾಡಿದ್ದು, ಗುಜರಾತ್‌ನ ನಟೋರಿಯಸ್ ಗ್ಯಾಂಗ್ ಎಂದು ತಿಳಿದುಬಂತು. ವಿಶೇಷ ತಂಡದ ಪೊಲೀಸರು ಗುಜರಾತ್‌ನಲ್ಲಿ ಒಂದು ವಾರ ಇದ್ದು, ಅಲ್ಲಿನ ಪೊಲೀಸರ ಸಹಕಾರದಿಂದ ಗುಜರಾತ್‌ನಲ್ಲಿ ಇಬ್ಬರು ಅಂತರರಾಜ್ಯ ಡಕಾಯಿತರನ್ನು ಬಂಧಿಸಿ, ವಿಚಾರಣೆಗೊಳಪಡಿಸಿದಾಗ ಈ ಪ್ರಕರಣದಲ್ಲಿ 7 ಮಂದಿ ಭಾಗಿಯಾಗಿರುವುದು ತಿಳಿದುಬಂತು. ಇದರಿಂದ ಈ ಹಿಂದೆ ದಾಖಲಾಗಿದ್ದ ರಾಬರಿ ಪ್ರಕರಣವನ್ನು ದರೋಡೆ ಪ್ರಕರಣವಾಗಿ ಮಾರ್ಪಡಿಸಲಾಯಿತು ಎಂದರು.

ಗುಜರಾತ್‌ನಲ್ಲಿ ಬಂಧಿತರಾದ ಇಬ್ಬರು ಡಕಾಯಿತರು ನೀಡಿದ ಸುಳಿವಿನ ಮೇರೆಗೆ ಮೈಸೂರಿನಲ್ಲಿ ಒಬ್ಬ ಹಾಗೂ ಬೆಂಗಳೂರಿನಲ್ಲಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಓರ್ವ ಆರೋಪಿ ತಲೆಮರೆಸಿಕೊಂಡಿದ್ದು, ಆತನ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಈ ದರೋಡೆ ಪ್ರಕರಣದಲ್ಲಿ ಭಾಗಿಯಾದ 7 ಮಂದಿಯಲ್ಲಿ ಐವರು ಗುಜರಾತ್ ಹಾಗೂ ಇಬ್ಬರು ಮಧ್ಯಪ್ರದೇಶದವರಾಗಿದ್ದಾರೆ ಎಂದು ತಿಳಿಸಿದರು.

ಚಾಲಕನೇ ಮಾಸ್ಟರ್ ಮೈಂಡ್: ಈ ಡಕಾಯಿತಿ ಪ್ರಕರಣದಲ್ಲಿ ಫ್ಯಾಕ್ಟರಿಯ ಮಾಲೀಕನ ಕಾರು ಚಾಲಕನೇ ಮಾಸ್ಟರ್ ಮೈಂಡ್. ಗುಜರಾತ್ ಮೂಲದವನಾಗಿರುವ ಈತ ಇನ್ಸ್ಟಾಗ್ರಾಂನಲ್ಲಿ ಸಕ್ರಿಯನಾಗಿದ್ದಾನೆ. ತನ್ನೂರಿನ ಕುಖ್ಯಾತ ದರೋಡೆಕೋರನಿಗೆ ಮೆಸೇಜ್ ಮಾಡಿ, ನಾನು 50 ಲಕ್ಷ ರೂ. ಸಾಲ ಮಾಡಿಕೊಂಡಿದ್ದೇನೆ. ಡೀಲೊಂದನ್ನು ನೀಡುವುದಾಗಿ ಹೇಳಿ ನೆರವು ನೀಡುವಂತೆ ಕೋರಿದ್ದಾನೆ.

ಮೂರು ಪ್ಲಾನ್: ದರೋಡೆ ಪ್ರಕರಣಕ್ಕೆ ಮಾಸ್ಟರ್ ಮೈಂಡ್ ಚಾಲಕ ಮೂರು ಪ್ಲಾನ್ ಮಾಡಿದ್ದ. ಅದಕ್ಕಾಗಿ ತಾನು ಚಾಲನೆ ಮಾಡುವ ವಾಹನದ ನಕಲಿ ಬೀಗವನ್ನು ಮಾಡಿಸಿಕೊಂಡಿದ್ದ. ಬೆಳ್ಳಿ ಪದಾರ್ಥವನ್ನು ತರುವಾಗ ದಾರಿ ಮಧ್ಯೆ ಮಾಹಿತಿ ನೀಡುತ್ತೇನೆ. ತನ್ನ ಬಳಿಯಿರುವ ನಕಲಿ ಬೀಗ ಬಳಸಿ, ವಾಹನದಲ್ಲಿರುವ ಬೆಳ್ಳಿ ಪದಾರ್ಥ ದೋಚುವಂತೆ ಹೇಳಿದ್ದ ಮತ್ತೊಂದು ಪ್ಲಾನ್‌ನಂತೆ ನಕಲಿ ಬೀಗ ಬಳಸಿ ಇಡೀ ವಾಹನವನ್ನೇ ಅಪಹರಿಸಿಕೊಂಡು ಹೋಗುವಂತೆಯೂ ತಿಳಿಸಿದ್ದ. ಆದರೆ, ಈ ಎರಡೂ ಪ್ಲಾನ್ ಅನ್ನು ಖದೀಮರ ಗ್ಯಾಂಗ್ ತಿರಸ್ಕರಿಸಿ, ಆಭರಣ ತಯಾರಿಕಾ ಘಟಕದಿಂದಲೇ ದೋಚುವುದಾಗಿ ತಿಳಿಸಿತ್ತು. ಇದರಿಂದ ಪ್ರಕರಣದ ಎ–2 ಆರೋಪಿಯೊಂದಿಗೆ ಸಂಚು ರೂಪಿಸಿ ಎ–3 ರಿಂದ ಎ–7 ಸೇರಿಕೊಂಡು ಫ್ಯಾಕ್ಟರಿಯಲ್ಲಿ ದರೋಡೆ ಮಾಡಿರುವುದು ತನಿಖೆಯಿಂದ ತಿಳಿದು ಬಂದಿದೆ. ಎ–2 ಆರೋಪಿಯ ವಿರುದ್ಧ ಗುಜರಾತ್ ರಾಜ್ಯದಲ್ಲಿ 30ಕ್ಕೂ ಹೆಚ್ಚು ದರೋಡೆ, ಸುಲಿಗೆ ಹಾಗೂ ಅಕ್ರಮ ಆಯುಧ ಸಂಗ್ರಹ ಪ್ರಕರಣಗಳು ದಾಖಲಾಗಿವೆ ಎಂದು ತಿಳಿಸಿದರು.

ಸಲಕರಣೆಯೂ ಬೇಡ ಎಂದಿದ್ದ: ಮಾಸ್ಟರ್ ಮೈಂಡ್ ಚಾಲಕ ದರೋಡೆ ಮಾಡಲು ಬೇಕಾದ ಕಟರ್, ರಾಡ್ ಸೇರಿದಂತೆ ಎಲ್ಲವೂ ಫ್ಯಾಕ್ಟರಿಯಲ್ಲಿಯೇ ಇದ್ದು, ಕಳವು ಮಾಡಲು ಬೇಕಾದ ಯಾವ ಸಲಕರಣೆಯನ್ನು ತರದಂತೆ ಸಲಹೆ ನೀಡಿದ್ದ. ಈ ಕಾರಣದಿಂದಲೇ ಆರೋಪಿಗಳು ಆಭರಣ ತಯಾರಿಕಾ ಘಟಕದಲ್ಲಿದ್ದ ಸಲಕರಣೆಯನ್ನೇ ದರೋಡೆಗೆ ಬಳಸಿದ್ದರು ಎಂದು ತಿಳಿಸಿದರು.

ಪ್ರಶಂಸೆ: ಇದೇ ವೇಳೆ ಪ್ರಕರಣ ಭೇದಿಸಿದ ವಿಜಯನಗರ ಉಪ ವಿಭಾಗದ ಎಸಿಪಿ ಪಿ.ರವಿಪ್ರಸಾದ್, ಹೆಬ್ಬಾಳ್ ಠಾಣೆಯ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ್, ಸಬ್‌ಇನ್ಸ್‌ಪೆಕ್ಟರ್ ಪ್ರವೀಣ್ ಕುಮಾರ್, ಕೀರ್ತಿ ಸೇರಿದಂತೆ ತಂಡದಲ್ಲಿ ಭಾಗಿಯಾದ ಎಲ್ಲ ಸಿಬ್ಬಂದಿಗೆ ಪ್ರಶಂಸನಾ ಪತ್ರ ನೀಡಿದರು. ಈ ವೇಳೆ ಡಿಸಿಪಿಗಳಾದ ಬಿಂದುಮಣಿ, ಸುಂದರ್‌ರಾಜ್ ಇದ್ದರು.

ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿದ್ದ 71 ವರ್ಷದ 'ಪದ್ಮಾವತಿ' ಆನೆ ಸಾವು



ಮೈಸೂರು ಮೃಗಾಲಯದ ಶ್ರೀ ಚಾಮುಂಡಿ ವನ್ಯಜೀವಿ ಪುನರ್ವಸತಿ ಕೇಂದ್ರದಲ್ಲಿ ಸ್ವಚ್ಛಂದವಾಗಿದ್ದ 'ಪದ್ಮಾವತಿ'.

ಮೈಸೂರು, ಆ.14(ಎಸ್‌ಬಿಡಿ)– ಅರ್ಧ ಶತಮಾನ ಮೈಸೂರು ಮೃಗಾಲಯದಲ್ಲಿದ್ದು, ಕೆಲ ವರ್ಷಗಳಿಂದ ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿದ್ದ ಸುಮಾರು 71 ವರ್ಷದ 'ಪದ್ಮಾವತಿ' ಆನೆಯು ಗುರುವಾರ ಸಂಜೆ ಸಾವನ್ನಪ್ಪಿದೆ.

ನಿನ್ನೆವರೆಗೂ ಆನೆಯ ಆರೋಗ್ಯ ಸ್ಥಿರವಾಗಿತ್ತಾದರೂ ವಯೋವೃದ್ಧತೆ ಸಂಬಂಧಿತ ಲಕ್ಷಣಗಳಿದ್ದವು. ಇಂದು ಬೆಳಗ್ಗೆಯಿಂದ ಮೇಲೇಳಲು ಸಾಧ್ಯವಾಗದೆ ಮಲಗಿದ್ದ ಸ್ಥಿತಿಯಲ್ಲೇ ಇತ್ತು. ಈ ಮಧ್ಯೆ ಮೈಸೂರು ಮೃಗಾಲಯದ ಪಶುವೈದ್ಯ ತಂಡ, ಅಗತ್ಯ ವೈದ್ಯಕೀಯ ಪರೀಕ್ಷೆಗಳು ಮತ್ತು ಸಹಾಯಕ ಚಿಕಿತ್ಸೆಯೊಂದಿಗೆ ಆನೆಯ ಆರೈಕೆ ಪ್ರಾರಂಭಿಸಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಪದ್ಮಾವತಿ, ಸಂಜೆ 5.10ರ ವೇಳೆಗೆ ಕೊನೆಯುಸಿರೆಳೆದಳು. ಸಾವಿಗೆ ನಿಖರ ಕಾರಣ ತಿಳಿಯಲು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಅಂತ್ಯಕ್ರಿಯೆ ನಡೆಸಲು ನಿರ್ಧರಿಸಲಾಗಿದೆ.

ಮೃಗಾಲಯದ ಹಿರಿಯ ಸದಸ್ಯೆ: ಖೆಡ್ಡಾ ಕಾರ್ಯಾಚರಣೆಯಲ್ಲಿ 1973ರಲ್ಲಿ ರಕ್ಷಿಸಲ್ಪಟ್ಟ ಸುಮಾರು 20 ವರ್ಷದ ಹೆಣ್ಣಾನೆಗೆ 'ಪದ್ಮಾವತಿ' ಎಂದು ಹೆಸರಿಡಲಾಗಿತ್ತು. ನಂತರ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ ಸೇರಿ, 53 ವರ್ಷಗಳ ಕಾಲ ಪ್ರಾಣಿಪ್ರಿಯ ವೀಕ್ಷಕರನ್ನು ಆಕರ್ಷಿಸಿತ್ತು. 1979ರಲ್ಲಿ ಗಜಲಕ್ಷ್ಮೀ (ಪ್ರಸ್ತುತ ಮೃಗಾಲಯದಲ್ಲಿದೆ), 1996ರಲ್ಲಿ ಕೋಮಲ ಹಾಗೂ 2004ರಲ್ಲಿ ಅಭಿಮನ್ಯು ಆನೆಗೆ ಜನ್ಮ ನೀಡಿದ ಪದ್ಮಾವತಿಯೇ ಮೃಗಾಲಯದ ಇತಿಹಾಸದಲ್ಲಿ ಅತ್ಯಂತ ಹಿರಿಯ ಆನೆಯಾಗಿದ್ದು ವಿಶೇಷ.

ವಯಸ್ಸಾಗಿದ್ದ ಪದ್ಮಾವತಿ ಆನೆಗೆ ಪ್ರಶಾಂತ ವಾತಾವರಣದ ಅಗತ್ಯವಿರುವುದನ್ನು ಮನಗಂಡು, ನಾಲ್ಕು ವರ್ಷಗಳ ಹಿಂದೆಯಷ್ಟೇ ಕೂರ್ಗಳ್ಳಿಯ ಶ್ರೀ ಚಾಮುಂಡಿ ವನ್ಯಜೀವಿ ಸಂರಕ್ಷಣೆ, ರಕ್ಷಣೆ ಹಾಗೂ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು. ಮೃಗಾಲಯ ವೀಕ್ಷಕರಿಂದ ದೂರವಿದ್ದು ಅಲ್ಲಿನ ವಿಶಾಲವಾದ ನೈಸರ್ಗಿಕ ವಾತಾವರಣದಲ್ಲಿ ಸ್ವಚ್ಛಂದವಾಗಿತ್ತು.

ಐದು ದಶಕಗಳಿಂದ ಮೃಗಾಲಯದ ವೀಕ್ಷಕರು, ವನ್ಯಜೀವಿ ಪ್ರೇಮಿಗಳು ಹಾಗೂ ಮೃಗಾಲಯ ಸಿಬ್ಬಂದಿ ಹೃದಯದಲ್ಲಿ ವಿಶೇಷ ಸ್ಥಾನ ಪಡೆದಿದ್ದ 'ಪದ್ಮಾವತಿ' ಆನೆಯ ಸಾವಿಗೆ ಮೈಸೂರು ಮೃಗಾಲಯವು ತೀವ್ರ ಸಂತಾಪ ವ್ಯಕ್ತಪಡಿಸಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆ.19ಕ್ಕೆ ವಿಶ್ವ ಛಾಯಾಗ್ರಹಣ ದಿನಾಚರಣೆ

ಮೈಸೂರು, ಆ.14(ಎಂಕೆ)– ಮೈಸೂರಿನ ಕಲಾಮಂದಿರದ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಆ.19 ರಂದು ಬೆಳಗ್ಗೆ 11.30ಕ್ಕೆ ವಿಶ್ವ ಛಾಯಾಗ್ರಹಣ ದಿನಾಚರಣೆ ಹಾಗೂ ಕರ್ನಾಟಕ ಪ್ರಾಚೀನ ದೇವಾಲಯಗಳ ಕುರಿತ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಛಾಯಾಚಿತ್ರ ಕಲಾವಿದ ಟಿ.ಕೆಂಪಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಪ.ಸಂಪತ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಆಗಮಿಸಲಿದ್ದಾರೆ. ನ್ಯೂ ಬಿಸಿನೆಸ್ ಸಿಇಓ ಜಿ.ರಾಜಗೋಪಾಲಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಹಾಗೆಯೇ ವಿಶ್ವ ಛಾಯಾಗ್ರಹಣ ದಿನಾಚರಣೆ ಅಂಗವಾಗಿ ಮೈಸೂರು ಛಾಯಾಗ್ರಾಹಕರ ಸಂಘದ ಹಿರಿಯ ಸದಸ್ಯರಾದ ರಾಮ್‌ಪ್ರಸಾದ್, ಎಸ್.ತಿಪ್ಪೇಸ್ವಾಮಿ, ಜಂಬುಕೇಶ್ವರ, ಜಗದೀಶ್ ಹಾಗೂ ಮೈಸೂರು ಪತ್ರಿಕಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕೂಲಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಾರ್ –2 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾರ್–2 (ಹಿಂ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.


ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಆರೋಗ್ಯ ಸುಧಾರಣೆಗೆ ಯೋಗ ಪರಿಣಾಮಕಾರಿ

ರಾಷ್ಟ್ರೀಯ ವೈದ್ಯಕೀಯ ಆಯೋಗದ ಮಾಜಿ ಅಧ್ಯಕ್ಷ ಡಾ.ಬಿ.ಎನ್.ಗಂಗಾಧರ್ ಅಭಿಮತ



ಮಾನಸ ಯೋಗ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಎನ್‌ಎಂಸಿ ಮಾಜಿ ಅಧ್ಯಕ್ಷ ಡಾ.ಬಿ.ಎನ್.ಗಂಗಾಧರ್ ಉದ್ಘಾಟಿಸಿದರು.

ಮೈಸೂರು, ಆ.14(ಎಂಕೆ)– ಆರೋಗ್ಯದ ಎಲ್ಲಾ ಕ್ಷೇತ್ರದಲ್ಲಿಯೂ ಯೋಗ ಬಹಳ ನಿರ್ಣಾಯಕ ಪಾತ್ರ ವಹಿಸುತ್ತಿದ್ದು, ನಾವು(ವೈದ್ಯರು) ನೀಡುವ ಚಿಕಿತ್ಸೆಯನ್ನು ದ್ವಿಗುಣ ಮಾಡುವ ಶಕ್ತಿ ಯೋಗಕ್ಕಿದೆ ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗ(ಎನ್‌ಎಂಸಿ)ದ ಮಾಜಿ ಅಧ್ಯಕ್ಷ ಡಾ.ಬಿ.ಎನ್.ಗಂಗಾಧರ್ ಹೇಳಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಆಯುಷ್ ಇಲಾಖೆ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಸಹಯೋಗದೊಂದಿಗೆ ಆಯೋಜಿಸಿದ್ದ ಮಾನಸ ಯೋಗ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದಲ್ಲಿಯೇ ಯೋಗಕ್ಕೆ ವಿಶೇಷ ಮಾನ್ಯತೆ ಸಿಕ್ಕಿದೆ ಎಂದರು.

ಕಳೆದ 10 ವರ್ಷಗಳಿಂದ ಅಂತರ ರಾಷ್ಟ್ರೀಯ ಯೋಗ ದಿನ ಆಚರಿಸಲಾಗುತ್ತಿದ್ದು, ವಿಶ್ವಸಂಸ್ಥೆ ಸಂಪೂರ್ಣ ಸಹಮತ ನೀಡಿದೆ. ಯೋಗಕ್ಕೆ ವಿಶ್ವ ಮಾನ್ಯತೆ ದೊರೆಯುವುದಕ್ಕೂ ಮುಂಚೆ ಭಾರತದಿಂದ ಅತೀ ಹೆಚ್ಚು ವೈಜ್ಞಾನಿಕ ಸಂಶೋಧನಾ ಲೇಖನಗಳು ಬರುತ್ತಿದ್ದವು. ಆದರೆ, ಕಳೆದ ಹತ್ತು ವರ್ಷಗಳಲ್ಲಿ ಯೋಗ ಕುರಿತ ಆಸಕ್ತಿ ಹೆಚ್ಚಾದಂತೆ ಬೇರೆ ಬೇರೆ ದೇಶಗಳಿಂದ ಸಂಶೋಧನಾ ಲೇಖನಗಳು ಹೊರಬರುತ್ತಿದ್ದು, ಅಮೆರಿಕಾ ಮೊದಲ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಕೆಲ ವರ್ಷಗಳಿಂದ ಅನೇಕ ವೈದ್ಯಕೀಯ ಸಂಸ್ಥೆಗಳು ಯೋಗವನ್ನು ತಮ್ಮ ಪಠ್ಯದೊಂದಿಗೆ ಜೋಡಿಸಿಕೊಂಡಿವೆ. ಕ್ಯಾನ್ಸರ್ ಕೇಂದ್ರಗಳಲ್ಲಿಯೂ ರೋಗಿಗಳ ಮಾನಸಿಕ ಸ್ವಾಸ್ಥ್ಯ ಕಾಪಾಡಲು ಯೋಗವನ್ನು ಅಳವಡಿಸಿಕೊಳ್ಳಲಾಗಿದ್ದು, ಆರೋಗ್ಯ ಸುಧಾರಣೆಗೆ ಯೋಗ ಪರಿಣಾಮಕಾರಿಯಾಗಲಿದೆ ಎಂದು ತಿಳಿಸಿದರು.

ಇದೇ ವೇಳೆ ಎಂಎಂಸಿ ಅಂಡ್ ಆರ್‌ಐ ಮನೋರೋಗ ವಿಭಾಗ ಮುಖ್ಯಸ್ಥ ಡಾ.ಬಿ.ಎನ್.ರವೀಶ್ ರಚಿತ ಮನೋವಿಕಾಸ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದ ಗೌಡ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಲಕ್ಷ್ಮಿನಾರಾಯಣ ಶೆಣೈ ಮತ್ತಿತರರಿದ್ದರು.

50ಕ್ಕೂ ಅಧಿಕ ಗರ್ಭಿಣಿಯರಿಗೆ ಸಾಮೂಹಿಕ ಸೀಮಂತ ಕಾರ್ಯಕ್ರಮ



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆವರಣದಲ್ಲಿ ಗರ್ಭಿಣಿ ಸ್ತ್ರೀಯರಿಗೆ ಸಾಮೂಹಿಕ ಸೀಮಂತ ಕಾರ್ಯಕ್ರಮ ನಡೆಯಿತು.

ಮೈಸೂರು, ಆ.14(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆವರಣದಲ್ಲಿ 50ಕ್ಕೂ ಹೆಚ್ಚು ಗರ್ಭಿಣಿಯರಿಗೆ ಸಾಮೂಹಿಕ ಸೀಮಂತ ಕಾರ್ಯಕ್ರಮ ನಡೆಯಿತು.

ದುರ್ಗಾ ಫೌಂಡೇಶನ್ ಮತ್ತು ಕೆ.ವಿ.ಕೆ. ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಗರ್ಭಿಣಿ ಸ್ತ್ರೀಯರ ಮಡಿಲು ತುಂಬಿದ ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆ ಉಪಾಧ್ಯಕ್ಷರಾದ ಡಾ.ಪುಷ್ಪಾ ಅಮರನಾಥ್ ಶುಭ ಕೋರಿದರು.

ಬಳಿಕ ಮಾತನಾಡಿದ ಅವರು, ಗರ್ಭಿಣಿ ಸ್ತ್ರೀಯರು ಈ ಸಂದರ್ಭದಲ್ಲಿ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು. ದೈಹಿಕ ಮತ್ತು ಮಾನಸಿಕ ಆರೋಗ್ಯವೂ ಬಹಳ ಮುಖ್ಯವಾಗಿದ್ದು, ಯಾವುದೇ ಕಾರಣಕ್ಕೂ ಆತಂಕಕ್ಕೆ ಒಳಗಾಗಬಾರದು. ರಾಜ್ಯ ಸರ್ಕಾರದಿಂದ ಗರ್ಭಿಣಿ ಸ್ತ್ರೀಯರಿಗೆ ಸಾಕಷ್ಟು ಸೌಲಭ್ಯಗಳಿದ್ದು, ಸದ್ಬಳಕೆ ಮಾಡಿಕೊಳ್ಳಬೇಕು. ಅಲ್ಲದೆ ಹೆಣ್ಣಾಗಲೀ, ಗಂಡಾಗಲೀ ಸಮಾನವಾಗಿ ಕಂಡು ವಿದ್ಯಾಭ್ಯಾಸ ಕೊಡಿಸಿ ಎಂದು ತಿಳಿಸಿದರು.

ಸೌಮ್ಯ ಅನಿಲ್ ಚಿಕ್ಕಮಾದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಬಸವರಾಜ್, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಇಂದಿರಾಗಾಂಧಿ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮುಖಂಡರಾದ ಜಿ ರಾಘವೇಂದ್ರ, ಕೆವಿಕೆ ಫೌಂಡೇಶನ್ ಅಧ್ಯಕ್ಷೆ ಖುಷಿ ವಿನು, ಕಾವ್ಯ, ಮಂಜುಳಾ ಮತ್ತಿತರರಿದ್ದರು.

ತ್ರಿವರ್ಣ ಧ್ವಜ ಬಿಸಾಡಿದ ವ್ಯಕ್ತಿ ವಿರುದ್ಧ ಆಕ್ರೋಶ

ಮೈಸೂರು, ಆ.14(ಎಸ್‌ಬಿಡಿ)– ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ತಿರಂಗ ಹಾಗೂ ತಮ್ಮ ಫೋಟೋ ಸಹಿತ ಮೊಬೈಲ್ ಸ್ಟೇಟಸ್ ಸೃಜಿಸುವ ಆಪ್‌ವೊಂದರ ಪ್ರಚಾರದ ಭರದಲ್ಲಿ ಯುವಕ ನೊಬ್ಬ ತ್ರಿವರ್ಣ ಧ್ವಜವನ್ನು ಪಾದರಕ್ಷೆ ಮೇಲೆ ಬಿಸಾಡಿದ ವಿಡಿಯೋ ವೈರಲ್ ಆಗಿದ್ದು, ದೇಶದ ಧ್ವಜ ಅವಮಾನಿಸಿದ ವ್ಯಕ್ತಿ ಹಾಗೂ ಆಪ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ಆಗ್ರಹಿಸಿದೆ. ಈ ಸಂಬಂಧ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಮನವಿ ಸಲ್ಲಿಸಿದ ಸಂಘಟನೆ ಪದಾಧಿಕಾರಿಗಳಾದ ನವೀದ್ ಪಾಷಾ, ರಿಜ್ವಾನ್ ಪಾಷಾ, ಗುರುಪ್ರಸಾದ್ ಹಾಗೂ ತನ್ವೀರ್, ರಾಷ್ಟ್ರಧ್ವಜಕ್ಕೆ ಅವಮಾನಿಸಿರುವ ಕ್ರಾಫ್ಟೋ ಆಪ್ (CraftoApp) ಸಂಸ್ಥೆ ಹಾಗೂ ಧ್ವಜವನ್ನು ಚಪ್ಪಲಿ ಮೇಲೆ ಬಿಸಾಡಿ ಅವಮಾನಿಸಿರುವ ವ್ಯಕ್ತಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳ ಬೇಕು. ದೇಶದ ಘಟನೆಗೆ ಧಕ್ಕೆ ತರುವ ಇಂತಹ ಆನ್‌ಲೈನ್ ಸಂಸ್ಥೆಗಳನ್ನು ನಿರ್ಬಂಧಿಸಬೇಕು ಎಂದು ಒತ್ತಾಯಿಸಿದರು.



ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ವತಿಯಿಂದ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಲಾಯಿತು.

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ. ಸಂಬಳ: 25,000 ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.

8548089469/9164946160

ನಿವೇಶನ ಮಾರಾಟಕ್ಕೆ ಇದೆ

ರೂಪ ನಗರ, N/E (North-East corner), 40 ಅಡಿ ರಸ್ತೆ, (30x60).

Mob: 8884616461 8073300783

ನಿವೇಶನ ಮಾರಾಟಕ್ಕೆ ಇದೆ

ವಿಜಯನಗರ 4ನೇ ಹಂತ, ಕಲ್ಯಾಣಿ ಬಡಾವಣೆಗೆ ಸೇರಿದಂತೆ ಪೂರ್ವಕ್ಕೆ ಎದುರಾಗಿರುವ 40 ಅಡಿ ರಸ್ತೆಗೆ ಹೊಂದಿಕೊಂಡಿದೆ. (30x40).

Mob: 8884616461 8073300783

SITE FOR SALE

40x23 North facing site for sale in Panchacharya Layout, attached to Vijayanagar 4th Stage. Total 900 sq.ft. Rs. 5750 / sq.ft. Call:

Mob: 8884616461 8073300783

Site For Sale

30x40 in Gate way of Mysore. Mysore-Bangalore main road, Next to Manipal Hospital.

Price : 71 Lakh Only

Mob: 8073280019

JOB OPENING

OFFICE ADMINISTRATOR

Graduate with 3-5 years experience with Good English Communication Skills and Knowledge of MS office.

Email: connect@dtri.in

www.dtri.in

Contact:- 63600 07358

7ನೇ ವರ್ಷದ ಸವಿನೆನಪು



ತಮ್ಮಯ್ಯ ನಾಯಕ

ಮಾಜಿ ಗ್ರಾ.ಪಂ ಸದಸ್ಯರು, ತಮ್ಮಡಹಳ್ಳಿ

ದುಃಖತಪ್ತರು: ಪತ್ನಿ ರಾಜಮ್ಮ, ಮಕ್ಕಳಾದ ದ್ಯಾವಪ್ಪನಾಯಕ ಅಧ್ಯಕ್ಷರು, ಕಾನಾಯಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಮೈಸೂರು, ರವಿನಾಯಕ ಗುತ್ತಿಗೆದಾರರು, ಮಂಜುನಾಯಕ & ಸೊಸೆಯಂದಿರು, ಮೊಮ್ಮಕ್ಕಳು ಅಪಾರ ಬಂಧು ಬಳಗದವರು

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

Telecom Layout

40x60 East Face Site Two Adjacent for Sale @ Rs. 62 Lakhs

Beside Acharya Vidya Kula School, Before Yelwala, Near Huyilalu Off. Hunsur Road, Mysore

Call: 99649 23399

FACULTY REQUIRED

FOR SSLC

Social, Kannada, English, Hindi, Maths, Science

FOR PUC

Business Studies, Accontancy, Economics and Geography

AACHARYA INSTITUTE OF EDUCATION

Gnana Ganga Vidya Peeta Campus Kuvempunagara, Mysore

Contact: 9901313403

G9 projects / Vee2 Developers

MUDA APPROVED Khata Ready

SHOURYA LAYOUT

ADJOINING VIJAYANAGAR 4TH STAGE

20X30 Site ₹ 27 LAKHS ONLY

HERITAGE CITY

NEAR NEW MYSURU NANJANGUD HIGHWAY

OWN 20x30 site

PAY ₹ 2 LAKHS ONLY Rest With Installments

8088-707-707

Aquaguard & Kent Water Purifier

Sales & Service

9901200444

#319, Near Mega Medical Store, Kuvempunagar



HOME SPACE MART


DESIGNED TO MAKE EVERY SPACE BEAUTIFUL

2 BHK HOME INTERIORS @ ₹2.9 LAKHS

HOME SPACE MART

Kushalnagar • Mysuru • Bengaluru

For Site Visit : 91089 23123



SITES FOR SALE

ವ್ಯಾಲ್ಯೂ ಸ್ಪೇಸ್ ಮೈಸೂರು ಭವಿಷ್ಯದ ಮೇಲೆ ಹೂಡಿಕೆ ಮಾಡಿ

VALUE SPACE TRUST • INTEGRITY • EXCELLENCE

ಎಟರ್ನಿಯಾ

ಪ್ರೀಮಿಯಂ MUDA ಅನುಮೋದಿತ ನಿವೇಶನಗಳು

HANCHYA MYSURU

MUDA APPROVED

CALL : 7992799205 / 9999977009

RERA NO : PRM/KA/RERA/1268/378/PR/290525/007793

JOCKEY



FACTORY SECONDS UPTO 50% OFF*

*T & C apply

10 am to 8 pm · Open All Days · Master / Visa Card Accepted

INNERWEAR • LEISUREWEAR • ACTIVEWEAR • KIDSWEAR • SOCKS

Venue In Mysore

JLB Road — The Institution Of Engineers (Auditorium Hall), Jhansi Lakshmibai Road - 5

Org. by: Surya Agency Pvt. Ltd.

ನಿಸರ್ಗ ಇಕೋ ಪ್ಯಾರಡೈಸ್

HP

DEVELOPED PLOTS

ONE OF THE HIGHTECH LAYOUT IN MYSURU

50 ACRES TOWNSHIP PROJECT

ಬುಕ್ಕಿಂಗ್ ತೆರೆದಿದೆ: 30X40 | 30X50 40X60

ತಕ್ಷಣ ಕ್ರಯ

ಎಲ್ಲಾ ಸೌಲಭ್ಯಗಳನ್ನೊಳಗೊಂಡಿರುವ

ಬ್ಯಾಂಕ್ ಸಾಲ ಸೌಲಭ್ಯವಿದೆ

LIC HFL · HDFC BANK · ICICI Bank

ಹೈಲ್ಯಾಂಡ್ ಪ್ರಾಪರ್ಟೀಸ್

ಹುಣಸೂರು- ಮೈಸೂರು ಮುಖ್ಯ ರಸ್ತೆ, ಮೈಸೂರು

95133 01854 88840 71010

NOT GETTING YOUR STAR OF MYSORE & ಮೈಸೂರು ಮಿತ್ರ


Call: 98452-96447 / 99003-82840

ಈ ವಿಶೇಷ ಕೊಡುಗೆ ಕೇವಲ

ಮೋಹನ್ ಭಂಡಾರ್®

ಸಯ್ಯಾಜಿ ರಾವ್ ರಸ್ತೆಯಲ್ಲಿ ಮಾತ್ರ

ಖರೀದಿಸಿ 1 ಉಚಿತವಾಗಿ ಪಡೆಯಿರಿ 1



₹6670 ₹4930 ರಿಯಾಯಿತಿ ದರ

2.0ಲೀ ಟ್ರೈ ಪ್ಲೈ ಕುಕ್ಕರ್

5.0ಲೀ ಟ್ರೈ ಪ್ಲೈ ಕುಕ್ಕರ್

VINOD TRI-PLY COOKER

ಸಯ್ಯಾಜಿ ರಾವ್ ರಸ್ತೆ | +91 9606 233 433 | ನಾವು ಯಾವುದೇ ಶಾಖೆಯನ್ನು ಹೊಂದಿಲ್ಲ

GEETHANJALI EDUCATION SOCIETY ®

GEETHANJALI INTERNATIONAL GLOBAL SCHOOL

CA-7, BEML Layout, 2nd stage Srirampura, Mysuru-570 023.

Email: geethanjalieducationsociety@gmail.com

Contact: 0821-2420374 / 98442 91521

INVITE APPLICATIONS FOR THE FOLLOWING POSITIONS

(Immediate Joiners Only)

POSTS	QUALIFICATION
Pre - School Teachers (Female)	NST/ D.Ed / Degree
Office Admin (Female)	Any Degree with the Knowledge of Spoken English and Computer Skills

Interview on : 16.08.2025

Timing : 1:00 pm to 5:00 pm

Place : School Premises

mysurae

KALENI SILK INDUSTRY

FACTORY SALE

ಅಪ್ಪಟ ಚಿನ್ನದ ಜರಿಯ ಸೀರೆಗಳು

100% PURE SILK / GOLD ZARI SAREES

UP TO 30% DISCOUNT

Woven on traditional looms exclusively with pure silk from the historic region of Mysore.

KALENI SILK INDUSTRY

#263, Hebbal Industrial Area, Opp. to Annapurna Aahar Hotel, Mysore-570018

9019949145 / 9845817295 / 9019348989



NAMMANE CONSTRUCTIONS

NAMMANE CONSTRUCTIONS IS HIRING

Accounts Manager

We're looking for an experienced Accounts Manager to lead end-to-end finance, compliance, and project accounting.

Experience: 5–8 years (Construction / Real Estate preferred)

Must-Have: Tally Prime, GST/TDS Returns, MIS, Vendor & Project Costing, Audits, Payroll, Banking.

Senior Document Writer

We are seeking an experienced Senior Document Writer to lead the drafting, formatting, and management of all business-critical documents across projects and departments.

Experience: 3-5 years (Construction/Real Estate preferred)

Must-Have: Excellent written communication in English and Kannada; fast and accurate typing in both languages. Strong MS Office skills. Working knowledge of legal/contract terminology and documentation standards.

How to Apply

E-mail your CV to **hr@nammaneconstructions.in** with subject **"Accounts Manager"** or **"Senior Document Writer"**, or

Call Alfred – **95352-16060**

Joining: Immediate/30 days | CTC: Best in industry